ಜನಶಕ್ತಿ

ಪ್ರಗತಿಶೀಲ ಕನ್ನಡ ವಾರಪತ್ರಿಕೆ
ಸಂಪುಟ 6 ಸಂಚಿಕೆ 12
೧೯ ಜನವರಿ ೧೯೫೮
★
ಪುಟ ೧೦ ಬೆಲೆ: ೧೩ ನ. ಪೈಸೆ

★

ತಲೆಯೆತ್ತಿರುವ ಭಾಷಾಸಮಸ್ಯೆ ಸೌಹಾರ್ದತೆಯಿಂದ ಪರಿಹಾರವಾಗಲಿ!

ರಾಷ್ಟ್ರಭಾಷಾ ಕಮಿಶನಿನ ವರದಿಯ ಪ್ರಕಟನೆಯೊಡನೆ ದೇಶದ ಆದ್ಯಂತವಾಗಿ ತೀವ್ರವಾದ ವಾದವಿವಾದ ಎದ್ದು, ಅದೊಂದು ಘೋರ ಸಮಸ್ಯೆಯ ರೂಪ ತಾಳಿದೆ.

ಹಲವು ಪ್ರಾಮುಖ್ಯವಾದ ಮತ್ತು ಅವಸರದ ಪ್ರಶ್ನೆಗಳಲ್ಲಿ ಎಲ್ಲರ ಗಮನ ಕೇಂದ್ರೀಕರಿಸಬೇಕಾಗಿರುವ, ಎಲ್ಲರ ಪ್ರಯತ್ನ ವಿನಿಯೋಗಿಸಬೇಕಾಗಿರುವ, ಈ ಸಂದರ್ಭದಲ್ಲಿ ಜನರ ದೃಷ್ಟಿಯನ್ನು, ಕ್ರಿಯಾಶಕ್ತಿಯನ್ನು, ಅಡ್ಡದಾರಿಗೆ ತಿರುಗಿಸಲು ಕೆಲವರು ಈ ಸಮಸ್ಯೆಯನ್ನು ಉಪಯೋಗಿಸುವುದು ಶೋಚನೀಯ.

ಹಾಗನ್ನುವಾಗ, ಭಾಷಾ ಪ್ರಶ್ನೆಯ ಮಹತ್ವವನ್ನು ನಾವೇನೂ ಕಡೆಗಾಣಿಸುವುದಿಲ್ಲ. ಅದೊಂದು ಗಂಭೀರ ವಿಷಯ. ಆದುದರಿಂದಲೇ ಅದನ್ನು ಭಾವಾತಿರೇಕಕ್ಕೆ ಎಡೆಕೊಡದೆ, ತಾಳ್ಮೆಯಿಂದಲೂ ಸೌಹಾರ್ದತೆಯಿಂದಲೂ ಬಗೆಹರಿಸಬೇಕು. ದೇಶದ ಪಕ್ಷ ಪಂಗಡಗಳು, ಪ್ರಭಾವಶಾಲಿ ನಾಯಕರು, ಹಿಂದಿಯನ್ನಾಡುವ ಮತ್ತು ಬೇರೆ ಭಾಷೆಗಳನ್ನಾಡುವ ಜನರು ಉದ್ವೇಗಕ್ಕೆ ಬಲಿಯಾಗದೆ, ಪರಸ್ಪರ ವೈಷಮ್ಯದ ಉರಿಹಚ್ಚದೆ ವಿಚಾರ ವಿನಿಮಯದ ಮೂಲಕ ತೀರ್ಮಾನಿಸಬೇಕು.

ಹಿಂದಿಯು ರಾಷ್ಟ್ರಭಾಷೆ ಎಂದು ನಮ್ಮ ಘಟನೆಯಲ್ಲೇ ಅಂಗೀಕರಿಸಲ್ಪಟ್ಟಿದೆ. ನಮ್ಮದೇ ಆದ ಒಂದು ರಾಷ್ಟ್ರಭಾಷೆ ನಮಗೆ ಬೇಕು. ನಮ್ಮ ನೆಲದಲ್ಲಿ, ನಮ್ಮ ಸಂಸ್ಕೃತಿಯಲ್ಲಿ ಚಿಗುರಿ ಬೆಳೆದಿರುವ ಒಂದು ಭಾಷೆ ಹಿಂದಿ. ನಮ್ಮ ಜನರು ಆಡುವ ಹಲವು ಭಾಷೆಗಳ ಪೈಕಿ ಅತ್ಯಧಿಕ ಜನರ ಮನೆಮಾತಾಗಿರುವ ಭಾಷೆ ಹಿಂದಿ. ಸ್ವಾತಂತ್ರ್ಯ ಸಂಗ್ರಾಮದ ಕಾಲದಲ್ಲಿ ರಾಷ್ಟ್ರಾಭಿಮಾನದ ಸಂಕೇತವಾಗಿ, ರಾಷ್ಟ್ರೀಯ ಚಳುವಳಿಯ ಅಂಗವಾಗಿ ನಾಡಿನ ಆದ್ಯಂತ ಅಂಗೀಕರಿಸಲ್ಪಟ್ಟಿರುವ ಮತ್ತು ಎಲ್ಲ ಪ್ರದೇಶಗಳಲ್ಲೂ ತಕ್ಕ ಮಟ್ಟಿಗೆ ಪ್ರಚಲಿತವಾಗಿರುವ ಭಾಷೆ ಹಿಂದಿ. ಇಂಗ್ಲಿಷ್ ಯಾವ ಕಾಲದಲ್ಲೂ ನಮ್ಮ ಜನಸಾಮಾನ್ಯರ ಭಾಷೆಯಾಗಲಾರದು; ಆದರೆ ಹಿಂದಿಯ ತಕ್ಕ ಮಟ್ಟಿನ ಅರಿವು ಇತರ ಭಾಷೆಗಳನ್ನಾಡುವ ಜನ ಸಾಮಾನ್ಯರಿಗೂ ಆಗಲು ಸಾಧ್ಯವಿದೆ. ಆದುದರಿಂದಲೆ ಹಿಂದಿ ರಾಷ್ಟ್ರಭಾಷೆಯಾಗಿ ಅಂಗೀಕರಿಸಲ್ಪಟ್ಟಿರುವುದು. ಅಲ್ಲದೆ ಇತರ ಭಾಷೆಗಳಿಗಿಂತ ಹಿಂದಿ ಹಿರಿದೆಂದೋ, ಹಿಂದಿ ರಾಷ್ಟ್ರಭಾಷೆಯಾದರೆ ಇತರ ಭಾಷೆಗಳ ಸ್ಥಾನಮಾನಗಳಿಗೆ ಧಕ್ಕೆ ಬರುವುದೆಂದೋ ಎಣಿಸುವುದು ಸರಿಯಲ್ಲ.

ಹಿಂದಿಯನ್ನು ಬಲಾತ್ಕಾರವಾಗಿ ಹೇರುವ ಪ್ರಯತ್ನ ಅಧಿಕೃತ ವಲಯಗಳಲ್ಲಿ ನಡೆಯುತ್ತಿದೆ ನಿಜ. ಅದು ಇತರ ಭಾಷೆಗಳವರಲ್ಲಿ ಸಂಶಯ ಮತ್ತು ಪ್ರತಿಭಟನೆಯ ಭಾವನೆಯನ್ನು ಹುಟ್ಟಿಸುವುದೂ ಸಹಜವೆ. ಬಲಾತ್ಕಾರವಾಗಿ ಹಿಂದಿಯನ್ನು ಜನರ ಮೇಲೆ ಹೇರುವ ಮತ್ತು ಇತರ ಭಾಷೆಗಳಿಗೆ ಧಕ್ಕೆಯಾಗುವಂತೆ ವರ್ತಿಸುವ ತಪ್ಪನ್ನು ತೋರಿಸಿಕೊಡಬೇಕು, ತಿದ್ದಬೇಕು, ಅವಶ್ಯವಿರುವಲ್ಲಿ ಪ್ರತಿಭಟಿಸಲೂಬೇಕು. ಆದರೆ, ಅದನ್ನು ಕಾರಣವಾಗಿ ಇಟ್ಟುಕೊಂಡು ಇಂಗ್ಲಿಷೇ ಎಂದೆಂದಿಗೂ ಅಧಿಕೃತ ಭಾಷೆಯಾಗಿ—ಅದರ ಇಂದಿನ ಸರ್ವೋನ್ನತ ಸ್ಥಾನದಲ್ಲಿ—ಉಳಿಯಲೆಂದು ಹೇಳುವುದು ಸರಿಯಲ್ಲ. ನಮ್ಮದೇ ಆದ ರಾಷ್ಟ್ರಭಾಷೆಯೊಂದು ನಮಗೆ ಬೇಕಾಗಿಲ್ಲ, ಹಿಂದಿಗಿಂತ ಇಂಗ್ಲಿಷೇ ಒಳ್ಳೆಯದು ಎಂದೆಲ್ಲ ವಾದಿಸುವುದು ಯೋಗ್ಯವಲ್ಲ.

ಈ ವಿಚಾರದಲ್ಲಿ ಪ್ರಧಾನಿ ನೆಹರೂರವರ ಮಾತುಗಳು ಸಮರ್ಪಕವಾಗಿವೆ "ಉತ್ತರದ ಯಾವ ನಿರ್ಣಯವನ್ನು ದಕ್ಷಿಣದ ಮೇಲೆ ಅಥವ ದಕ್ಷಿಣದ ನಿರ್ಣಯವನ್ನು ಉತ್ತರದ ಮೇಲೆ ಹೊರಿಸುವುದು ಸಾಧ್ಯವಲ್ಲ, ಅಪೇಕ್ಷಣೀಯವಲ್ಲ. ಉತ್ತರದ ಹಾಗೂ ದಕ್ಷಿಣದ ಅತ್ಯಂತ ಬಹು ಸಂಖ್ಯಾತ ಜನರಿಗೆ ಒಪ್ಪಿಗೆಯಾಗುವ ಒಂದು ನಿರ್ಣಯವನ್ನು ನಾವು ಮಾಡಬೇಕು. ನಾನು ಹಿಂದೆಯೂ ಹಾಗೆ ಅಂದಿದ್ದೆ; ಈಗಲೂ ಹಾಗೆ ಅನ್ನುತ್ತೇನೆ" ಹಿಂದಿಯನ್ನು ಬಲಾತ್ಕಾರವಾಗಿ ಜನರ ಮೇಲೆ ಹೇರುವುದನ್ನು ನೆಹರೂರವರು ಖಂಡಿಸಿದ್ದಾರೆ. ಕೇಂದ್ರ ಸರಕಾರವು ಈ ಮಾರ್ಗವನ್ನು ಕಾರ್ಯತಃ ಅನುಸರಿಸಲೆಂದು ಹಾರೈಸೋಣ, ಮಾತಿನಲ್ಲಿ ಹೀಗೆಂದು ಕೃತಿಯಲ್ಲಿ ವ್ಯತಿರಿಕ್ತವಾಗಿ ವರ್ತಿಸದಂತೆ ಜಾಗರೂಕರಾಗಿರೋಣ, ಯೋಗ್ಯ ಕ್ರಮ ವಹಿಸೋಣ.

ಈ ಸಂಬಂಧವಾಗಿ ಮದ್ರಾಸು ಸರಕಾರವು ಕೇಂದ್ರ ಸರಕಾರಕ್ಕೆ ಕೊಟ್ಟಿರುವ ಮನವಿಯಲ್ಲಿ ಕೆಲವು ಅಂಶಗಳು ನಾವು ಒಪ್ಪಲಾರದಿದ್ದರೂ ಒಟ್ಟಿನಲ್ಲಿ ಅದು ಭಾಷಾ ಸಮಸ್ಯೆಯ ಪರಿಹಾರಕ್ಕೊಂದು ದಾರಿ ತೋರಿಸಿದೆ ಎನ್ನಬಹುದು. ರಾಷ್ಟ್ರಭಾಷೆ ಯಾವುದಿರಬೇಕೆಂಬುದು ಕಾಲಕ್ರಮೇಣ ನಿರ್ಣಯವಾಗಲಿ ಎಂದು ಆ ಮನವಿಯಲ್ಲಿ ಹೇಳಿರುವುದು ಪ್ರಸಕ್ತವಲ್ಲ. ಕಾರಣ, ಇಂಗ್ಲೀಷನ್ನು ದೇಶ ತಿರಸ್ಕರಿಸಿದೆ; ಹಿಂದಿಯನ್ನು ಘಟನೆ ಅಂಗೀಕರಿಸಿದೆ. 1965 ರಲ್ಲೇ ಹಿಂದಿಯು ರಾಷ್ಟ್ರಭಾಷೆಯಾಗಿ ಬಳಕೆಗೆ ಬರಬೇಕೆನ್ನುವ ಒತ್ತಾಯ ಕೂಡದೆನ್ನುವುದು ಸರಿಯೆಂದು ತೋರುತ್ತದೆ. ಕಾರಣ, ಅಷ್ಟರಲ್ಲಿ ಅದು ಪ್ರಾಯೋಗಿಕವಾಗಲಾರದು. ಇತರ ಭಾಷಾಪ್ರದೇಶಗಳಲ್ಲೂ ಹಿಂದಿಯ ಪರಿಜ್ಞಾನ ಸಾಕಷ್ಟು ಬೆಳೆಯುವ ಮೊದಲು ಹಿಂದಿ ಅಧಿಕೃತ ವ್ಯವಹಾರಗಳಲ್ಲಿ ಕಡ್ಡಾಯವಾದರೆ, ಆ ಪ್ರದೇಶಗಳ ಜನತೆ ಕಷ್ಟ ನಷ್ಟಗಳಿಗೆ ಗುರಿಯಾಗುವುದು. ಅದೇ ಸಮಯದಲ್ಲಿ ಶಾಲೆಗಳಲ್ಲಿ ಮಕ್ಕಳಿಗೆ ಹಿಂದಿಯನ್ನು ಕಡ್ಡಾಯವಾಗಿ ಕಲಿಸುವುದರಿಂದ ಯಾವ ತರದ ಬಲತ್ಕಾರವನ್ನೂ ಮಾಡಿದಂತಾಗುವುದಿಲ್ಲ ಅದರಿಂದ ಪ್ರಯೋಜನವಲ್ಲದೆ ಹಾನಿ ಏನೂ ಆಗಲಾರದು. ರಾಜ್ಯಗಳ ವ್ಯವಹಾರಗಳಲ್ಲಿ ಆಯಾ ಪ್ರದೇಶಗಳ ಭಾಷೆಗಳನ್ನೇ ಅಧಿಕೃತ ಭಾಷೆಯಾಗಿ ಉಪಯೋಗಿಸುವುದರ ಜೊತೆಯಲ್ಲೆ ಹಿಂದಿಯನ್ನು ಕಡ್ಡಾಯವಾಗಿ ಕಲಿಸುವುದಕ್ಕೂ ಕ್ರಮವಹಿಸಿ ಆದಷ್ಟು ಬೇಗನೆ ಹಿಂದಿಯನ್ನು ರಾಷ್ಟ್ರಭಾಷೆಯಾಗಿ ಬಳಕೆಗೆ ತರಬಲ್ಲ ಪರಿಸ್ಥಿತಿಯನ್ನು ಸೃಷ್ಟಿಸಬೇಕಾಗಿದೆ.

ಶ್ರೀ ರಾಜಗೋಪಾಲಾಚಾರಿಯವರು ಇಂಗ್ಲೀಷನ್ನು ಇಂದಿನಂತೆ ಸರ್ವೋನ್ನತ ಭಾಷೆಯನ್ನಾಗಿ ಉಳಿಸಬೇಕೆನ್ನುತ್ತಾರೆ. ಅವರ ಜೊತೆಗೆ ಹಳೆಯ ಬ್ರಿಟಿಷ್ ಆಡಳಿತೆಯ ಆಧಾರಸ್ತಂಭಗಳೋ ಕೈಯ್ಯಾಳುಗಳೋ ಆಗಿದ್ದ ಶ್ರೀಗಳಾದ ಸಿ. ಪಿ. ರಾಮಸ್ವಾಮಿ ಅಯ್ಯರ್, ಆರ್ಕಾಟ್ ರಾಮಸ್ವಾಮಿ ಮೊದಲಿಯಾರ್, ಲಕ್ಷ್ಮಣಸ್ವಾಮಿ ಮೊದಲಿಯಾರ್, ಮಿರ್ಜಾ ಇಸ್ಮಾಯಿಲ್ ಮೊದಲಾದವರ ತಂಡ ಇಂಗ್ಲಿಷಿನ ರಕ್ಷಣೆಗೆ ಟೊಂಕಕಟ್ಟಿ ನಿಂತಿದೆ. ಈ ತಂಡದವರನ್ನು ನೋಡಿದರೆನೇ ಈ ವಾದದಲ್ಲೇನೋ ಹುಳುಕಿದೆ ಎಂದು ಎಣಿಸಬೇಕಾಗುತ್ತದೆ. ಇಂಗ್ಲೀಷು ಎಷ್ಟರ ತನಕ ಸರ್ವೋನ್ನತ ಸ್ಥಾನದಲ್ಲಿರುತ್ತದೋ ಅಂದಿನ ತನಕ ಜನಸಾಮಾನ್ಯರು ರಾಷ್ಟ್ರದ ವ್ಯವಹಾರಗಳಲ್ಲಿ ಪರಿಣಾಮಕಾರಿಯಾಗಿ ಭಾಗವಹಿಸಲು ಅವಕಾಶವಿರಲಾರದು. ಇಂಗ್ಲೀಷು ರಾಷ್ಟ್ರಭಾಷೆಯಾಗಲು ಸಾಧ್ಯವಿಲ್ಲ.

ಎಲ್ಲ ರಾಜ್ಯ ಸರಕಾರಗಳೂ ಪ್ರಾದೇಶಿಕ ಭಾಷೆಗಳಲ್ಲೇ ರಾಜ್ಯದ ಆಡಳಿತೆಯ ವ್ಯವಹಾರಗಳನ್ನು ನಡೆಸಲಿ. ಪ್ರಾದೇಶಿಕ ಭಾಷೆಗಳಿಗೆ ಕೇಂದ್ರ ಸರಕಾರವು ಪ್ರಾಯೋಗಿಕ ಅಂಗೀಕಾರ, ಗೌರವ ಮತ್ತು ಪ್ರೋತ್ಸಾಹ ನೀಡಲಿ. ಅದೇ ಸಮಯದಲ್ಲಿ ಹಿಂದಿಯ ಶಿಕ್ಷಣಕ್ಕೆ ಸಾಕಷ್ಟು ಗಮನ ಕೊಟ್ಟು, ಅದು ಆದಷ್ಟು ಬೇಗನೆ ರಾಷ್ಟ್ರಭಾಷೆಯಾಗಿ ವ್ಯವಹಾರದಲ್ಲಿ ಬಳಕೆಗೆ ಬರುವಂತೆ ಪೂರ್ವಸಿದ್ಧತೆ ನಡೆಯಲಿ. ಹಿಂದಿಯನ್ನು ಬಲತ್ಕಾರವಾಗಿ ಹೇರುವ ಹವ್ಯಾಸವನ್ನು ಬಿಡಲಿ. 1965 ರಲ್ಲೇ ಹಿಂದಿ ಕಡ್ಡಾಯವಾಗಿ ಜಾರಿಗೆ ಬರಬೇಕೆಂಬ ಒತ್ತಾಯವನ್ನು ಬಿಟ್ಟು, ಅದರ ನಿರ್ಣಯವನ್ನು ಮುಂದೂಡಲಿ.

ನಾಡಿನ ಏಳಿಗೆಗೆ ಒಂದಾಗಿ ದುಡಿಯೋಣ ನಂಬೂದ್ರಿಪಾದ್‌ರವರ ಕರೆ!

ಕಾಂಗ್ರೆಸ್ಸಿನ 63ನೇ ಅಧಿವೇಶನಕ್ಕೆ ಸಂಬಂಧಿಸಿ ಪ್ರಕಟಿಸಲ್ಪಟ್ಟಿರುವ ಸ್ಮಾರಕ ಹೊತ್ತಿಗೆಗೆ ಒಂದು ಸಂದೇಶ ಕಳುಹಿಸುತ್ತ, ಕೇರಳದ ಮುಖ್ಯ ಮಂತ್ರಿ ಇ. ಎಂ. ಎಸ್. ನಂಬೂದ್ರಿಪಾದ್ ರಾಷ್ಟ್ರದ ಅಭಿವೃದ್ಧಿಗೆ ಒಂದಾಗಿ ದುಡಿಯಲು ಆಹ್ವಾನವಿತ್ತಿದ್ದಾರೆ

ರಾಷ್ಟ್ರೀಯ ಜೀವನದ ಎಷ್ಟು ಕ್ಷೇತ್ರಗಳಲ್ಲಿ ಸಾಧ್ಯವಿದೆಯೋ ಅಷ್ಟರಲ್ಲಿ ಒಮ್ಮತದಿಂದ ಕೆಲಸ ಮಾಡುವಂಥ ಒಪ್ಪಂದವನ್ನು ವಿವಿಧ ಪಕ್ಷಗಳು ಮಾಡಿಕೊಳ್ಳಲು ಪ್ರಯತ್ನಿಸಬೇಕೆಂದು ಇ. ಎಂ. ಎಸ್. ಸೂಚಿಸಿದ್ದಾರೆ. 1926ರಲ್ಲಿ ಗೌಹತಿಯಲ್ಲಿ ಜರಗಿದ್ದ ಕಾಂಗ್ರೆಸ್ ಅಧಿವೇಶನದಲ್ಲಿ ತೀವ್ರ ಚರ್ಚೆ ನಡೆದಿದೆ; ಆದರೆ ಅವರ ಫಲವಾಗಿ ಮತ್ತೆ ಸಂಪೂರ್ಣ ಸ್ವಾತಂತ್ರ್ಯದ ಗುರಿಯನ್ನು ಕಾಂಗ್ರೆಸ್ಸು ಅಂಗೀಕರಿಸುವಂತಾಯಿತು. ಇಂದು ತಿರುಗಿ ಗೌಹತಿಯಲ್ಲಿ ಕಾಂಗ್ರೆಸ್ ಅಧಿವೇಶನ ಜರಗುತ್ತಿರುವಾಗ ನಮ್ಮ ಮುಂದೆ ಹಲವು ಗಂಭೀರವಾದ ಸಮಸ್ಯೆಗಳಿವೆ. ದ್ವಿತೀಯ ಪಂಚವಾರ್ಷಿಕ ಯೋಜನೆಯನ್ನು ಕಾರ್ಯಗತಗೊಳಿಸುವ ಪ್ರಶ್ನೆ ದೇಶದ ಮುಂದಿದೆ ಎಷ್ಟೇ ಕಷ್ಟಗಳಿದ್ದರೂ ನಮ್ಮ ಘನವಾದ ಉದ್ದೇಶಗಳು ಪೂರ್ತಿಯಾಗುವವೆಂದು ನಾವು ಆಶಿಸುತ್ತೇವೆ. ನಮ್ಮೊಳಗೆ ಭಿನ್ನಾಭಿಪ್ರಾಯಗಳಿವೆ ನಿಜ. ದ್ವಿತೀಯ ಪಂಚವಾರ್ಷಿಕ ಯೋಜನೆಯನ್ನು ತಡೆಯುವ ತೊಡಕುಗಳನ್ನು ನಿವಾರಿಸಿ ಅದನ್ನು ಯಶಸ್ವಿಗೊಳಿಸುವುದು ಹೇಗೆನ್ನುವುದರಲ್ಲಿ ಅಭಿಪ್ರಾಯ ಭೇದವಿದೆ ನಿಜ. ಆದರೆ ಅವನ್ನೆಲ್ಲ ವಿಚಾರ ವಿನಿಮಯದಿಂದ, ಸೌಹಾರ್ದತೆಯಿಂದ, ಬಹಿರಂಗ ವಾದ-ವಿವಾದದಿಂದ ತೀರ್ಮಾನಿಸಬಹುದು ಅದೇ ಸಮಯದಲ್ಲಿ ಕಾರ್ಯಕ್ಷೇತ್ರದಲ್ಲಿ ದೇಶದ ಏಳಿಗೆಗೆ ಒಂದಾಗಿ ದುಡಿಯಲು ನಾವು ಪ್ರಯತ್ನಿಸೋಣ ಎಂದು ನಂಬೂದ್ರಿಪಾದ್‌ರವರು ಕಾಂಗ್ರೆಸ್ ನಾಯಕರಿಗೆ ಕರೆ ಇತ್ತಿದ್ದಾರೆ.

★ ಜಗತ್ತು ಇಂದು ಸಮಾಜವಾದದತ್ತ ಪರಿವರ್ತನೆಯಾಗುತ್ತಿದೆ ★

ಅಕ್ಟೋಬರ್ ಸಮಾಜವಾದಿ ಕ್ರಾಂತಿಯ ನಲ್ವತ್ತನೇ ವಾರ್ಷಿಕೋತ್ಸವವು ಸೋವಿಯತ್ ಜನತೆಯ ಹಾಗೂ ಅದರ ನೇತೃತ್ವದಲ್ಲಿ ನಡೆಯುತ್ತಿರುವ ಸಮಾಜವಾದೀ ಜಗತ್ತಿನ, ಅಂತರರಾಷ್ಟ್ರೀಯ ಕಮ್ಯೂನಿಸ್ಟ್ ಚಳವಳಿಕ್ಕೆ, ಸಮಸ್ತ ಪ್ರಗತಿಶೀಲ ಮಾನವ ಜನಾಂಗಕ್ಕೆ ಒಂದು ಮಹತ್ವ ಪೂರ್ಣ ಘಟನೆ.

★ ನವಂಬರ್ 1957ರ ಹಿಂದಿನ ನಲ್ವತ್ತು ವರುಷಗಳಲ್ಲಿ ಜಗತ್ತಿನ ಇತಿಹಾಸದಲ್ಲಿ ಹೆಜ್ಜೆ ಹೆಜ್ಜೆಗೂ ಬಂಡವಾಳಶಾಹಿ ಸೋಲನ್ನನುಭವಿಸುತ್ತಾ ಬಂದಿದೆ. ಅನೇಕಾನೇಕ ಸಂಕಟಗಳು ಬಂಡವಾಳಶಾಹೀ ಪದ್ಧತಿಯನ್ನು ಛಿದ್ರವಿಚ್ಛಿದ್ರಗೊಳಿಸಿವೆ. ಇನ್ನೊಂದೆಡೆ ಸಮಾಜವಾದಿ ಆರ್ಥಿಕ ವ್ಯವಸ್ಥೆ ಅತ್ಯಧಿಕ ತೀವ್ರಗತಿಯಿಂದ, ಮಾನವ ಜನಾಂಗದ ಇತಿಹಾಸದಲ್ಲಿ ಹಿಂದೆಂದೂ ಸಾಧಿಸದಷ್ಟು ಮಹತ್ತ್ವಪೂರ್ಣವಾಗಿ ಬೆಳೆದಿದೆ, ವಿಕಾಸ ಹೊಂದಿದೆ.

★ ಈ ನಲ್ವತ್ತು ವರುಷಗಳಲ್ಲಿ ಫಾಸಿಸ್ಟ್ ಶಕ್ತಿಯು ಜಗತ್ತನ್ನೇ ತನ್ನ ಅಂಕೆಯಲ್ಲಿಟ್ಟುಕೊಳ್ಳಲು ಭಯಾನಕ ಪಿತೂರಿ ನಡೆಸಿತು. ಆದರೆ ಸೋವಿಯತ್ ಸಮಾಜವಾದೀ ನಾಯಕತ್ವವನ್ನೊಳಗೊಂಡ ಸಂಯುಕ್ತ ಶಕ್ತಿಯು ಫಾಸಿಸ್ಟ್ ಅತ್ಯಾಚಾರವನ್ನು ಮುರಿದು ಹಾಕಿತು.

★ ಚೀನಾದ ಕ್ರಾಂತಿಯೂ ಇದೇ ಕಾಲಘಟ್ಟದಲ್ಲೇ ನಡೆಯಿತು. ಅದು ಸಮಾಜವಾದಿ ಹಾಗೂ ಬಂಡವಾಳಶಾಹೀ ಜಗತ್ತಿನಲ್ಲಿ ನಿರ್ಣಾಯಕವಾದ ಬಲಾಬಲವನ್ನು ನಿರ್ಮಿಸಿದೆ.

★ ಇಂದು 85 ಕೋಟಿ ಜನ ಸಮುದಾಯವಿರುವ ವಿವಿಧ ದೇಶಗಳ ಆಡಳಿತೆಯ ನೇತೃತ್ವವನ್ನು ಕಾರ್ಮಿಕ ವರ್ಗವು ವಹಿಸಿಕೊಂಡಿದೆ.

★ ಈ ವರುಷಗಳಲ್ಲೇ ಏಷ್ಯಾ ಮತ್ತು ಆಫ್ರಿಕಗಳಲ್ಲಿ ಅನೇಕ ದೇಶಗಳ ವಸಾಹತುಶಾಹಿ ಅಳಿದು, ಅವುಗಳು ಸ್ವತಂತ್ರವಾದುವು.

ಯುಗ ಪರಿವರ್ತನೆ

ಇವೆಲ್ಲದರಿಂದ ವ್ಯಕ್ತವಾಗುವ ಮುಖ್ಯಾಂಶವಿಷ್ಟು: ಇಂದು ಬಂಡವಾಳಶಾಹಿ ಪದ್ಧತಿಯಿಂದ ಜಗತ್ತು ಸಮಾಜವಾದಿ ಪದ್ಧತಿಯ ಕಡೆ ನಿರ್ಣಾಯಕವಾಗಿ ಪರಿವರ್ತಿತವಾಗುತ್ತಿದೆ.

ಈ ಪರಿವರ್ತನೆ ಜಗತ್ತಿನ ರೂಪವನ್ನೇ ಬದಲಿಸಿದೆ. ಈ ಪರಿವರ್ತನೆಯಲ್ಲಿ ಅತ್ಯಧಿಕ ಮಹತ್ವ ಪೂರ್ಣವಾದ ಪಾತ್ರ ಅಕ್ಟೋಬರ್ ಕ್ರಾಂತಿಯದಾಗಿದೆ. ಕಳೆದ ನಲ್ವತ್ತು ವರುಷಗಳಲ್ಲಿ ಇತಿಹಾಸದ ಚಕ್ರವನ್ನು ಬದಲಿಸುವುದರಲ್ಲಿ ಸೋವಿಯತ್ ಯೂನಿಯನ್ ನಿರ್ವಹಿಸಿದ ಮಹತ್ವ ಪೂರ್ಣವಾದ ಪಾತ್ರವನ್ನು ಇತರ ಯಾವ ದೇಶವೂ ವಹಿಸಲಿಲ್ಲವೆನ್ನುವುದನ್ನು ಪ್ರತಿಯೊಬ್ಬರೂ ಇಂದು ಒಪ್ಪುತ್ತಾರೆ.

ಇದರಿಂದಾಗಿಯೇ ಸಮಾಜವಾದಿ ದೇಶಗಳ ನೇತೃತ್ವ ಸೋವಿಯತ್ 'ಯೂನಿಯನ್ ಪಡೆದಿರುವುದು; ಇದು ಸ್ವಾಭಾವಿಕವೂ ಆಗಿದೆ. ಸೋವಿಯತ್ತಿನ ಅನುಭವಗಳ ಬಗ್ಗೆ, ಅದು ಸಮಾಜವಾದದ ಹಾದಿಯಲ್ಲಿ ನಡೆದಿರುವ ಪರಿಸ್ಥಿತಿಗಳ ಬಗ್ಗೆ, ಇತರ ದೇಶಗಳು ಅತ್ಯಧಿಕ ಮಹತ್ವದಿಂದ ನೋಡುವುದು ಸ್ವಾಭಾವಿಕವೇ ಆಗಿದೆ.

ಈ ನಲ್ವತ್ತು ವರುಷಗಳಲ್ಲಿ ಸೋವಿಯತ್ ಜನತೆ ದಾಟಿದ ಮಹತ್ವಪೂರ್ಣ ಘಟನೆಗಳ ಕುರಿತು 6ನೇ ನವಂಬರಿನಂದು ಸೋವಿಯತ್ತಿನ ಸುಪ್ರೀಮ್ ಸೋವಿಯತ್ ಅಧಿವೇಶನದಲ್ಲಿ ಮಾತನಾಡುತ್ತಾ, ಕಾಮ್ರೇಡ್ ಎನ್. ಎಸ್. ಕ್ರುಶ್ಚೇವ್ ಹೇಳಿದ್ದಾರೆ:

"ಗೆಳೆಯರೆ ನಮ್ಮ ಶತ್ರುಗಳು ನಮ್ಮ ಬೊಲ್ಶೆವಿಕ್ ಕ್ರಾಂತಿಯನ್ನು ಕಂಡು ಇದು ನಾಗರಿಕತೆಯ ವಿನಾಶ ಅಥವಾ ಕೊನೆ ಎಂದು ಭಾವಿಸಿದ್ದರು. ಸೋವಿಯತ್ ಜನತೆ ತಮ್ಮ ಮಹಾನ್ ಪ್ರಗತಿಯ ಮೂಲಕ ಆ ಭ್ರಮೆಯನ್ನು ಅಳಿಸಿ ಬಿಟ್ಟಿದ್ದಾರೆ. ಇಂದು ನಲ್ವತ್ತು ವರುಷ ಹಳೆಯದಾದ ನಮ್ಮ ಹೊಸ ಸಮಾಜವಾದಿ ವ್ಯವಸ್ಥೆಯು ನವೀನ ವಾದವೊಂದನ್ನು ಜಗತ್ತಿನ ಮುಂದಿಟ್ಟಿದೆ. ಇಂದು ಅಧಿಕಾರದಲ್ಲಿರುವವರ್ಗ, ಯೋಗ್ಯವಾದ ವರ್ಗವೆಂದೂ, ಭೌತಿಕ ಹಾಗೂ ಅಧ್ಯಾತ್ಮಿಕ ಸಿದ್ಧಾಂತಗಳ ತವರೆಂದೂ ಸಿದ್ಧಪಡಿಸಿದೆ. ಇಷ್ಟೇ ಅಲ್ಲದೆ ಸಾಮಾಜಿಕ ಮತ್ತು ವ್ಯಕ್ತಿಗತ ಜೀವನದ ಎಲ್ಲಾ ಸಮಸ್ಯೆಗಳಿಗೆ ಸರಿಯಾದ ಪರಿಹಾರ, ಜನ-ಪ್ರಗತಿಯ ವೇಗ, ಕೇವಲ ಸಮಾಜವಾದೀ ವ್ಯವಸ್ಥೆಯಿಂದಲೇ ಸಾಧ್ಯವೆಂದೂ ನಮ್ಮ ಅನುಭವಗಳು ತೋರಿಸಿಕೊಟ್ಟವೆ. ಇಡೀ ಜನಸಮುದಾಯವನ್ನೇ ಪ್ರಭಾವಶಾಲಿ ರೀತಿಯಲ್ಲಿ, ಅಭೂತಪೂರ್ವವಾಗಿ, ವೈಜ್ಞಾನಿಕ, ಸಾಂಸ್ಕೃತಿಕ ಮತ್ತು ಭೌತಿಕವಾಗಿ ನಿರಂತರ ಮುಂದುವರಿಸಲು ಕೇವಲ ಸಮಾಜವಾದೀ ವ್ಯವಸ್ಥೆಯಿಂದಲೇ ಸಾಧ್ಯವೆಂದು ಮನಗಂಡಿದ್ದೇವೆ".

ಇಂದು ಈ ಮಾತುಗಳು ಬರೀ ಹರಟೆಗಳಲ್ಲವೆಂದು ಸಮರ್ಥಿಸ ಬೇಕಾದ ಆವಶ್ಯಕತೆ ಇಲ್ಲವಾಗಿದೆ. ಒಂದು ವೇಳೆ ಸಂದೇಹವಿದ್ದಿದ್ದರೂ, ಅಮೆರಿಕದ ಬಂಡವಾಳ ಶಾಹಿಯನ್ನು ಸಮಾಜವಾದವು ಹಿಂದುಳಿಸುವುದರ ಬಗ್ಗೆ ಕೆಲವರಲ್ಲಿ ಉಳಿದುಕೊಂಡಿದ್ದ ಸಂದೇಹ; ಇಂದು ಅದು ಕೂಡಾ ಸಂಪೂರ್ಣವಾಗಿ ಅಳಿದು ಹೋಗಿದೆ. ಅಂತರಿಕ್ಷದಲ್ಲಿ ಹಾರಾಡುತ್ತಿರುವ ಎರಡು ಮರಿಚಂದ್ರರು ಆ ಸಂದೇಹಗಳನ್ನು ಸಮೂಲವಾಗಿ ನಾಶಗೊಳಿಸಿದ್ದಾರೆ. ಶೋಷಕ ಬಂಡವಾಳಶಾಹೀ ತೋಳಗಳ ಹಿಡಿತದಿಂದ ಮುಕ್ತರಾದ ಮಾನವರು ತಮ್ಮ ಸೃಜನಾತ್ಮಕ ಶಕ್ತಿಯಿಂದ ಏನೆಲ್ಲ ಸಾಧಿಸಬಲ್ಲರು ಎನ್ನುವುದಕ್ಕೆ ಇದು ಸಾಕ್ಷಿ ಭೂತವಾಗಿದೆ. ಇನ್ನು ಕೇವಲ ಬ್ರಹ್ಮಾಂಡವನ್ನೇ ಮಾನವ ಕಂಡು ಹಿಡಿಯುವುದಲ್ಲ, ಜಗತ್ತಿನ ಎಲ್ಲೆಡೆಯಲ್ಲೂ ಸಮಾಜವಾದವು ಬಂಡವಾಳವಾದವನ್ನು ಸೋಲಿಸುವುದೆನ್ನುವುದನ್ನು ಈ ಮರಿ ಚಂದ್ರರಿಂದ ಅನುಭವಕ್ಕೆ ಬಂದಿದೆ.

★ ವಿಜ್ಞಾನ ಹಾಗೂ ತಾಂತ್ರಿಕ ಕ್ಷೇತ್ರದಲ್ಲಿ ಸಮಾಜವಾದವು ಬಂಡವಾಳಶಾಹಿಯನ್ನು ಎಂದೋ ಹಿಂದೇಟು ಹಾಕಿದೆಯೆನ್ನುವುದನ್ನು ಜಗತ್ತಿಗೆ ತೋರಿಸಿಕೊಟ್ಟಾಗಿದೆ.

★ "ಸೋವಿಯತ್ ಯೂನಿಯನನ್ನು ಆದಷ್ಟು ಬೇಗನೆ, ಕ್ಷಿಪ್ರದಲ್ಲೇ ಸರಿಗಟ್ಟಬೇಕು" ಎಂಬ ಘೋಷಣೆಯನ್ನು ಮೊದಲ ಬಾರಿಗೆ ಬಂಡವಾಳಶಾಹೀ ಜಗತ್ತಿನ ನಾಯಕ ರಾಷ್ಟ್ರವಾದ ಅಮೆರಿಕದ ನಾಯಕರಿಗೆ ನೀಡಬೇಕಾಗಿ ಬಂದಿದೆ.

★ ಯಾರು ಯಾರನ್ನು ಹಿಂದುಳಿಸ ಬಲ್ಲರು? ಎಂಬುದೇ ನಮ್ಮ ಇಂದಿನ ಯುಗದ ಸಮಸ್ಯೆ. ಇದರ ಉತ್ತರವನ್ನೂ ನಡೆದ ಐತಿಹಾಸಿಕ ಘಟನೆಗಳೇ ನೀಡಿವೆ.

ಇಷ್ಟೊಂದು ಸ್ಪಷ್ಟವಾದ ಉತ್ತರವನ್ನು ಅರಿತೂ ಇಂದಿನ ಸಾಮ್ರಾಜ್ಯಶಾಹೀ ಯುದ್ಧಕೋರರು ಕುರುಡರಾಗಿ ಯುದ್ಧದಿಂದಲೇ ಮುಕ್ತಿ ಸಾಧ್ಯವೆಂದು ಬೊಬ್ಬಿಡುತ್ತಿದ್ದಾರೆ. ಇಂದು ಸ್ವಾತಂತ್ರ್ಯಗಳಿಸಿರುವ ದೇಶಗಳನ್ನು ಪುನಃ ಗುಲಾಮಗಿರಿಗೆ ನೂಕುವ ಯುದ್ಧ, ಕಾರ್ಮಿಕ ವರ್ಗ ಸಮಾಜವಾದದ ನಿರ್ಮಾಣ ಮಾಡುತ್ತಿರುವುದನ್ನು ಸಂಪೂರ್ಣ ನಷ್ಟಭ್ರಷ್ಟಗೊಳಿಸಿ ಇತಿಹಾಸದ ಚಕ್ರವನ್ನು ಪುನಃ ಹಿಂದೆ ತಿರುಗಿಸುವ ಯುದ್ಧವನ್ನು ಅವರು ಬಯಸುತ್ತಿದ್ದಾರೆ.

ಶಾಂತಿಯ ದಳ

ಆದರೆ ಇಂದು ಯುದ್ಧವೂ ಅವರಿಂದ ಸಾಧ್ಯವಿಲ್ಲ. ಅವರೆದುರಿಗೆ ಅಪಾರವಾದ ಶಾಂತಿಸೇನೆ "ಶಾಂತಿ"ಯ ಘೋಷಣೆಯೊಡನೆ ನಿಂತಿದೆ.

ಅಜಯ ಘೋಷ್

ಕೋಟಿ ಕೋಟಿ ಸಂಖ್ಯೆಯ ಜಾಗ್ರತ ಜನತೆ ಮತ್ತು ಬಂಡವಾಳಶಾಹೀ ದೇಶಗಳ ಶಾಂತಿಪ್ರಿಯ ದುಡಿಯುವ ವರ್ಗ ಯುದ್ಧಕ್ಕೆದುರಾಗಿ ನಿಂತಿದೆ.

ಇವೆಲ್ಲಕ್ಕಿಂತಲೂ ಮಿಗಿಲಾಗಿ ಸಮಾಜವಾದಿ ದೇಶಗಳು ಧಾಳಿಯನ್ನು ಎದುರಿಸುವುದಷ್ಟೇ ಅಲ್ಲ, ಅತ್ಯಾಚಾರಕ್ಕೊಳಗಾದ ಸೋದರ ದೇಶಗಳಿಗೆ ಸಹಾಯ ನೀಡಲು ಐಕ್ಯತೆಯಿಂದ ಮುಂದೆ ಬರುತ್ತಿವೆ. ಸಾಮ್ರಾಜ್ಯಶಾಹಿಯ ಪ್ರತಿಯೊಂದು ಮೋಸದ ತಂತ್ರವನ್ನೂ ಎದುರಿಸಲು ಶಕ್ತರಾಗಿವೆ.

ಇತ್ತೀಚೆಗೆ ಈಜಿಪ್ಟಿನಲ್ಲಾದ ಘಟನೆಯನ್ನು ಮರೆತು, ಸಿರಿಯಾದಲ್ಲಿಯೂ ತನ್ನ ಆಟ ನಡೆಸಲು ಯತ್ನಿಸಿದ ಸಾಮ್ರಾಜ್ಯಶಾಹಿಗೆ ಎರಡನೇ ಬಾರಿಗೆ ಮರೆಯಲಾರದ ಪಾಠ ದೊರೆತಿದೆ. ಜಗತ್ತು ಹಿಂದಿನಂತೆ ಇಲ್ಲವೆನ್ನುವುದನ್ನು ಪುನಃ ಅವರಿಗೆ ಎಚ್ಚರಿಸಲಾಗಿದೆ.

ಇವೆಲ್ಲದರಿಂದ ನಾವು ಇಂದು ಅಕ್ಟೋಬರ್ ಕ್ರಾಂತಿಯ ದಿನಾಚರಣೆಯನ್ನು ಹೆಮ್ಮೆ ಹಾಗೂ ಆತ್ಮವಿಶ್ವಾಸದೊಡನೆ ಆಚರಿಸುತ್ತಿದ್ದೇವೆಂದರೆ ಅತಿಶಯೋಕ್ತಿಯಾಗಲಾರದು. ನಾವು ಹೆಮ್ಮೆ ಪಡುವುದು ನಮ್ಮ ಹಿಂದಿನ ವಿಜಯಗಳ ಬಗ್ಗೆ, ಆತ್ಮವಿಶ್ವಾಸ—ಮುಂದಿನ ಸಂಭವನೀಯ ಘಟನೆಗಳ ಬಗ್ಗೆ. ಈ ಹೆಮ್ಮೆ ಮತ್ತು ಆತ್ಮ ವಿಶ್ವಾಸಕ್ಕೆ ಹಕ್ಕುದಾರರು ಕೇವಲ ಸೋವಿಯತ್ ಯೂನಿಯನಿನವರೇ ಅಲ್ಲ, ಜಗತ್ತಿನ ಇತರ ಎಲ್ಲಾ ಸಮಾಜವಾದೀ ದೇಶಗಳ, ಬೇರೆ ದೇಶಗಳ ಕಮ್ಯೂನಿಸ್ಟರು, ಶಾಂತಿ ಪ್ರಿಯರೂ ಸ್ವಾತಂತ್ರ್ಯ ಹಾಗೂ ಪ್ರಗತಿಶೀಲರೂ ಕೂಡಾ ಸಮಾನ ಹಕ್ಕುದಾರರಾಗಿದ್ದಾರೆ.

ಅಕ್ಟೋಬರ್ ಕ್ರಾಂತಿಯ ನಲ್ವತ್ತನೆಯ ವಾರ್ಷಿಕೋತ್ಸವವು ಅಂತರರಾಷ್ಟ್ರೀಯ ಕಮ್ಯೂನಿಸ್ಟ್ ಚಳವಳಿ—ನಮ್ಮ ಯುಗದ ಅತ್ಯಧಿಕ ಮಹತ್ವಪೂರ್ಣ ಚಳವಳಿ—ಯ ಐಕ್ಯತೆಯ ಮತ್ತು ಶಕ್ತಿಯ ಅದ್ಭುತ ಪ್ರತೀಕವಾಗಿದೆ.

ಎರಡನೇ ಮಹಾ ಯುದ್ಧಕ್ಕೆ ಮೊದಲೇ ಕಮ್ಯೂನಿಸಂ ಒಂದು ಪ್ರಬಲ ಶಕ್ತಿಯಾಗಿತ್ತು. ಆಗಲೇ ಸೋವಿಯತ್ ಯೂನಿಯನಿನ ಕಾರ್ಮಿಕ ವರ್ಗದ ಕೈಯಲ್ಲಿ ದೇಶದ ಅಧಿಕಾರವಿತ್ತು. ಅದರ ಆಗಿನ ಎಲ್ಲಾ ಪಾರ್ಟಿಯ ಸದಸ್ಯರ ಒಟ್ಟು ಸಂಖ್ಯೆ 30 ಲಕ್ಷದಷ್ಟಾಗಿತ್ತು. ಜಗತ್ತಿನ ಅನೇಕ ದೇಶಗಳ ಕಾರ್ಮಿಕವರ್ಗಗಳು ನಡೆಸುತ್ತಿದ್ದ ಹೋರಾಟಗಳಿಗೆ ಅವರು ಸಾಕಷ್ಟು ಬೆಂಬಲವನ್ನೂ ನೀಡುತ್ತಿದ್ದರು.

ನಂತರ ಅದರಲ್ಲಾದ ವಿಸ್ತಾರವಾದ ಬೆಳವಣಿಗೆ ಜಗತ್ತಿನ ಇತಿಹಾಸದಲ್ಲೆಲ್ಲೂ ಕಾಣಸಿಗಲಾರದು.

ಅಕ್ಟೋಬರ್ ಕ್ರಾಂತಿಯ ದಿನ ಒಂದು ದೇಶದಲ್ಲಿ ಹಾರಾಡಿದ ಧ್ವಜ-ಕ್ರಾಂತಿಯ ಧ್ವಜ ಇಂದು 13 ದೇಶದಲ್ಲಿ ಹಾರಾಡುತ್ತಿದೆ. ಇಂದು ಕಮ್ಯೂನಿಸ್ಟ್ ಪಾರ್ಟಿಯ ಸದಸ್ಯರ ಸಂಖ್ಯೆ 3 ಕೋಟಿ 30 ಲಕ್ಷವಾಗಿದೆ. ಹಲವು ಬಂಡವಾಳಶಾಹೀ ರಾಷ್ಟ್ರಗಳಲ್ಲಿ ಕಮ್ಯೂನಿಸ್ಟ್ ಪಾರ್ಟಿ ಪ್ರಮುಖ ಶಕ್ತಿಯಾಗಿ ಬೆಳೆದಿದೆ. ಪ್ರತಿಯೊಂದು ಕಡೆಯಲ್ಲೂ ಕಮ್ಯೂನಿಸ್ಟ್ ಪಾರ್ಟಿ ಶಾಂತಿ, ಜನತಂತ್ರ, ಸಮಾಜವಾದಗಳ ಹೋರಾಟಗಳಲ್ಲಿ ಎಲ್ಲರಿಗಿಂತಲೂ ಪ್ರಥಮ ಶ್ರೇಣಿಯಲ್ಲಿ ನಿಂತಿದೆ.

ನಲ್ವತ್ತನೆಯ ಸಮಾಜವಾದೀ ಕ್ರಾಂತಿಯ ದಿನಾಚರಣೆಯಲ್ಲೂ 64 ದೇಶಗಳ ಕಮ್ಯೂನಿಸ್ಟ್ ಪಾರ್ಟಿಗಳ ನಾಯಕರು ಉಪಸ್ಥಿತರಾಗಿದ್ದರು. ಅವರೆಲ್ಲರೂ ಸೇರಿ ತಮ್ಮ ಏಕರೂಪವಾದ ಸಮಸ್ಯೆಗಳ ಬಗ್ಗೆ ವಿಚಾರ ವಿನಿಮಯ ನಡೆಸಿದರು. 12 ದೇಶಗಳಲ್ಲಿ ಅಲ್ಲಿಯ ಶ್ರಮಜೀವಿ ಜನತೆಯ ಕೈಯಲ್ಲಿ ಆಡಳಿತಾಧಿಕಾರವಿದೆ. ಆ ದೇಶಗಳ ನಾಯಕರು ಕಳೆತು ಸರ್ವಸಮ್ಮತಿಯಿಂದ ಒಂದು ಘೋಷಣಾ ಪತ್ರವನ್ನು ಅಂಗೀಕರಿಸಿದರು. 64 ದೇಶಗಳ ಕಮ್ಯೂನಿಸ್ಟ್ ನಾಯಕರ ಸಮಾವೇಶದಲ್ಲಿ ವರ್ತಮಾನ ಅಂತರರಾಷ್ಟ್ರೀಯ ಪರಿಸ್ಥಿತಿಗಳ ಬಗ್ಗೆ ದೀರ್ಘ ಚರ್ಚೆ ನಡೆಯಿತು. ಅದರಲ್ಲಿ ಶಾಂತಿಯ ಬಗ್ಗೆ ಒಂದು ಘೋಷಣೆಯನ್ನು ಅಂಗೀಕರಿಸಲಾಯಿತು.

ಚಳುವಳಿಯ ಐಕ್ಯ ಪ್ರದರ್ಶನ

ಈ ಸಮಾವೇಶ ಹಾಗೂ ಅಂಗೀಕೃತ ಘೋಷಣೆಗಳಿಂದ ಕಮ್ಯೂನಿಸ್ಟ್ ಚಳುವಳಿಯ ಐಕ್ಯತೆಯ ಮತ್ತು ಶಕ್ತಿಯ ಅನುಭವವಾಗುತ್ತದೆ. ಇದರಿಂದ ಒಂದು ಮುಖ್ಯವಾದ ಮಾತು ಸ್ಪಷ್ಟವಾಗುವುದೆಂದರೆ 'ಕಮ್ಯೂನಿಸ್ಟ್ ಐಕ್ಯತೆಯು ಛಿದ್ರ ಛಿದ್ರಗೊಂಡಿದೆ, ಅದರಲ್ಲಿ ಒಡಕು ಹುಟ್ಟಿಕೊಂಡಿದೆ. ದೊಡ್ಡ ಸಂಕಟವೇ ಶುರುವಾಗಿದೆ' ಮುಂತಾದ ಪೊಳ್ಳು ಕೂಗುಗಳನ್ನು ಹಾಕಿ ನಿರಂತರ ಪ್ರಚಾರ ನಡೆಸುತ್ತಿದ್ದ ಬಂಡವಾಳಶಾಹಿಯ ಆರೋಪಗಳೆಲ್ಲಾ ಇಂದು ಮಣ್ಣು ಮುಕ್ಕಿವೆ.

ಅಕ್ಟೋಬರ್ ಕ್ರಾಂತಿಯ ಹೆಸರಲ್ಲಿ ಒಂದು ದೊಡ್ಡ ಕುತಂತ್ರವನ್ನೇ ನಡೆಸಲಾಗುತ್ತಿದೆಯೆನ್ನುವ ಸಾಮ್ರಾಜ್ಯಶಾಹಿಯ ದಳ್ಳಾಳಿಗಳ ಪ್ರಚಾರ ತಂತ್ರ ಇಷ್ಟರ ತನಕ ನಡೆದಿತ್ತು. ಆದರೆ ಅವರು ಹೇಳುವಂತೆ ನಾವು ಒಂದು ಪ್ರಬಲ ತಂತ್ರವನ್ನು ನಡೆಸಿದ್ದೇವೆ. ಅದು ಮೂರನೇ ಮಹಾಯುದ್ಧವನ್ನು ಹೂಡಲು ತಂತ್ರ ನಡೆಸುತ್ತಿರುವ, ಯುದ್ಧದ ತಯಾರಿಯಲ್ಲಿರುವ ಯುದ್ಧಕೋರರ ವಿರುದ್ಧ ಶಾಂತಿಯ ತಂತ್ರ. ಅದನ್ನು ಸಾಮ್ರಾಜ್ಯಶಾಹೀ ದಳ್ಳಾಳಿಗಳು ಬಾಯಿ ಬಿಟ್ಟು ಹೇಳಲಾರರು. ಇಂದು ಸಾಮ್ರಾಜ್ಯಶಾಹಿಗಳು ತಮ್ಮ ಬಾಲಬಡುಕ ದೇಶಗಳನ್ನು ಒಂದು ಸೇರಿಸಿ ಗುಂಪುಗಳನ್ನು ಕಟ್ಟಿಕೊಂಡಿದ್ದಾರೆ. ಶತ್ರುವಿನ ವಿರುದ್ಧ ಬಲವಾದ ಶಕ್ತಿಶಾಲಿ ಕೇಂದ್ರವನ್ನು ರಚಿಸಿ, ಯುದ್ಧವನ್ನು ಎದುರಿಸುವ ಹಕ್ಕು ತಮಗೆ ಮಾತ್ರ ಸೇರಿದ್ದೆಂದೂ, ಒಂದುವೇಳೆ ಅದರ ಉಪಯೋಗವನ್ನು ಕಮ್ಯೂನಿಸ್ಟರು ಪಡೆದರೆ ಅದು ಮಾನವತೆಯ ವಿನಾಶದ ನಾಂದಿಯಾದೀತೆಂದೂ ಅವರು ಬೊಬ್ಬಿಡುತ್ತಿದ್ದಾರೆ.

ಆದರೆ ನ್ಯಾಯಪ್ರಿಯ ಜನತೆಯನ್ನು ಕೇವಲ ಪ್ರಚಾರದಿಂದ ಮೋಸಗೊಳಿಸಲು ಸಾಧ್ಯವಿಲ್ಲ. ಕಮ್ಯೂನಿಸ್ಟ್ ಚಳುವಳಿಯು ತನ್ನ ಹುಟ್ಟಿನ ಕಾಲದಿಂದಲೂ ದುಡಿಯುವ ವರ್ಗದ ಜಾಗ್ರತ ಆತ್ಮಶಕ್ತಿಯಾಗಿ ಬೆಳೆದು ಪ್ರಸಿದ್ಧವಾಗಿದೆಯೆನ್ನುವುದು ಎಲ್ಲರಿಗೂ ತಿಳಿದ ಅಂಶ. ತಮ್ಮ ಉದಯ ಕಾಲದಿಂದಲೇ ಕಮ್ಯೂನಿಸ್ಟರು ಮಾರ್ಕ್ಸ್‌ವಾದ—ಲೆನಿನ್‌ವಾದದ ಸಾಮಾನ್ಯ ಸಿದ್ಧಾಂತಗಳ ಪಾಲನೆ ಮಾಡಿಕೊಂಡು ಬಂದಿದ್ದಾರೆ. ಸಮಾಜವಾದ ಮತ್ತು ಅದರ ಮೂಲಕ ಸಾಮ್ಯವಾದದ ಗುರಿಯ ಕಡೆ ಏಕನಿಷ್ಠೆಯಿಂದ ಸಾಗಲು ಪ್ರಯತ್ನಿಸಿದ್ದಾರೆ. ದುಡಿಯುವ ವರ್ಗದ ಕೈಯಲ್ಲಿ ಅಧಿಕಾರವನ್ನು ನೀಡುವ ಹೋರಾಟದಲ್ಲಿ ಸಂಯುಕ್ತ ಪ್ರಯತ್ನಗಳನ್ನೂ ನಡೆಸಿದ್ದಾರೆ. ಪ್ರತಿಯೊಂದು ದೇಶದ ಸ್ವಾತಂತ್ರ್ಯಕ್ಕಾಗಿಯೂ ಹೋರಾಟಗಳನ್ನು ನಡೆಸಿದ್ದಾರೆ. ದೇಶ—ದೇಶಗಳ ಮಧ್ಯೆ ಸ್ನೇಹ—ಸೌಹಾರ್ದಕ್ಕಾಗಿ, ಜನತಂತ್ರಕ್ಕಾಗಿ, ಜನ ಸಾಮಾನ್ಯರ ಹಿತಗಳ ರಕ್ಷಣೆಗಾಗಿ ನಿರಂತರ ಹೋರಾಡಿದ್ದಾರೆ. ಈ ಎಲ್ಲ ಮಹಾನ್ ಉದ್ದೇಶಗಳ ಪೂರ್ತಿಗಾಗಿ ತಮ್ಮ ನಡುವೆ ನಿರಂತರ ಐಕ್ಯತೆ ಬೆಳೆದು ಬರಲೂ ಪ್ರಯತ್ನಗಳನ್ನು ನಡೆಸಿದ್ದಾರೆ.

(ಮುಂದುವರಿಯುವುದು)

ಶೃಂಗ ಸಮ್ಮೇಳನಕ್ಕೆ ರಷ್ಯದ ಸಲಹೆ

ಅಂತರರಾಷ್ಟ್ರೀಯ ಬಿಕ್ಕಟ್ಟನ್ನು ನಿವಾರಿಸುವ ಸಲುವಾಗಿ ನಿರ್ದಿಷ್ಟ ಸಲಹೆಗಳನ್ನು ಪರಿಶೀಲಿಸಲು ಮೂವತ್ತು ರಾಷ್ಟ್ರಗಳ ಅಧಿಪತಿಗಳ ಸಮಾವೇಶವನ್ನು ಮುಂದೆ ಎರಡು ಮೂರು ತಿಂಗಳುಗಳಲ್ಲಿ ಕರೆಯುವುದಾಗಿ ಸೋವಿಯತ್ ರಷ್ಯ ಸೂಚಿಸಿದೆ. ಈ ಸೂಚನೆಯನ್ನು ಇತ್ತೀಚೆಗೆ ರಷ್ಯದ ಪ್ರಧಾನಿ ಬುಲ್ಗಾನಿನ್‌ರವರು ಬ್ರಿಟಿಷ್ ಪ್ರಧಾನಿ ಮ್ಯಾಕ್‌ಮಿಲನ್, ಅಮೇರಿಕದ ಅಧ್ಯಕ್ಷ ಐಸೆನ್ ಹೋವರ್ ಮತ್ತು ಅಟ್ಲಾಂಟಿಕ್ ಕೂಟದ ರಾಷ್ಟ್ರಗಳೂ ಒಳಗೊಂಡು 17 ಇತರ ರಾಷ್ಟ್ರಗಳಿಗೆ ಕಳಿಸಿರುವ ಪತ್ರದಲ್ಲಿ ಒಳಗೊಂಡಿದೆ.

ಈ ಸೂಚನೆಯಲ್ಲಿ ಶೃಂಗ ಸಮ್ಮೇಳನವು ಮುಂದೆ ಎರಡು ಮೂರು ತಿಂಗಳಲ್ಲಿ ಕೂಡಬೇಕೆಂದೂ, ಅದರಲ್ಲಿ ನ್ಯಾಟೋ ಮತ್ತು ವಾರ್ಸಾ ಒಪ್ಪಂದದ ರಾಷ್ಟ್ರಗಳಲ್ಲದೆ ಭಾರತ, ಈಜಿಪ್ಟ್, ಅಫ್ಘಾನಿಸ್ತಾನ್, ಯುಗೋಸ್ಲಾವಿಯ, ಸ್ವೀಡನ್ ಮತ್ತು ಆಸ್ಟ್ರೀಯಾ ದೇಶಗಳೂ ಸಹ ಭಾಗವಹಿಸಬೇಕೆಂದು ಸೂಚಿಸಿದೆ.

ರಷ್ಯದ ಪ್ರಧಾನಿ ಬುಲ್ಗಾನಿನ್ ಈ ಬಗ್ಗೆ ಬರೆದಿರುವ ಪತ್ರದಲ್ಲಿ ಇತ್ತೀಚೆಗೆ ಬ್ರಿಟಿಷ್ ಪ್ರಧಾನಿ ಮ್ಯಾಕ್‌ಮಿಲನ್‌ರವರು ಸಲಹೆ ಇತ್ತಿರುವ ನಿರಾಕ್ರಮಣ ಒಪ್ಪಂದದ ಸೂಚನೆಯನ್ನು ಸ್ವಾಗತಿಸಿದ್ದಾರೆ. ಶೃಂಗ ಸಮ್ಮೇಳನವು ನ್ಯೂಕ್ಲಿಯರ್ ಶಸ್ತ್ರಾಸ್ತ್ರಗಳ ಪ್ರಯೋಗವನ್ನು ಕಡೆಯಪಕ್ಷ ಎರಡು ವರ್ಷಗಳ ಕಾಲವಾದರೂ ನಿಷೇಧಿಸುವ ಹಾಗೆ ಮಾಡುವ ಸಲಹೆಯನ್ನು ಪರಿಶೀಲಿಸಬೇಕೆಂದು ಸೂಚಿಸಲಾಗಿದೆ.

ಶಾಶ್ವತವಾದ ಶಾಂತಿಗಾಗಿ ಮತ್ತು ಅಂತರ ರಾಷ್ಟ್ರೀಯ ಬಿಕ್ಕಟ್ಟಿನ ವಾತಾವರಣದ ಸಡಿಲತೆಗಾಗಿ ರಷ್ಯ ಶ್ರಮಿಸುತ್ತ ಬಂದಿದೆ. ಕಳೆದ ಕೆಲವು ವಾರಗಳಲ್ಲಿ ಅಂತರ ರಾಷ್ಟ್ರೀಯ ಕ್ಷೇತ್ರದಲ್ಲಿ ಮಹತ್ವಪೂರ್ಣವಾದ ಬದಲಾವಣೆಗಳಾಗುತ್ತಿವೆ. ರಾಷ್ಟ್ರಗಳ ಅಧಿಪತಿಗಳು ಸಮ್ಮೇಳನ ನಡೆಸಿ ಎಲ್ಲ ವಿವಾದಗಳನ್ನು ಪರಿಶೀಲಿಸಬೇಕೆಂಬ ಒತ್ತಾಯ ಬರುತ್ತಿದೆ. ಬ್ರಿಟನ್, ಅಮೇರಿಕ, ರಷ್ಯ ಮತ್ತು ಫ್ರಾನ್ಸ್ ನಾಲ್ಕು ರಾಷ್ಟ್ರಗಳ ಸಮಾವೇಶ ಮಾತ್ರವೇ ಅಲ್ಲದೆ, ಇತರ ರಾಷ್ಟ್ರಗಳೂ ಅದರಲ್ಲೂ ಮುಖ್ಯವಾಗಿ, ಭಾರತ, ಈಜಿಪ್ಟ್, ಯುಗೋಸ್ಲೇವಿಯ ಮೊದಲಾದ ತಟಸ್ಥ ರಾಷ್ಟ್ರಗಳು, ಸಮ್ಮೇಳನದಲ್ಲಿ ಭಾಗವಹಿಸುವುದು ಉದ್ದೇಶ ಸಾಧನೆಗೆ ಅನುವಾಗುವುದು. ಇಂಥ ಸಮಾವೇಶವಾಗಲೆಂಬುದೇ ಎಲ್ಲ ಶಾಂತಿಪ್ರಿಯರ ಬಯಕೆಯಾಗಿದೆ.

ರಷ್ಯದ ಈ ಸಲಹೆಯನ್ನು ಬ್ರಿಟಿಷ್ ಪ್ರಧಾನಿ ಮ್ಯಾಕ್‌ಮಿಲನ್‌ರವರು ಅದು ಕಾರ್ಯಗತವಾಗಲಿಕ್ಕಿಲ್ಲವೆಂದೂ ಮತ್ತು ಪ್ರಯೋಜನಕಾರಿಯಾಗದೆಂದೂ ತಿಳಿಸಿ, 30 ರಾಷ್ಟ್ರಗಳ ಸಮ್ಮೇಳನವನ್ನು ವಿರೋಧಿಸಿದ್ದಾರೆ. ಬದಲು ರಾಷ್ಟ್ರಗಳ ಸಂಖ್ಯೆ ಕಡಿಮೆ ಇರಬೇಕೆಂದೂ, ಮತ್ತು ಆರಂಭದಲ್ಲಿ ವಿದೇಶಾಂಗ ಸಚಿವರುಗಳ ಸಮ್ಮೇಳನ ನಡೆದು ಕಾರ್ಯಕ್ರಮಗಳ ಬಗ್ಗೆ ಒಪ್ಪಂದವಾಗಬೇಕೆಂದೂ ಹೇಳಿದ್ದಾರೆ. ಅಮೇರಿಕಾದ ಪತ್ರಕರ್ತರುಗಳು ರಷ್ಯದ ಸಲಹೆಯನ್ನು ತಿರಸ್ಕರಿಸಿದ್ದಾರೆ.

ಬುಲ್ಗಾನಿನ್ ಸಲಹೆಯು ವಿಶ್ವದ ಬಿಕ್ಕಟ್ಟಿನ ವಾತಾವರಣವನ್ನು ಸಡಿಲಗೊಳಿಸುವುದೆಂದು ಎಲ್ಲರೂ ಸ್ವಾಗತಿಸಿದ್ದಾರೆ. ಲಂಡನ್ನಿನ ಕನ್ಸರ್‌ವೇಟಿವ ಪತ್ರಿಕೆ "ಡೇಲಿ ಮಿರ್ರರ್" ಈ ಬಗ್ಗೆ ಬರೆಯುತ್ತಾ ಅಮೇರಿಕದ ಅಧ್ಯಕ್ಷ ಐಸನ್‌ಹೋವರು ಕಾಂಗ್ರೆಸ್ಸನ್ನು ಉದ್ದೇಶಿಸಿ ಮಾತನಾಡಿದಂದೇ ಬುಲ್ಗಾನಿನ್‌ರ ಈ ಸಲಹೆಯು ಬಂದು ವಿಶ್ವದ ಗಮನವನ್ನು ಸೆಳೆದಿದೆ. ಐಕರ ಭಾಷಣದಲ್ಲಿ ಶಾಂತಿಯ ಬಗ್ಗೆ ಸಂಧಾನಕ್ಕೆ ಯಾವ ನಿರ್ದಿಷ್ಟವಾದ ಸೂಚನೆಗಳೂ ಇಲ್ಲದಿರುವಾಗ ಬುಲ್ಗಾನಿನ್‌ರ ಪತ್ರವು ಶೀಘ್ರದಲ್ಲಿಯೇ ಶೃಂಗ ಸಮ್ಮೇಳನವೊಂದು ನಡೆಯಬೇಕೆಂದೂ ಸ್ಪಷ್ಟ ಸೂಚನೆ ಯಿತ್ತಿದೆ. ಮತ್ತೆ ಮಾಸ್ಕೋ ಬುದ್ಧಿವಂತಿಕೆಯಿಂದ ಮುಂದೆ ಬಂದಿದೆ. ಮ್ಯಾಕ್‌ಮಿಲನ್‌ರವರ ನಿರಾಕ್ರಮಣ ಒಪ್ಪಂದದ ಸಲಹೆಯನ್ನು ಬುಲ್ಗಾನಿನ್‌ರವರು ಸ್ವಾಗತಿಸಿರುವುದು ವಿಶ್ವದ ಜನತೆಯ ಮೇಲೆ ಭಾರೀ ಪರಿಣಾಮವಾಗುವುದರಲ್ಲಿ ಸಂದೇಹವಿಲ್ಲ, ಎಂದು ಟೀಕಿಸಿದೆ. ಲಂಡನ್ನಿನ "ಟೈಂಸ್" ಪತ್ರಿಕೆ ಈ ಬಗ್ಗೆ ವರದಿ ಮಾಡುತ್ತಾ ಐಸೆನ್ ಹೋವರ್ ಮತ್ತೊಮ್ಮೆ ಸದವಕಾಶವನ್ನು ಕಳೆದುಕೊಂಡು ರಷ್ಯವೇ ಶೃಂಗಸಮ್ಮೇಳನವನ್ನು ಕರೆಯಲು ಆಹ್ವಾನಿಸುವಂತೆ ಮಾಡಿದೆ ಎಂದು ಹೇಳಿದೆ.

ಪರಸ್ಪರ ಸಂಧಾನ ನಡೆಸಲು ಸೋವಿಯತ್ ಸರಕಾರವು ಮಾಡುತ್ತಿರುವ ಮೇಲಿಂದ ಮೇಲೆ ಬರುತ್ತಿರುವ ಸಲಹೆಗಳು ಪಶ್ಚಿಮ ರಾಷ್ಟ್ರಗಳಲ್ಲಿ ಕಳವಳ ಉಂಟು ಮಾಡಿದೆ.

ಷೇಕ್ ಅಬ್ದುಲ್ಲಾರ ಬಿಡುಗಡೆ

ಕಳೆದ ನಾಲ್ಕೂವರೆ ವರ್ಷಗಳಿಂದ ಸ್ಥಾನಬದ್ಧತೆಯಲ್ಲಿದ್ದ ಕಾಶ್ಮೀರದ ಮಾಜಿ ಪ್ರಧಾನಿ ಷೇಕ್ ಮಹಮ್ಮದ್ ಅಬ್ದುಲ್ಲಾರವರನ್ನು ಕಳೆದ ಬುಧವಾರದಂದು ಬಿಡುಗಡೆ ಮಾಡಲಾಯಿತು. ಷೇಕ್ ಅಬ್ದುಲ್ಲಾರವರನ್ನು ಕಾಶ್ಮೀರ ಜನತೆಗೆ ವಿರೋಧವಾಗಿ, ಭಾರತದ ವಿರೋಧವಾಗಿ ಒಳಸಂಚು ನಡೆಸುತ್ತಿದ್ದರೆಂದು ಸ್ಥಾನಬದ್ಧತೆಯಲ್ಲಿರಿಸಲಾಗಿತ್ತು.

ಷೇಕ್ ಅಬ್ದುಲ್ಲಾರ ಬಂಧನದಿಂದೀಚೆಗೆ ಕಾಶ್ಮೀರದ ಪ್ರಶ್ನೆಯಲ್ಲಿ, ಅಂತರ ರಾಷ್ಟ್ರೀಯ ಪರಿಸ್ಥಿತಿಯಲ್ಲಿ, ಭಾರತ–ಪಾಕೀಸ್ಥಾನಗಳ ಸಂಬಂಧದಲ್ಲಿ ಅನೇಕ ಬದಲಾವಣೆಗಳಾಗಿವೆ. ಇಂದು ಕಾಶ್ಮೀರದಲ್ಲಿ ಚುನಾವಣೆಗಳು ನಡೆದು, ಚುನಾಯಿತ ಸರಕಾರ ಅಸ್ತಿತ್ವದಲ್ಲಿದೆ. ಆರಂಭದಲ್ಲಿ ಕಾಶ್ಮೀರವು ಭಾರತಕ್ಕೆ ಸೇರಿರುವುದು ಸರಿಯೆಂದು ಘೋಷಿಸಿದ ಷೇಕ್ ಅಬ್ದುಲ್ಲಾರವರು 1953ರ ವೇಳೆಗೆ ಕಾಶ್ಮೀರದ ಜನತೆಯ ಆಶಯವನ್ನು ತಿಳಿಯಲು ಪ್ಲೆಬಿಸೈಟ್ ನಡೆಯಬೇಕೆಂದು ತಿಳಿಸಿದರು. ತಮ್ಮ ಹಿಂದಿನ ನಿಲುವಿನಿಂದ ಹಿಂದಕ್ಕೆ ಸರಿದರು.

ಬಂಧನದಿಂದ ಬಿಡುಗಡೆಯಾದ ನಂತರ ಅಬ್ದುಲ್ಲಾರವರು ಪತ್ರಿಕಾ ಸಮ್ಮೇಳನದಲ್ಲಿ ಇತ್ತಿರುವ ಹೇಳಿಕೆಯು ಅವರು ತಮ್ಮ ಹಿಂದಿನ ಪ್ಲೆಬಿಸೈಟ್ ನಿಲುವಿನಿಂದ ಮುಂದುವರಿದಿಲ್ಲವೆಂದು ಸ್ಪಷ್ಟವಾಗುತ್ತದೆ. ಅವರಿಗೆ ಇಂದು ನ್ಯಾಷನಲ್ ಕಾನ್‌ಫರೆನ್ಸಿನಲ್ಲಾಗಲೀ ಅಥವ ಬೇರೇ ವಿಭಾಗದ ಜನತೆಯಲ್ಲಾಗಲೀ ಅಷ್ಟಾಗಿ ಬೆಂಬಲ ದೊರಕುವುದು ದುರ್ಲಭ. ಪ್ಲೆಬಿಸೈಟ್ ಪಕ್ಷದ ಮತ್ತು ಪಾಕಿಸ್ತಾನದ ಪರ ಇರುವ ಗುಂಪು ಮಾತ್ರ ಅವರಿಗೆ ಬೆಂಬಲವಾಗಿರುವರೆಂದು ತೋರಿಬರುತ್ತದೆ. ಷೇಕ್ ಅಬ್ದುಲ್ಲಾರವರ ಹೇಳಿಕೆಯನ್ನು ಪರಿಶೀಲಿಸಿದಲ್ಲಿ ಅಸಹಾಯಕತೆ ಎದ್ದು ಕಾಣುತ್ತದೆ. ಹಾಗೂ ಕಾಶ್ಮೀರದಲ್ಲಿ ಸಣ್ಣಪುಟ್ಟ ಗಲಭೆ ಉಂಟುಮಾಡಬಹುದಾದ ಸನ್ನಿವೇಶವೂ ಕಾಣಬರುತ್ತದೆ. ಪ್ರಸಕ್ತ ಕಾಶ್ಮೀರ ಪ್ರಧಾನಿ ಬಕ್ಷಿಗುಲಾಂ ಮಹಮ್ಮದ್ ಅಂಥ ಘಟನೆಗಳಿಗೆ ಅವಕಾಶ ಕೊಡುವುದಿಲ್ಲವೆಂದು ಹೇಳಿಕೆಯನ್ನಿತ್ತಿದ್ದಾರೆ. ಬಿಡುಗಡೆಯ ನಂತರ ಅಬ್ದುಲ್ಲಾರವರ ಚಟುವಟಿಕೆಯನ್ನು ಕುತೂಹಲದಿಂದ ನಿರೀಕ್ಷಿಸಬೇಕಾಗಿದೆ.

ಷೇಕ್ ಅಬ್ದುಲ್ಲಾರವರ ಬಿಡುಗಡೆಯನ್ನು ಎಲ್ಲ ಪ್ರಜಾಪ್ರಭುತ್ವವಾದಿಗಳೂ ಒತ್ತಾಯ ಪಡಿಸುತ್ತಿತ್ತು. ಇವರ ಬಿಡುಗಡೆ ಸ್ವಾಗತಾರ್ಹವಾದುದಾಗಿದೆ. ಅಬ್ದುಲ್ಲಾರವರು ಕಾಶ್ಮೀರದ ಪ್ರಸಕ್ತ ಪರಿಸ್ಥಿತಿಯನ್ನರಿತು ವರ್ತಿಸುವರೆಂದು ಆಶಿಸುತ್ತೇವೆ. ಭಾರತದೊಂದಿಗೆ ಕಾಶ್ಮೀರದ ಸೇರ್ಪಡೆ ಎಲ್ಲ ರೀತಿಯಲ್ಲಿಯೂ ಕೊನೆಗೊಂಡಿದೆ. ಕಾಶ್ಮೀರ ಭಾರತದ ಅಂಗವಾಗಿದೆ. ಜನತೆಯ ಈ ತೀರ್ಮಾನವನ್ನು ಒದಲಿಸಲು ಸಾಧ್ಯವಿಲ್ಲವೆಂಬುದನ್ನು ಅವರು ಅರಿಯಬೇಕಾಗಿದೆ.

ಭಾರತಕ್ಕೆ ಡಾ॥ ಗ್ರಹಾಂ ಪುನರಾಗಮನ

ಭಾರತ ಮತ್ತು ಪಾಕಿಸ್ತಾನಗಳ ನಡುವೆ ಸಂಧಾನ ನಡೆಸಿ ಕಾಶ್ಮೀರ ಪ್ರಶ್ನೆಯ ಇತ್ಯರ್ಥಕ್ಕೆ ಪರಿಹಾರವನ್ನು ಹುಡುಕಲು ಹಿಂದೊಮ್ಮೆ ಬಂದು ವಿಫಲರಾಗಿ ಹಿಂತಿರುಗಿದ ಡಾ॥ ಗ್ರಹಾಂ ಮತ್ತೆ ಭಾರತಕ್ಕೆ ಬಂದಿದ್ದಾರೆ. ವಿಶ್ವಸಂಸ್ಥೆಯ ಪ್ರತಿನಿಧಿಯಾಗಿ ಬರುತ್ತಿರುವ ಡಾ॥ ಗ್ರಹಾಂ ಹೆಚ್ಚೇನೂ ಸಾಧಿಸಲಾರರು. ಹಿಂದಿನಂತೆ ಈ ಬಾರಿಯ ಪ್ರವಾಸವೂ ಪ್ರವಾಸವಾಗಿ ಮುಗಿಯುವುದು ಖಂಡಿತವೆಂದು ತೋರುತ್ತದೆ.

ಇಂಡೋನೇಷಿಯಾ ನಿಲುವಿಗೆ ಭಾರತದ ಬೆಂಬಲ

ಭಾರತದಲ್ಲಿ ಅತಿಥಿಯಾಗಿರುವ ಸೂಕಾರ್ನೋರವರು, ನೆಹ್ರೂರೊಡನೆ ನಡೆಸಿದ ಮಾತುಕತೆಯಲ್ಲಿ, ಪಶ್ಚಿಮ ಇರೇನಿನ ಡಚ್ಚರ ಆಳ್ವಿಕೆ ಕೊನೆಗೊಂಡು ಅದು ನ್ಯಾಯವಾಗಿ ಇಂಡೋನೇಷಿಯಕ್ಕೆ ಬರಬೇಕೆಂಬುದರ ಬಗ್ಗೆ ಇಂಡೋನೇಷಿಯಾ ಜನತೆಯ ಪ್ರಬಲಾಭಿಪ್ರಾಯ ಉಳ್ಳದೆಂದು ತಿಳಿಸಿದರು: ನೆಹ್ರೂರವರು ಯಾವ ರೂಪದಲ್ಲಿ ಆಗಲಿ ವಸಾಹತುಶಾಹಿ ಇರಬಾರದೆಂದೂ, ಪಶ್ಚಿಮ ಇರೇನಿನ ಪ್ರಶ್ನೆ ಶಾಂತರೀತಿಯಲ್ಲೇ ಪರಿಹಾರವಾಗುವುದೆಂದು ಇದಕ್ಕುತ್ತರವಾಗಿ ಹೇಳುತ್ತಾ ಭಾರತದ ಬೆಂಬಲವನ್ನು ಸೂಚಿಸಿದ್ದಾರೆ.

ಅಧ್ಯಕ್ಷ ಸುಕಾರ್ನೋರವರು ಬಹು ಬೇಗನೆ ಆರೋಗ್ಯಾಭಿವೃದ್ಧಿಹೊಂದಿ, ಇನ್ನು ಮುಂದೆಯೂ ತಮ್ಮ ದೇಶದ ಜನತೆಯ ಸೇವೆ ಕೈಕೊಳ್ಳುವಂತಾಗಲೆಂದು ಭಾರತದ ಸರಕಾರವೂ ಜನತೆಯೂ ಆಶಿಸುತ್ತಿದೆ ಎಂದು ನೆಹ್ರೂ ಅಧ್ಯಕ್ಷ ಸುಕಾರ್ನೋರವರಿಗೆ ತಿಳಿಸಿದ್ದಾರೆ.

ಅಧ್ಯಕ್ಷ ಸುಕಾರ್ನೋರವರಿಗೆ ಕಲ್ಕತ್ತೆ ದೆಹಲಿ ಮತ್ತು ಮುಂಬಾಯಿಯಲ್ಲಿ ಅದ್ಭುತ ಹಾಗೂ ಹಾರ್ದಿಕ ಸ್ವಾಗತವನ್ನು ಭಾರತದ ಜನತೆ ನೀಡಿದ್ದಾರೆ.

ಯೋಗ್ಯತೆಗೆ ಬೆಲೆ ಇರುವುದು ರಷ್ಯದಲ್ಲಿ ಮಾತ್ರ — ಡಾ॥ ಮೋದಿ

"ವಿಶ್ವದಲ್ಲಿ ಎಲ್ಲಿಯಾದರೂ ಯೋಗ್ಯತೆಗೆ ಬೆಲೆ ಇದ್ದರೆ ಅದು ರಷ್ಯಾದಲ್ಲಿ" ಎಂದು ಮೋಸ್ಕೋದಲ್ಲಿ ಇತ್ತೀಚೆಗೆ ನಡೆದ ಯುವ ಜನ ಸಮ್ಮೇಳನದಲ್ಲಿ ಭಾರತ ಸೇವಾ ದಳದ ಪ್ರತಿನಿಧಿಯಾಗಿ ಭಾಗವಹಿಸಿದ 'ನೇತ್ರದಾನಿ' ಪದ್ಮಶ್ರೀ ಡಾ॥ ಮೋದಿಯವರು, ರಷ್ಯಾದ ತಮ್ಮ ಪ್ರವಾಸಾನುಭವದ ಕುರಿತಾಗಿ ಪತ್ರಿಕಾ ಪ್ರತಿನಿಧಿಗಳಿಗೆ ತಿಳಿಸಿದರು

ರಷ್ಯಾದ ಜನತೆಯು ಕಮ್ಯೂನಿಸ್ಟ್ ಪಾರ್ಟಿಯ ಮೇಲೆ ಅಪಾರ ಪ್ರೇಮವಿಟ್ಟಿದೆಯೆಂದೂ, ಕಮ್ಯೂನಿಸ್ಟ್ ಪಾರ್ಟಿಯು ಜನರನ್ನು ಉತ್ತಮ ಮಾರ್ಗದಲ್ಲಿ ತಯಾರು ಮಾಡುತ್ತಿದೆಯೆಂದೂ ಡಾ॥ ಮೋದಿ ಹೇಳುತ್ತಾ, 'ಅಲ್ಲಿನ ಜನರನ್ನು ಪ್ರಾಣಿಗಳಂತೆ ಕಾಣಲಾಗುತ್ತಿದೆ ಎಂದು ಹೇಳುವುದು ಸರಿಯಲ್ಲ. ಅಲ್ಲಿಯ ಜನರು ಸುಖವಾಗಿದ್ದಾರೆ. ಕಮ್ಯೂನಿಸ್ಟ್ ಸರಕಾರ ಜನತೆಯ ಮೂಲ ಅಗತ್ಯಗಳನ್ನು ಪೂರೈಸಿದೆ.' ಎಂದು ಡಾ॥ ಮೋದಿಯವರು ತಿಳಿಸುತ್ತಾರೆ.

ರಷ್ಯಾದ ಜನತೆಯ ನಡೆ, ನುಡಿ, ವ್ಯವಹಾರಗಳಲ್ಲಿ ಭಾರತೀಯ ಸಂಸ್ಕೃತಿಯು ವೇದಿಯುವರ ಕಣ್ಣಿಗೆ ಕಂಡಿವಯಾಗಿ ಅವರ ಹೇಳಿಕೆ. ರಷ್ಯನರು ಒಳ್ಳೆಯವರು, ವಿನಯಶೀಲರು, ಡಂಭಾಚಾರವಿಲ್ಲದವರು ಮತ್ತು ವಿಜ್ಞಾನ ಹಾಗೂ ಶಾಂತಿಪ್ರಿಯರೆಂದೂ, ಅವರ ಸತ್ಯ ಮತ್ತು ನೀತಿಯ ಮಟ್ಟಕ್ಕೆ ನಿದರ್ಶನವಾಗಿ ಅಲ್ಲಿನ ಅಂಚೆ ಕಚೇರಿಯಲ್ಲಿ ರಿಜಿಸ್ಟರ್ ಮಾಡಿದರೆ ರಶೀದಿ ಕೊಡಲಾಗುವುದಿಲ್ಲವೆಂದು ಹೇಳಿದರು.

ರಷ್ಯಾದಲ್ಲಿ ವಿಜ್ಞಾನಿಗಳಿಗೆ ಹಾಗೂ ಲೇಖಕರಿಗೆ, ಸಚಿವರಿಗಿಂತ ಹೆಚ್ಚು ಸಂಬಳವಿದೆಯೆಂದೂ ಅಲ್ಲಿನ ಸಚಿವರು ಮತ್ತು ಅಧಿಕಾರಿಗಳು ತಾವು ಜನತೆಯ ಸೇವಕರು ಎಂಬ ಭಾವನೆಯಿಂದ ಕೆಲಸ ಮಾಡುತ್ತಿದ್ದು, ಅವರು ಅತ್ಯಂತ ವಿನಯಪೂರ್ಣರಾಗಿರುವರೆಂದು ಡಾ॥ ಮೋದಿಯವರು ರಷ್ಯಾದ ಶ್ಲಾಘನೆಯನ್ನು ಮನಸಾರೆ ಮಾಡಿದ್ದಾರೆ.

ಶಿಕ್ಷಕ ಮತ್ತು ಗೆಳೆಯರಾಗಿ ವಿ. ಐ. ಲೆನಿನ್

ವ್ಲಾದಿಮಿರ್ ಇಲ್ಯಿಚ್ ಲೆನಿನ್‌ರ ಬಗ್ಗೆ ನಾನು ಮೊಟ್ಟಮೊದಲಾಗಿ ತಿಳಿದದ್ದು—ನಾದೆಝ್ದಾ ಕೊನ್‌ಸ್ತಾಂತಿನೋವ್ನಾ ಕ್ರುಪ್‌ಸ್ಕಾಯಾ (ಲೆನಿನರ ಪತ್ನಿ)ಯವರಿಂದ. ನಾವಿಬ್ಬರೂ ಆಗ, ಕಾರ್ಮಿಕರ ಆದಿತ್ಯವಾರ ಶಾಲೆಯಲ್ಲಿ ಶಿಕ್ಷಕರಾಗಿದ್ದೆವು; ಆಗಾಗ್ಗೆ ಒಬ್ಬರನ್ನೊಬ್ಬರು ಭೇಟಿಮಾಡುತ್ತಿದ್ದೆವು. ಅಂದಿನಿಂದ ಇಂದಿನವರೆಗೂ, ಭೂಗತ ಜೀವನದ ಕಷ್ಟವನ್ನೂ ದೇಶಭ್ರಷ್ಟತೆಯನ್ನೂ ಎದುರಿಸಿ,ನಮ್ಮ ಸಂಪರ್ಕವು ಕಡಿಯದೇ ಉಳಿದಿತ್ತು.

ವಿದೇಶದಿಂದ ವ್ಲಾಡಿಮಿರ್ ಇಲ್ಯಿಚ್‌ರು 1902—05ರಲ್ಲಿ, ರಷ್ಯಾಕ್ಕೆ ಬರೆದ ಪತ್ರದ ನೆನಪಿದೆ—ನನಗೆ. ಅಂದು ನಾವು ರಾಬೊಚೆಯಾ ಮಿಸಲ್ ಮತ್ತದರ ಶಿಷ್ಯವೃಂದ ಹಾಗೂ 'ಆರ್ಥಿಕ ತಜ್ಞ'ರೆದುರೂ ಮತ್ತು ಕೆಲ ಕಾಲಾನಂತರ ಮೆನ್ಶೆವಿಕರೆದುರೂ ಪ್ರಚಂಡವಾದ ಹೋರಾಟವನ್ನೇ ನಡೆಸುತ್ತಿದ್ದೆವು. ಹಾಗೂ ನಮ್ಮಲ್ಲಿ ಹಲವಾರು ಕಾರ್ಯಕರ್ತರು ದಸ್ತಗಿರಿ ಮಾಡಲ್ಪಟ್ಟ ಕಾಲವದು. ನಮಗೆ ಕಾಮ್ರೇಡರುಗಳ ಅಗತ್ಯವಿತ್ತು. ಅತಿ ಜಾಗರೂಕತೆಯಿಂದ ಹೊಸ ಕಾಮ್ರೇಡರನ್ನು ನಾವು ಪಾರ್ಟಿಗೆ ಸೇರಿಸುತ್ತಿದ್ದೆವು. ಲೆನಿನರಿಗೆ ಪತ್ರ ಮುಖೇನ, ಈ ವಿಷಯ ದೂರು ಕೊಡುತ್ತಿದ್ದೆವು. ಇದಕ್ಕಾಗಿ ನಮ್ಮನ್ನು ಉಗ್ರವಾಗಿ ಖಂಡಿಸುತ್ತಾ, 1905ರಲ್ಲಿ ಬರೆದ ಕಾಗದದಲ್ಲಿ: "ಯುವ ಶಕ್ತಿಗಳು ಅತ್ಯಾವಶ್ಯಕ. ಜನರ ಕಮ್ಮಿಯಿದೆ ಎಂದು ಹೇಳುವವರನ್ನು ದೂರ ಮಾಡಲು ನಾನು ಸಲಹೆ ಕೊಡುವೆ. ರಷ್ಯದಲ್ಲಿ ಅಪಾರ ಜನರಿದ್ದಾರೆ. ಯುವಜನರಿಗೆ ಎದರದಿರಿ. ನಿಮ್ಮ ಆಯ್ಕೆಯಲ್ಲಿ ವೈಶಾಲ್ಯವಿರಲಿ ಧೈರ್ಯವಿರಲಿ; ಹೆಚ್ಚಿನ ಧೈರ್ಯ—ವೈಶಾಲ್ಯ, ಅಧಿಕಾಧಿಕ ವಿಶಾಲ ಮನೋಭಾವ ಮತ್ತು ಧೈರ್ಯ ಪ್ರವೃತ್ತಿಯಿಂದ ಆಯ್ಕೆ ಮಾಡುವ ಆವಶ್ಯಕತೆ ಇದೆ" ಎಂದು ಲೆನಿನರು ಬರೆದಿದ್ದಾರೆ.

ಪ್ರಥಮ ಕ್ರಾಂತಿಯ ತುಫಾನಿನ ದಿನಗಳು. ಸಶಸ್ತ್ರ ಕ್ರಾಂತಿಯ ಸಿದ್ಧತೆಯಲ್ಲಿ ನಾವು ಮುಳುಗಿದ್ದೇವೆ. ಆಗ ಯಾವುದು,ಹೇಗಾಗಬೇಕೆಂದು ಕಲಿಸಿಕೊಡುವ ಲೆನಿನರ ಕಾಗದವಿದು: "ಯುವಜನರ ಬಳಿಗೆ ಹೋಗಿರಿ. ಯುವಜನರ ಮಧ್ಯೆ - ಕಾರ್ಮಿಕರ ಮಧ್ಯೆ - ಹೆಚ್ಚಾಗಿ ಕಾರ್ಮಿಕರ ನಡುವೆ, ಹೋರಾಡುವ ತಂಡಗಳನ್ನು, ಎಲ್ಲಾದರಲ್ಲಿ,ಎಲ್ಲಾ ಕಡೆಗಳಲ್ಲಿ ಇದೀಗರಚಿಸಿರಿ. 3, 10, 30 ಜನರನ್ನೊಳಗೊಂಡ ತುಕಡಿಗಳನ್ನು ನೇರವಾಗಿ ಸಂಘಟಿಸಿರಿ. ಕಾರ್ಮಿಕರನ್ನು ಎಂಥ ತೀವ್ರ ಹೋರಾಟಕ್ಕೂ ಸದಾ ಸನ್ನದ್ಧರನ್ನಾಗಿ ಮಾಡಬೇಕೆಂದು ಲೆನಿನ್ ನಮಗೆ ತಿಳಿಸುತ್ತಿದ್ದರು"

ಇ. ಡಿ. ಸ್ತಾಸೋವಾ



ಕೇಂದ್ರ ಸಮಿತಿಯ ಪ್ರತಿನಿಧಿಯಾಗಿ, 1905ರ ಆಗಸ್ಟ್ ತಿಂಗಳಾಂತ್ಯದಲ್ಲಿ, ನಾನು ಜಿನೀವಾಕ್ಕೆ ತೆರಳಿದೆ. ಅಲ್ಲಿ ಪ್ರಪ್ರಥಮವಾಗಿ ಮುಖತಃ ವ್ಲಾದಿಮಿರ್ ಇಲ್ಯಿಚ್ ಲೆನಿನ್‌ರನ್ನು ನಾನುಕಂಡೆ. ಲೆನಿನರಲ್ಲಿಗೆ ಹೋದೆ ಅವರೊಬ್ಬರೇ ಹೊರಗಿನ ಕೋಣೆ (ಅದೇ ಅಡಿಗೆ ಮತ್ತು ಊಟದ ಕೋಣೆಯೂ ಆಗಿತ್ತು)ಯಲ್ಲಿ ಕುಳಿತಿದ್ದರು. ನನಗೆ ಕೂರಲು ಕುರ್ಚಿಯಿತ್ತರು. ಇದೇ, ಲೆನಿನ್, ನದೇಝ್ದಾ ಕೊನ್‌ಸ್ತಾಂತಿನೋವ್ನಾ ಮತ್ತು ಅವಳ ತಾಯಿ ಎಲಿಝವೇತಾ ವಾಸಿಲ್ಯೇವ್ನಾರ ಮನೆ.

ಲೆನಿನರು ಕೂಡಲೇ ನನ್ನ ಮೇಲೆ ಪ್ರಶ್ನೆಗಳ ಸುರಿಮಳೆಯನ್ನೇ ಕರೆದರು: ಸೈಂಟ್‌ಪೀಟರ್ಸ್‌ಬರ್ಗ್‌ಮಿತಿ, ವಿಷಯ ರಷ್ಯಾದಲ್ಲಿ ಏನೆಲ್ಲಾ ಮಾಡಲಾಗುತ್ತಿದೆ...ಹೀಗೆ ಎಲ್ಲಾ ಬಗ್ಗೆಯೂ, ಕೇಳಿದರು. ಕೆಲವು ಸಮಯದ ಹಿಂದೆಯೇ 1905ರ ವಸಂತ ಮತ್ತು ಸೆಕೆಗಾಲದಲ್ಲಿ ವೈದ್ಯರ, ವಕೀಲರ, ಶಿಕ್ಷಕರ ಹಾಗೂ ಇತರ ಬುದ್ಧಿಜೀವಿಗಳ ಸಮ್ಮೇಳನವೊಂದುಜರುಗಿತ್ತು. ಇಲ್ಲಿ, ಸಂಘಗಳನ್ನು ಸ್ಥಾಪಿಸಲಾಯಿತು. ಇನೇ "ಸಂಘಗಳ-ಸಂಘ''ವನ್ನು ನಿರ್ಮಿಸಿತು. ಈ ಸಮ್ಮೇಳನ,ಸಂಘಗಳಲ್ಲಿ 'ಲಿಬರಲ್'ಗಳೊಡನೆ ತೀವ್ರ ಹೋರಾಟವಾಗಿತ್ತು. ಲೆನಿನ್‌ರಿಗೆ ಇವೆಲ್ಲವನ್ನು ಹೇಳಿದೆ. ಅವರು ಈ "ಬಗ್ಗೆ, ನಮ್ಮ ಸ್ಥಳೀಯ ರಷ್ಯನ್ ಕಾಲೊನಿಗೆ ನೀವೊಂದು ವರದಿ ಕೊಡಬೇಕಾಗಿದೆ; ತಿಳಿದಿದೆ ತಾನೆ!' ಎಂದರು. ನಾನು ತಬ್ಬಿಬ್ಬಾದೆ. ಹಿಂದೆಂದೂ ನಾನು ವರದಿ ಒಪ್ಪಿಸಿದ್ದಿಲ್ಲ. ಆದರೆ ಲೆನಿನ್, ಇದು ಅತ್ಯಾವಶ್ಯಕವೆಂದು ನನ್ನನ್ನು ಸಮಾಧಾನ ಪಡಿಸಿದರು. ವರದಿ ತಯಾರು ಮಾಡುತ್ತಿದ್ದಾಗ ನಾನರಿತೆ—ವ್ಲಾದಿಮಿರ್ ಇಲ್ಯಿಚ್ ಎಂಥಾ ಅಪ್ರತಿಮ ಶಿಕ್ಷಕ ಮತ್ತು ಕಾಮ್ರೇಡರೆಂದು! ನನ್ನ ವರದಿಯ ರೂಪು - ರೇಷೆ ತಿದ್ದಲು ಸಹಾಯ ಮಾಡಿದರು. ನ್ಯೂನತೆಗಳನ್ನು ತಾಳ್ಮೆಯಿಂದ ಎತ್ತಿ ತೋರಿದರು. ಆ ಸಭೆಯ ಅಧ್ಯಕ್ಷತೆಯನ್ನು ಅವರೇ ವಹಿಸಿದ್ದರು. ನನ್ನ ವರದಿ ವಾಚನವಾದ ನಂತರ ಕೆಲವೇ ಶಬ್ದಗಳಲ್ಲಿ ಪುನಃ ನನ್ನ ತಪ್ಪುಗಳನ್ನು ಎತ್ತಿ ನುಡಿದರು.

1905, ಅಕ್ಟೋಬರ್ 20 (ಹೊಸ ಗಣನೆ -ನವೆಂಬರ್ 2) ರಂದು ರಷ್ಯನ್ ಸೋಷಿಯಲ್ ಡೆಮೊಕ್ರಾಟರ ಸಭೆನಡೆಯಿತು. ಪ್ರಥಮವಾಗಿ, ಭಾಷಣಕಾರ ಲೆನಿನರನ್ನು ಕೇಳುವ ಸಂದರ್ಭ ನನಗೊದಗಿತು. ಅವರು ರಷ್ಯದ ರಾಜಕೀಯ ಬೆಳವಣಿಗೆಯ ಮೇಲೆ ಲೇಖನವನ್ನು ಓದುತ್ತಿದ್ದರು. ಈ ಭಾಷಣ ನನ್ನ ಸ್ಮರಣೆಯಲ್ಲಿ ಅಚ್ಚೊತ್ತಿ ಉಳಿದಿದೆ. ಉಕ್ಕಿನಷ್ಟು ಗಡತರವಾದ ತರ್ಕ ಸರಣಿಯಿಂದ ತುಂಬಿ ತುಳುಕಿದ ಭಾಷಣವದು. ಪ್ರೇಕ್ಷಕರನ್ನು ಸೆಳೆದು ಹಿಡಿಯುವ ಮಾತುಗಾರಿಕೆ. ಈ ಭಾಷಣಕ್ಕೆ ನೇರವಾಗಿಯೂ, ಬಹಿರಂಗವಾಗಿಯೂ ಅಲ್ಲಿದ್ದವರಲ್ಲಿ ವಿರೋಧ ಸೂಚಿಸಿದವರು ಅಪರೂಪ. ಮೆನ್ಶೆವಿಕರೂ ಕೂಡಾ ಇದ್ದರು. ಅವರು ಭಾಷಣದ ಮಧ್ಯೆ ಉಸಿರೆತ್ತಲಿಲ್ಲ. ಇಲ್ಯಿಚ್‌ರನ್ನಾರೂ ತಡೆಯಲಿಲ್ಲ. ಭಾಷಣ ಮುಗಿದಮೇಲೂ ವಿರೋಧ ಬರಲಿಲ್ಲ. ಮರುದಿನ ವ್ಯಕ್ತಿಗತವಾಗಿ ಮಾತನಾಡುತ್ತಾ ವಿರೋಧ ವ್ಯಕ್ತಪಡಿಸಿದರಷ್ಟೆ.

ಲೆನಿನರದು ಸರಳ ಮಾತುಗಾರಿಕೆ. ಮಾತನಾಡುವಾಗ ಹಿಂದಕ್ಕೂ ಮುಂದಕ್ಕೂ ನಡೆಯುತ್ತಿರುತ್ತಾರೆ. ವೇಸ್ಟ್ ಕೋಟಿನ ಭುಜದ ತೂತಿನಲ್ಲಿ ಹೆಬ್ಬೆರಳನ್ನುಸಿಲುಕಿಸುತ್ತಾರೆ,ಇನ್ನೊಮ್ಮೆ ತೋರ್ಬೆರಳನ್ನು ನಿಮ್ಮತ್ತ ಚಾಚುತ್ತಾರೆ.

ಇದಾದ ಸ್ವಲ್ಪ ಕಾಲಾವಧಿಯಲ್ಲೇ ನಾನು ಪ್ಲೆಖಾನೋವರ ಭಾಷಣ ಕೇಳಿದೆ. ಇವರಿಬ್ಬರನ್ನು ಹೋಲಿಸದೆ ಇರಲು ಸಾಧ್ಯವಾಗಲಿಲ್ಲ. ಪ್ಲೆಖಾನೋವಾರಾದರೊ ಉಜ್ವಲ ಭಾಷಣಕಾರ. ನಟರ ಭಾವಾಭಿನಯ, ಅದ್ಭುತವಾದ ಸ್ವರ ವಿನ್ಯಾಸ, ರಮ್ಯವಾಗಿ ಮಾತಾಡುತ್ತಾರೆ. ಆದರೆ ಇವರಲ್ಲಿ ಲೆನಿನರ ತರ್ಕಸರಣಿಯ ಒತ್ತಡವಿರಲಿಲ್ಲ; ಇತರರ ಮನವೊಪ್ಪಿಸುವ ಅವರ ಶಕ್ತಿಯಿರಲಿಲ್ಲ.

ವ್ಲಾದಿಮಿರ್ ಇಲ್ಯಿಚ್ ಕಾಮ್ರೇಡರುಗಳ ಬಗ್ಗೆ ಸದಾ ತೋರುತ್ತಿದ್ದ ಆಸಕ್ತಿ-ವ್ಯಾಕುಲತೆ ಅಪಾರ. ನನ್ನಜೀವನದ ಒಂದು ಘಟನೆಯನ್ನೇ ಹೇಳುತ್ತೇನೆ. 1905ರ ಅಕ್ಟೋಬರ್ ತಿಂಗಳ ಅಂತ್ಯ ಕಾಲ. ನಾನಾಗ ಜಿನೀವಾದ ಭೋಜನಶಾಲೆಯಲ್ಲಿ ವಾಸಿಸುತ್ತಿದ್ದೆ. ಒಮ್ಮೆ ವ್ಲಾದಿಮಿರ್ ಇಲ್ಯಿಚ್ ನನ್ನಲ್ಲಿಗೆ ಬಂದರು. ಮಾತನಾಡುತ್ತಾ, ನಾನು ಮಾಸ್ಕೋದಲ್ಲಿ ಕೆಲಸ ಮಾಡುತ್ತಿದ್ದುದು, ನಾನು ಮತ್ತು ಬಾಮನ್ ಒಟ್ಟೊಟ್ಟಿಗೆ ದುಡಿಯುತ್ತಿದ್ದ ವಿಷಯ, ಜೈಲಿನಲ್ಲೂ ನಾವಿಬ್ಬರೂ ಜೊತೆ ಇದ್ದ ಬಗ್ಗೆ ಎಲ್ಲಾ ಕೇಳಿದರು. ನಾನು ಹೇಳಿದೆ: ಜೈಲಿನಲ್ಲಿ ಬಾಮನ್‌ರನ್ನು ನಮ್ಮಿಂದ ಬೇರ್ಪಡಿಸಿ ಪ್ರತ್ಯೇಕವಾಗಿ ಇಡಲಾಗಿತ್ತು. ಆದರೂ ನಾವು ಹೇಗೋ ಮಾಡಿ ರಹಸ್ಯವಾಗಿ ಆಗುಹೋಗುಗಳನ್ನೆಲ್ಲಾ ಅವರಿಗೆ ತಿಳಿಸುತ್ತಿದ್ದೆವು. ಬಾಮನ್‌ರನ್ನು ಜಾಮೀನಿನ ಮೇಲೆ ಬಿಡಿಸುವ ಪ್ರಯತ್ನ ನಡೆಸಲಾಯಿತು.|ಕೋರ್ಟು ಅದನ್ನು ತಿರಸ್ಕರಿಸಿತು, ಎಂಬುದೆಲ್ಲಾ ನಾನವರಿಗೆ ತಿಳಿಸಿದೆ. ಮಾತನ್ನಾಲಿಸಿದ ನಂತರ ಲೆನಿನ್ ಮೆಲ್ಲನೆ ಅಂದರು:

"ನಾದ್ಯಾ (ಇದು ಬಾಮನ್‌ರಪತ್ನಿ! ಕಾಪಿತೊಲೀನಾ ಪೊಲಿಕಾರ್ಪೊವ್ನಾ ಮೆದ್ವೆದೇವಾರ ಪಾರ್ಟಿ ಗುಪ್ತನಾಮ) ನಿಕೊಲಾಯಿ ಎರ್ನೆಸ್ಟೊವಿಚ್ (ಬಾಮನ್)ರ ವಿಮೋಚನೆ ಪಡೆದಳು. ಆದರೆ ಅದು ಬಳ್ಳಿಯದಕ್ಕಾಗಿರಲಿಲ್ಲ. ಸ್ವಲ್ಪ ಸಮಯದಲ್ಲೆ 'ಬ್ಲ್ಯಾಕ್ ಹಂಡ್ರೆಡ್ಸ್'ಗಳಿಂದ ಅವರ ಕೊಲೆಯಾಯಿತು." ಆಗ ಮಾತ್ರ ಬಾಮನ್‌ರ ಕೊಲೆಯ ವರದಿಯನ್ನೊಳಗೊಂಡ ಇಂಗ್ಲಿಷ್ ಪತ್ರಿಕೆಯೊಂದನ್ನು ಲೆನಿನರು ನನಗೆ ಕೊಟ್ಟರು. ನನ್ನ ಮತ್ತು ಬಾಮನ್‌ರ ನಡುವೆ ಸ್ನೇಹವಿತ್ತೆಂದು ಲೆನಿನ್ ತಿಳಿದಿದ್ದರು. ಅದೇ, ನಾನು ಪತ್ರಿಕೆಯ ಮೂಲಕ ಬಾಮನ್‌ರ ಮರಣ ಅರಿಯುವ ಪ್ರಸಂಗ ಲೆನಿನರಿಗೆ ಒಪ್ಪಿಗೆಯಾಗಲಿಲ್ಲ.

ಇನ್ನೂ ಹಲವಾರು ನಿದರ್ಶನಗಳಿವೆ: ಸೋವಿಯತ್ ಸರ್ಕಾರ ಸ್ಥಾಪನೆಯಾದ ಕಾಲ. ನಾನು ಕೇಂದ್ರ ಸಮಿತಿಯ ಕಾರ್ಯದರ್ಶಿಯಾಗಿ ದುಡಿಯುತ್ತಿದ್ದೆ. ಎ. ಡಿ. ತ್ಸ್ಯುರೂಪ ಆರೋಗ್ಯವನ್ನೂ ಕಡೆಗಣಿಸಿ ದುಡಿಯುತ್ತಿದ್ದರು. ಇದಕ್ಕಾಗಿ ಇವರನ್ನು ಲೆನಿನ್ ಆಗಾಗ್ಗೆ ಬೈಯುತ್ತಿದ್ದರು: "ಕಮ್ಯೂನಿಸ್ಟನು ರಾಜ್ಯದ ಆಸ್ತಿ—ವ್ಯರ್ಥಗೊಳ್ಳಲಾಗದು" ಎಂದವರು

ಭೂಪ್ರದಕ್ಷಿಣೆ ಮಾಡಿ ಹಿಂತಿರುಗುವ ರಾಕೆಟ್—ವಿಮಾನಗಳು

ರಷ್ಯಾವು ರಾಕೆಟ್‌ಶಕ್ತಿಯನ್ನು ಬಳಸಿಕೊಂಡ ಹಾರಬಲ್ಲ ವಿಮಾನಗಳನ್ನು ನಿರ್ಮಿಸಿದೆ ಎಂದು ಬುಖಾರೆಸ್ಟ್ ರೇಡಿಯೋ ಪ್ರಸಾರ ಮಾಡಿದೆ.

ಈ ವಿಮಾನಗಳು ಭೂ-ಉಪಗ್ರಹದಂತೆ ಪರಿವರ್ತನೆ ಹೊಂದಿ ಭೂಮಿಯನ್ನು ಸುತ್ತಿ ನೆಲಕ್ಕೆ ಹಿಂದಿರುಗಬಲ್ಲವೆಂದು ಹೇಳಲಾಗಿದೆ.

ಇದರ ವೇಗ ಗಂಟೆಗೆ 15,500 ರಿಂದ 17,394 ಮೈಲುಗಳು. ಭೂ-ಪ್ರದಕ್ಷಿಣೆ ಗೈದು 'ಪ್ರತಿರೋಧ-ರಾಕೆಟ್'ಗಳ ಸಹಾಯದಿಂದ, ಸುರಕ್ಷಿತವಾಗಿ ಹಿಂದಿರುಗಿ ನೆಲ ಮುಟ್ಟುವುದು.

ಈ ರಾಕೆಟ್ ವಿಮಾನ ಬರೇ ಕಣ್ಣಿಗೆ ಕಾಣದ ಕಾರಣ, ಇದರ ಛಾಯಾಗ್ರಹಣ ಮಾಡುವ ಛಾಯಾಗ್ರಹಣ ಯಂತ್ರವನ್ನು ಪರಿಪೂರ್ಣಗೊಳಿಸಲಾಗುತ್ತಿದೆ ಎಂದು ರೇಡಿಯೋ ಸಾರಿದೆ.

ಇತ್ತ ಬ್ರಿಟನಿನ ಕನ್ಸರ್ವೇಟಿವ್ ಪತ್ರಿಕೆಯೊಂದರಲ್ಲಿ ರಷ್ಯನರು ಈಗಾಗಲೇ ಮನುಷ್ಯನನ್ನು ಕೂರಿಸಿ "ಸ್ಪೂಟ್ನಿಕ್" ಹಾರಿಸಿ ಜೀವಂತವಾಗಿ ಮನುಷ್ಯ ಸಹಿತ ಅದನ್ನು ಪುನಃ ಭೂಮಿಗೆ ಇಳಿಸಿದ್ದಾರೆಂಬುದು ಖಂಡಿತವೆಂದು ಬರೆಯಲಾಗಿದೆ.

ಹೇಳುತ್ತಿದ್ದರು. ಎಫ್. ಝೆರ್ಝಿನ್‌ಸ್ಕಿ-ಅವಿಶ್ರಾಂತ ದುಡಿತದ ಪರಿಣಾಮವಾಗಿ ರಕ್ತ ಕಾರುತ್ತಿದ್ದರು. ಆದರೂ ವಿಶ್ರಾಂತಿ ಪಡೆಯಲು ನಿರಾಕರಿಸುತ್ತಿದ್ದರು. ಇದನ್ನು ತಿಳಿದ ಲೆನಿನ್ ನನಗೆ ಫೋನ್ ಮಾಡಿ, ಎಫ್. ಝೆರ್ಝಿನ್‌ಸ್ಕಿ ಎರಡು ವಾರಗಳ ಕಾಲ ನಾರೊಫೊಮಿನ್‌ಸ್ಕ್‌ನಲ್ಲಿ ವಿಶ್ರಾಂತಿ ಪಡೆಯಬೇಕು.; ಈ ಬಗ್ಗೆ ಕೇಂದ್ರ ಸಮಿತಿ ಕೂಡಲೇ ನಿರ್ಣಯ ಕೈಗೊಳ್ಳಲಿ—ಎಂದು ಸೂಚಿಸಿದರು. ಆ ಸಮಯದಲ್ಲಿ, ಮಾಸ್ಕೋ ಪ್ರದೇಶದಲ್ಲೇ ಉತ್ತಮವಾದ ರಾಜ್ಯ ವ್ಯವಸಾಯ ಕ್ಷೇತ್ರ ನಾರೊಫೊಮಿನ್‌ಸ್ಕ್‌ನಲ್ಲಿತ್ತು. ಝೆರ್ಝಿನ್‌ಸ್ಕಿ ಅಲ್ಲಿ ಉತ್ತಮ ಆಹಾರ ಸೇವಿಸಬಹುದು. ಅಲ್ಲದೆ ಅಲ್ಲಿ ಫೋನ್ ಇರಲಿಲ್ಲ, ಝೆರ್ಝಿನ್‌ಸ್ಕಿ ಮಾಸ್ಕೋಗೆ ಫೋನ್ ಮಾಡುವ ಅವಕಾಶವೂ ಇಲ್ಲ. ಆದಕಾರಣ ಅವರು ಚಲೋ ವಿಶ್ರಾಂತಿ ಪಡೆಯಬಹುದು ಎಂಬುದನ್ನು ಕೂಡಾ ಲೆನಿನ್ ಮೊದಲೇ ಮನದಟ್ಟು ಮಾಡಿಕೊಂಡಿದ್ದರು.

ಇನ್ನು, ಕಾಮ್ರೇಡನೊಬ್ಬನಿಗೆ ಹ್ಯಾಟು ಬೇಕು; ಇನ್ನೊಬ್ಬನಿಗೆ ಪಾದರಕ್ಷೆ. ಸಂದರ್ಶಕರಿಗಾಗಿ, ಕಮಿಸಾರುಗಳ ಎಲ್ಲಾ ಕಚೇರಿಗಳಲ್ಲೂ ನೀರು ತುಂಬಿದ ಹೂಜಿ ಮತ್ತು ಗ್ಲಾಸುಗಳಿರಬೇಕು. ಇವಾವುದೂ ಲೆನಿನರ ಆಸಕ್ತಿಯನ್ನು ಕೆಣಕದಿರುತ್ತಿರಲಿಲ್ಲ.

ಲೆನಿನರ ಅಸಾಮಾನ್ಯವಾದ ಸರಳತೆಯ ಬಗ್ಗೆ ಒಂದೆರಡು ಮಾತು ಹೇಳಬಯಸುವೆ: ಪ್ರಶ್ನಾವಳಿಯೊಂದನ್ನು ಉತ್ತರಿಸುತ್ತಾ 'ನೀವು ಯಾವೆಲ್ಲಾ ಭಾಷೆ ಅರಿತಿರುವಿರಿ?' ಎಂಬ ಪ್ರಶ್ನೆಗೆ "ಇಂಗ್ಲಿಷ್, ಜರ್ಮನ್, ಫ್ರೆಂಚ್—ತಪ್ಪಾಗಿ, ಇಟೇಲಿಯನ್—ಬಹಳ ತಪ್ಪಾಗಿ" ಎಂದು ಲೆನಿನ್ ತಿಳಿಸಿದರು. ಆದರೆ ಇದು ವಾಸ್ತವಕ್ಕೆ ವಿರೋಧವಾಗಿತ್ತು. ಜೂನ್ 1920ರಲ್ಲಿ ಕೊಮಿಟಾರ್ನ್ ಎರಡನೇ ಸಮ್ಮೇಳನ ಸೇರುವುದಿತ್ತು. ಅದಕ್ಕೆ ಪ್ರತಿನಿಧಿಗಳಾಗಿ ಫ್ರೆಂಚ್ ಸೋಷಲಿಸ್ಟ್ ಪಾರ್ಟಿಯ ಸದಸ್ಯರಿಬ್ಬರು—ಅವರಲ್ಲೊಬ್ಬರು ಫ್ರೆಂಚ್ ಕಮ್ಯೂನಿಸ್ಟ್ ಪಾರ್ಟಿಯ ಸ್ಥಾಪಕ ಸದಸ್ಯರಾದ ಮಾರ್ಸೆಲಿ ಕ್ಯಾಷಿನ್—ಮಾಸ್ಕೋಕ್ಕೆ ಸ್ವಲ್ಪ ದಿನಗಳ ಮೊದಲೇ ಆಗಮಿಸಿದ್ದರು. ಕೇಂದ್ರ ಸಮಿತಿಯ ಸದಸ್ಯರು ವ್ಲಾದಿಮಿರ್ ಇಲ್ಯಿಚ್‌ರ ಆಫೀಸಿನಲ್ಲಿ ಸೇರಿದರು. ನನ್ನನ್ನು ಲೆನಿನರು ತನ್ನ ಪಕ್ಕದಲ್ಲೇ ಕುಳಿತುಕೊಳ್ಳಬೇಕೆಂದು ಹೇಳಿದರು. ನನಗೆ ಫ್ರೆಂಚ್ ಚೆನ್ನಾಗಿ ಗೊತ್ತು. ಫ್ರೆಂಚ್ ಕಾಮ್ರೇಡರೊಡನೆ ಮಾತನಾಡುವಾಗ ನಾನು ಸಹಾಯಕನಾಗಲೆಂದು ಲೆನಿನರು ಬಯಸಿದರು. ಆದರೆ ಒಂದೂವರೆ ಗಂಟೆಯ ಸಂಭಾಷಣೆಯ ಕಾಲಾವಧಿಯಲ್ಲಿ ನಾನು ಎರಡು-ಮೂರು ಬಾರಿ ಲೆನಿನರಿಗೆ ಫ್ರೆಂಚ್ ಶಬ್ದಗಳನ್ನು ಹೇಳಬೇಕಾಗಿ ಬಂತಷ್ಟೆ. ಲೆನಿನ್ ಸುಲಲಿತವಾಗಿ ಫ್ರೆಂಚ್‌ನಲ್ಲಿ ಮಾತನಾಡಿದರು.

ಲೆನಿನ್‌ರ ದೃಷ್ಟಿಯಲ್ಲಿ ಸಮಯ ಅತ್ಯಮೂಲ್ಯವಾದುದು, ಕೇಂದ್ರ ಸಮಿತಿಯ ಅಧಿವೇಶನ 10 ಗಂಟೆಗಿದ್ದರೆ, ಆರಂಭ 10·15ಕ್ಕು ಮೀರದಂತೆ ಅವರು ನೋಡಿಕೊಳ್ಳುತ್ತಿದ್ದರು. ಭಾಷಣಕಾರರಿಗೆ 2 ನಿಮಿಷಗಳು ದೊರೆಯುತಿತ್ತು. ಇದನ್ನು ಮೀರದಂತೆ, ಲೆನಿನ್ ಕೈಗಡಿಯಾರ ನೋಡುತ್ತಾ ಭಾಷಣಕರ್ತರನ್ನು ಅಂಕೆಯಲ್ಲಿಟ್ಟುಕೊಳ್ಳುತ್ತಿದ್ದರು. ಅಧಿವೇಶನ ನಡೆಯುತ್ತಿರುವಾಗ್ಗೆ ಪರಸ್ಪರ ಮಾತಾಡಲು ಅವಕಾಶ ನೀಡಲಾಗುತ್ತಿರಲಿಲ್ಲ. ಯಾರಾದರೂ ಮಾತಾಡಲು ಶುರುಮಾಡಿದರೆಂದರೆ ಶ್ಶ್...ಎಂದು ಗದರಿಸುತ್ತಾ, "ಬರೆದು ಕೊಡಿ" ಎಂದು ಸಂಕೇತ ಮಾಡುತ್ತಿದ್ದರು. ಇನ್ನೊಬ್ಬನಿಗೆ ಏನಾದರೂ ಹೇಳಬೇಕಾದರೆ ಚೀಟಿ ಮೂಲಕ ಬರೆದು ಕೊಡಿ; ಮಾತಾಡಿ ಇತರರಿಗೆ ತೊಂದರೆ ಕೊಡಬೇಡಿ. ಆದ ಕಾರಣ ಅಧಿವೇಶನ ಅವಧಿಯಲ್ಲಿ ಹೇರಳವಾಗಿ ಚೀಟಿಗಳ ಚಲಾವಣೆಯಾಗುತ್ತಿತ್ತು. ಲೆನಿನರು ಕೂಡ ತನ್ನ ಮುಖ್ಯ ಭಾಷಣಕ್ಕೆ ಬೇಕಾದ ಅಂಶಗಳನ್ನು ಬರೆಯುತ್ತಿದ್ದರು. ಇತರರೊಡನೆ ಮಾತನಾಡಬೇಕಾದಾಗ ಚೀಟಿ ಕಳಿಸುವುದು ಮಾಡಿಕೊಳ್ಳುತ್ತಿದ್ದರು. ಅಧಿವೇಶನದ ಸಮಯದಲ್ಲಿ ಧೂಮಪಾನ ನಿಷೇಧವಾಗಿತ್ತು. ಹೊರಗೆ ಹೋಗುವುದಂತೂ ಅಸಾಧ್ಯ. ಏನು ಮಾಡುವುದು? ಧೂಮಪಾನಿಗಳೆಲ್ಲಾ ಲೆನಿನರ ಆಫೀಸಿನಲ್ಲಿರುವ ದೊಡ್ಡ ಸ್ಟೋವಿನ ಸುತ್ತ ಸೇರುತ್ತಿದ್ದರು. ಕದ್ದು ಸೇದಿ, ಹೊಗೆಯನ್ನು ಹೊಗೆ ಕೊಳವೆಯ ಮೂಲಕ ಬಿಡುತ್ತಿದ್ದರು. ಮತದಾನ ನಡೆಯುತ್ತಿರುವಾಗ ಲೆನಿನರು ವ್ಯಂಗ್ಯವಾಗಿ ಕೇಳುತ್ತಿದ್ದರು: "ನಮ್ಮ ಹೊಗೆಮನೆಯ ಸ್ವಾಮಿಗಳು ಹೇಗೆ ಮತದಾನ ಮಾಡಿದ್ದೀರಿ?"

ಲೆನಿನರ 50ನೇ ವರ್ಧಂತಿಯ ದಿನ ನಾನು ಅಸ್ವಸ್ಥನಾಗಿ ಮಲಗಿದ್ದೆ. ಅವರಿಗೆ ಸುಖಪ್ರದವಾದ ಅಚ್ಚರಿಯನ್ನುಂಟು ಮಾಡುವ ಉಪಹಾರ ಕೊಡಬೇಕೆಂದು ಬಯಸಿದೆ. ನನ್ನಲ್ಲಿರುವ ವಸ್ತುಸಂಗ್ರಹವನ್ನೆಲ್ಲಾ ತಡಕಾಡಿದೆ. ವಿಖ್ಯಾತ ವ್ಯಂಗ್ಯ ಕಲಾಕಾರ ಕಾರ್ರಿಕ್‌ರ ವ್ಯಂಗ್ಯ ಚಿತ್ರವೊಂದು ಕೈಹತ್ತಿತು. ಅದು ನರೋದ್ನಿಕ್ ಮಿಕ್ಯಾಲೋವ್‌ಸ್ಕಿಯವರ ಜನ್ಮದಿನವನ್ನು ಬರೆದಿರುವ ವ್ಯಂಗ್ಯ ಚಿತ್ರ: ಮೇಜಿನ ಮೇಲೆ ಭಾವೋದ್ರಿಕ್ತ ಮಿಕ್ಯಾಲೋವ್‌ಸ್ಕಿ. ಒಂದು ಕೈಯಲ್ಲಿ, ಕನ್ನಡಕ ಇನ್ನೊಂದರಲ್ಲಿ ಕರವಸ್ತ್ರ- ಈಗ್ಗತಾನೆ ಕಣ್ಣೀರು ಒರೆಸಲ್ಪಟ್ಟಂತಿದೆ. ಕಾಮ್ರೇಡರುಗಳು ಮತ್ತು ಇಬ್ಬರು ಬಾಲರು ಅವರ ಸುತ್ತ ನೆರೆದಿದ್ದರು. ಈ ಯುವ 'ಮಾರ್ಕ್ಸಿಸ್ಟರು' ನರೋದ್ನಿಕರನ್ನು ಅಭಿನಂದಿಸಲು ಬಂದಿದ್ದರು. ಇದನ್ನು ಲೆನಿನರಿಗೆ ಕಳಿಸಿ, ನಾನು ಬರೆದೆ: ಹೀಗೆಯೇ ಇತ್ತು ಆಗ—ನಾವೆಲ್ಲಾ ಅಂದು ಮಕ್ಕಳಾಗಿದ್ದೆವು. ಈಗ ಬೃಹತ್ ಪಕ್ಷವಾಗಿದ್ದೇವೆ. ಇದಕ್ಕಾಗಿ ಅಭಿನಂದನೆಗಳು—ನಿಮ್ಮ ಕೆಲಸ ಮತ್ತು ಮೇಧಾಶಕ್ತಿಗೆ ಅಭಿನಂದನೆಗಳು.

ಆ ಸಂಜೆ, ಮೋಸ್ಕೋದ ಪಾರ್ಟಿ ಸಮಿತಿಯು ಲೆನಿನರ ವರ್ಧಂತ್ಯುತ್ಸವದ ಅಂಗವಾಗಿ ಸಭೆ ಕರೆದಿತ್ತು. ಲೆನಿನರು ಈ ವ್ಯಂಗ್ಯ ಚಿತ್ರವನ್ನು ನೆರೆದವರಿಗೆ ತೋರಿಸಿದರು. ಇಂಥಾ ಸಂದರ್ಭಗಳಲ್ಲಿ ಮಾಡಲಾಗುವ ಸೊಗಸು ಭಾಷಣಗಳನ್ನು ಹಾಸ್ಯಗೈದರು. ನಾವು ತುಳಿದು ಬಂದ ದಾರಿ, ಮುಂದೆ ಬರಬಹುದಾದ ಕಷ್ಟ—ಕಂಟಕಗಳನ್ನು ಸಂಕ್ಷಿಪ್ತವಾಗಿ ಹೇಳಿದರು. ನಾವು ಯಶಸ್ಸಿನ ಪೇಯ ಕುಡಿದು ದಾರಿತಪ್ಪಬಾರದೆಂದೂ ತಿಳಿಸಿದರು. ಈ ಭಾಷಣದಲ್ಲೂ—ಅವರ ಇತರ ಕೃತಿಗಳಲ್ಲಿ ಎದ್ದು ಕಾಣುವ ಲೆನಿನರ ರಕ್ತಗತವಾಗಿ ಬಂದ ವೈಶಿಷ್ಟ್ಯಗಳನ್ನು ತಿಳಿಯಬಹುದಾಗಿತ್ತು: "ಅಸಾಮಾನ್ಯ ಸರಳತೆ, ಪರಿಸ್ಥಿತಿಯನ್ನು ಅಳೆದು ನೋಡುವಲ್ಲಿ ಶಾಂತಸ್ಥಿಮಿತ ಮನೋಭಾವ, ಅಧಿಕ ಶ್ಲಾಘನೆ ಹಾಗೂ ಆಡಂಬರದ ವಾಕ್ಸರಣಿ ಬಗ್ಗೆ ದ್ವೇಷ, ಇವು ಲೆನಿನರ ಮೈಗೂಡಿ ಹೋದ ವೈಶಿಷ್ಟ್ಯಗಳು"

ಚಾ-ಎಲೆಗಳನ್ನು ಕೀಳಲು ಯಂತ್ರ - ಮನುಷ್ಯ

ಸೋವಿಯತ್ ರಷ್ಯಾದ ಪ್ರಜಾತಂತ್ರಗಳಲ್ಲೊಂದಾದ ಜಾರ್ಜಿಯಾದಲ್ಲಿ, ಚಾತೋಟಗಳಲ್ಲಿ ಎಲೆಗಳನ್ನು ಕೀಳಲು "ರೋಜೊಟ್" ಎಂಬ ಯಂತ್ರ ಮನುಷ್ಯನ ನಿರ್ಮಾಣವಾಗಿದೆ ಎಂದು ತಾಸ್ ವರದಿಯಾಗಿದೆ. ಜಗತ್ತಿನಲ್ಲೇ ಪ್ರಥಮ ಹೊಸ ಆವಿಷ್ಕಾರವಾಗಿರುವ ಈ ಯಂತ್ರ–ನರನು; 100–120 ಕಾರ್ಮಿಕರ ಕೆಲಸವನ್ನು ಮಾಡಬಲ್ಲನೆಂದು ಹೇಳಲಾಗಿದೆ. ಈ ಪರಿಶೋಧನೆಯಿಂದಾಗಿ ಅಲ್ಲಿನ ಕಾರ್ಮಿಕರಿಗೆ ಕಮ್ಮಿ ಗಂಟೆ ಕೆಲಸ, ಹೆಚ್ಚಿನ ಸೌಲಭ್ಯ, ಅಧಿಕ ಉತ್ಪತ್ತಿಯ ಲಾಭ ದೊರಕುವುದು.

ಆದರೆ ಬಂಡವಾಳಶಾಹಿ ರಾಷ್ಟ್ರಗಳಲ್ಲಿ ಇಂಥಾ ಯಂತ್ರಗಳನ್ನು ಪ್ರಯೋಗಕ್ಕೆ ತಂದಲ್ಲಿ ಆ ಕೂಡಲೆ ಸಾವಿರಾರು ಮಂದಿ ಕಾರ್ಮಿಕರು ರ್‍ಯಾಷನ್ಸ್ಟೇಷನಿಗೆ, ಬಲಿಬಿದ್ದು ಕೆಲಸಕಳಕೊಳ್ಳುತ್ತಿದ್ದರು. ಸಮಾಜವಾದಿ ಹಾಗೂ ಇತರ ರಾಷ್ಟ್ರಗಳಿಗಿರುವ ವ್ಯತ್ಯಾಸವಿದು.

ಕ್ರಾಂತಿಪುರುಷ ಲೆನಿನ್

ರಷ್ಯದಲ್ಲಿ ಕಮ್ಯುನಿಸ್ಟ್ ಪಾರ್ಟಿಯ ಸ್ಥಾಪಕರೂ, ದಲಿತ ವರ್ಗದ ನಾಯಕರೂ, ಮಾರ್ಕ್ಸ್‌ವಾದದ ಸಿದ್ಧಾಂತವನ್ನು ಕಾರ್ಯಗತಗೊಳಿಸಿ ಪ್ರಥಮವಾಗಿ ವಿಶ್ವದ ಆರರಲ್ಲೊಂದು ಭಾಗದಲ್ಲಿ ಶ್ರಮಜೀವಿ ಸರಕಾರವನ್ನು ಸ್ಥಾಪಿಸಿದ ಕ್ರಾಂತಿ ಪುರುಷ ಲೆನಿನ್, 1924ರ ಜನವರಿ 21ರಂದು ತಮ್ಮ 54ನೆಯ ವಯಸ್ಸಿನಲ್ಲಿ ಮರಣ ಹೊಂದಿದರು.

ಲೆನಿನ್ ಗತಿಸಿ ಇಂದಿಗೆ 33ವರ್ಷಗಳು ಕಳೆದಿವೆ. ಅವರ ಜೀವಿತ ಕಾಲದಲ್ಲಿ ಶ್ರಮಜೀವಿಗಳು ಅಧಿಕಾರವನ್ನು ವಶಪಡಿಸಿಕೊಂಡುದು ರಷ್ಯದಲ್ಲಿ ಮಾತ್ರ. ರಷ್ಯದಲ್ಲಿ ಲೆನಿನ್‌ರ ನೇತೃತ್ವದಲ್ಲಿ ಯಶಸ್ವಿಗೊಂಡ ಕ್ರಾಂತಿಯು ವಿಶ್ವದ ಎಲ್ಲ ದಲಿತ ವರ್ಗದ ಜನತೆಗೂ ಸ್ಫೂರ್ತಿಯನ್ನಿತ್ತಿತು. ಇಂದು ಸಮಾಜವಾದವು ಕೇವಲ ಒಂದು ರಾಷ್ಟ್ರದಲ್ಲಿ ಮಾತ್ರವಲ್ಲದೇ ವಿಶ್ವದ ಮೂರರಲ್ಲೊಂದು ಭಾಗದಲ್ಲಿ ಸ್ಥಾಪಿತವಾಗಿದೆ. ಸಮಾಜವಾದೀ ರಾಷ್ಟ್ರ ಒಂದರ ಸ್ಥಾನದಲ್ಲಿ ಇಂದು ಸಮಾಜವಾದೀ ಜಗತ್ತು ಇದೆ. ಬಂಡವಾಳಶಾಹೀ ಸಾಮ್ರಾಜ್ಯಶಾಹೀ ಶಿಬಿರದ ಇದಿರಾಗಿ ಸತತವಾಗಿ ಶಾಂತಿಗಾಗಿ, ಯುದ್ಧಕ್ಕೆ ವಿರೋಧವಾಗಿ ಸಮಾಜವಾದೀ ಶಿಬಿರ ಹೋರಾಡುತ್ತಿದೆ. ಸ್ವಾತಂತ್ರ್ಯಪ್ರಿಯ ಶಾಂತಿಪ್ರಿಯ ಜನತೆಯ ಎಲ್ಲ ಹಿರಿಯ ಬಯಕೆಗಳನ್ನು ಎತ್ತಿ ಹಿಡಿಯುತ್ತಿದೆ.

ಲೆನಿನ್‌ರ ನೇತೃತ್ವದಲ್ಲಿ ಸ್ಥಾಪಿತವಾದ ಸೋವಿಯತ್ ಸರಕಾರ, ಕಳೆದ ನಲ್ವತ್ತು ವರ್ಷಗಳಲ್ಲಿ ಅಪಾರವಾದ ಪ್ರಗತಿಯನ್ನು ಸಾಧಿಸಿದೆ. ವೈಜ್ಞಾನಿಕ ಕ್ಷೇತ್ರದಲ್ಲಿ ಸೋವಿಯತ್ ಯೂನಿಯನ್ ಇಂದು ವಿಶ್ವದಲ್ಲೆ ಮೊದಲ ಸ್ಥಾನವನ್ನು ಗಳಿಸಿದೆ.

ದೃಢ ವಿಶ್ವಾಸದಿಂದ, ಧೈರ್ಯವಾಗಿ ರಷ್ಯದ ಜನತೆಯ ಕ್ರಾಂತಿ ಹೋರಾಟಕ್ಕೆ ನಾಯಕತ್ವವಿತ್ತು, ಯಶಸ್ವಿಗೊಳಿಸಿ, ಜಗತ್ತಿನಲ್ಲಿ ಪ್ರಥಮವಾಗಿ ಸಮಾಜವಾದೀ ಸಮಾಜ ನಿರ್ಮಾಣಕ್ಕೆ ಬುನಾದಿಯನ್ನು ನಿರ್ಮಿಸಿದ ಲೆನಿನ್‌ರನ್ನು ಜನತೆ ಮರೆಯದು.

ಮಾರ್ಕ್ಸ್‌ವಾದ ಸಿದ್ಧಾಂತವನ್ನು ಬೆಳೆಸಿ ಲೆನಿನ್ ಅನೇಕ ಗ್ರಂಥಗಳನ್ನು ಬರೆದಿದ್ದಾರೆ. ಲೆನಿನ್‌ರ ಈ ಕೃತಿಗಳು ವಿಶೇಷ ಮಹತ್ವವುಳ್ಳದ್ದಾಗಿದೆ. ಎಲ್ಲರೂ ಅಧ್ಯಯನ ಮಾಡುವುದು ಅಗತ್ಯವಿದೆ.

ಅವರ ಮರಣದ ಮೂವತ್ತಮೂರನೆ ವರ್ಷದಂದು ಲೆನಿನ್‌ರ ವ್ಯಕ್ತಿತ್ವ, ಅವರ ಸರಳತೆಯನ್ನು ನಿರೂಪಿಸುವ ಲೇಖನವನ್ನು 'ಜನಶಕ್ತಿ' ಓದುಗರಿಗೆ ನೀಡಲು ಹರ್ಷವೆನಿಸುತ್ತದೆ.—ಸಂ.

ನೆಹರೂರವರಿಗೆ ಬುಲ್ಗಾನಿನ್ ಪತ್ರ

ಸೋವಿಯತ್ ಪ್ರಧಾನ ಮಂತ್ರಿ ಮಾರ್ಷಲ್ ಬುಲ್ಗಾನಿನ್‌ರವರು ನೆಹರೂರವರಿಗೆ ಪತ್ರವೊಂದನ್ನು ಬರೆದು ಶೃಂಗ ಸಮ್ಮೇಳನವೊಂದನ್ನು ವ್ಯವಸ್ಥೆಗೊಳಿಸುವ ಕಾರ್ಯದಲ್ಲಿ ಭಾರತದ ಪ್ರಧಾನ ಮಂತ್ರಿಯು ತಮ್ಮ ಪ್ರಭಾವ ಬೀರುವರೆಂಬ ಆಶಯವನ್ನು ವ್ಯಕ್ತಪಡಿಸಿದ್ದಾರೆ.

'ಅಂತರಾಷ್ಟ್ರೀಯ ಪರಿಸ್ಥಿತಿಯನ್ನು ಉತ್ತಮಗೊಳಿಸುವ ಎಲ್ಲ ರಾಷ್ಟ್ರಗಳ ಜಂಟೀ ಪ್ರಯತ್ನವನ್ನು ಜಯಪ್ರದಗೊಳಿಸಲು ಸಾಧ್ಯವಾದುದನ್ನೆಲ್ಲಾ ಮಾಡುವ ನಿಮ್ಮ ಯಾವತ್ತಿನ ಕ್ರಮದಲ್ಲಿ ಖಚಿತ ನಂಬಿಕೆಯಿರುವ ಕಾರಣ ನಿಮಗೆ ಈ ಪತ್ರ ಬರೆಯಬೇಕಾದುದು ಅತ್ಯಗತ್ಯವೆಂದ ನಾವು ಬಯಸಿದ್ದೇವೆ' ಎಂದು ಬುಲ್ಗಾನಿನ್‌ರು ಭಾರತದ ಪ್ರಧಾನ ಮಂತ್ರಿಗೆ ಬರೆದಿದ್ದಾರೆ

"ಅಂತರಾಷ್ಟ್ರೀಯ ಪರಿಸ್ಥಿತಿ ಗಂಭೀರವಾಗಿದ್ದರೂ ನಿರಾಶಾಜನಕವಾಗಿಲ್ಲ ಏಕೆಂದರೆ ಒಳಗುದಿ ಯುದ್ಧ ಹಾಗೂ ಶಸ್ತ್ರಾಸ್ತ್ರ ಸಂಗ್ರಹಣದ ಅಂತ್ಯವನ್ನು ಒತ್ತಾಯಪಡಿಸದಿರುವ ರಾಷ್ಟ್ರ ಯಾವುದೂ ಈಗ ವಿಶ್ವದಲ್ಲಿ ಇಲ್ಲ" ಎಂಬ ನೆಹರೂರವರ ಅಭಿಪ್ರಾಯವನ್ನು ಬುಲ್ಗಾನಿನ್ ಅನುಮೋದಿಸಿದ್ದಾರೆ.

ಶಾಂತಿ ಹಾಗೂ ಶಾಂತಿಯುತ ಸಹಜೀವನದ ಧ್ಯೇಯಗಳಲ್ಲಿ ಅಚಲ ವಿಶ್ವಾಸವುಳ್ಳ ಭಾರತದ ವಾಣಿಗೆ ಎಲ್ಲೆಡೆ ಪುರಸ್ಕಾರವಿದೆಯೆಂಬ ಭಾವನೆಯಿಂದ ಈ ಪತ್ರವನ್ನು ಬರೆಯುವುದು ಅಗತ್ಯವೆನಿಸಿದೆ" ಎಂದೂ ನೆಹರೂರವರಿಗೆ ಬರೆದಿದ್ದಾರೆ.

ಉಂಟಾಗುವ ವಿವಾದಗಳನ್ನು ಸಂಧಾನದ ಶಾಂತಿಯುತ ಮಾರ್ಗಗಳಿಂದ ಇತ್ಯರ್ಥಗೊಳಿಸಬೇಕೆಂಬುದೇ ರಷ್ಯದ ಎಂದಿನ ನಿಲುವಾಗಿದೆಯೆಂದೂ, ಆದ ಕಾರಣ ಮುಂದಿನ ಎರಡು ಮೂರು ತಿಂಗಳುಗಳಲ್ಲಿ ನ್ಯಾಟೋ ಮತ್ತು ವಾರ್ಸಾ ಕೌಲು ರಾಷ್ಟ್ರಗಳು ಹಾಗೂ ಭಾರತ ಮತ್ತಿತರ ಕೆಲವು ತಟಸ್ಥ ರಾಷ್ಟ್ರಗಳು ಭಾವಿಸುವ ಶೃಂಗ ಸಮ್ಮೇಳನವೊಂದು ನಡೆಯಬೇಕೆಂದು ರಷ್ಯ ಸೂಚಿಸಿದೆಯೆಂದು ಸೋವಿಯತ್ ಪ್ರಧಾನ ಮಂತ್ರಿ ತಮ್ಮ ಪತ್ರದಲ್ಲಿ ತಿಳಿಸಿದ್ದಾರೆ.

"ವಿಶ್ವಶಾಂತಿಯ ಮಹಾ ಸಮಸ್ಯೆಯನ್ನು ಬಗೆಹರಿಸಲು ಸಭೆ, ಸಂಧಾನಗಳು ಅತ್ಯಗತ್ಯ. ಆದಕಾರಣ ಉದ್ವೇಗವನ್ನು ಸಡಿಲಗೊಳಿಸಿ ಅಂತರಾಷ್ಟ್ರೀಯ ಸಮಸ್ಯೆಗಳನ್ನು ಪರಿಹರಿಸುವ ಯಾವ ಕ್ರಮಕ್ಕೇ ಆಗಲಿ ನಿಷ್ಠಾಪೂರ್ಣ ಅನುಮೋದನೆ ಅಗತ್ಯವೆಂದು ನೀವು ಭಾರತದ ಪಾರ್ಲಿಮೆಂಟಿನಲ್ಲಿ ಇತ್ತೀಚಿಗೆ ನೀಡಿದ ಹೇಳಿಕೆಗೆ ರಷ್ಯದ ಸಲಹೆ ಅನುಗುಣವಾಗಿದೆ".

"ಏಷ್ಯದ ಹಾಗೂ ವಿಶ್ವದ ಅತಿ ದೊಡ್ಡ ರಾಷ್ಟ್ರಗಳಲ್ಲಿ ಒಂದಾದ ಭಾರತವೂ ಭಾಗವಹಿಸುವ ಶೃಂಗಸಭೆ ಫಲಪ್ರದವಾಗಿದ್ದೇ ಆದರೆ ಅಂತರಾಷ್ಟ್ರೀಯ ಉದ್ವೇಗ ಸಡಿಲಗೊಂಡು ಏಷ್ಯದಲ್ಲಿ ಶಾಂತಿ ವಲಯ ಸುಭದ್ರಗೊಳ್ಳುವುದು. ಆ ವಲಯದ ರಚನೆಗೆ ನೀವು ಇದನ್ನು ಪ್ರಯತ್ನ ನಡೆಸಿದ್ದೀರಿ" ಎಂದೂ ಅವರು ಭಾರತದ ಪ್ರಧಾನ ಮಂತ್ರಿಗೆ ತಿಳಿಸಿದ್ದಾರೆ.

ವಿಶೇಷ ಸಮಾಚಾರಗಳು

ಕೇರಳದ 'ಕ್ರಿಸ್ಟೋಫರ್' ಬಗ್ಗೆ ಕೇಂದ್ರಕ್ಕೆ ಸೂಚನೆ

ಕೇರಳದಲ್ಲಿ ಈಗೀಗ ಹೆಚ್ಚೆಚ್ಚಾಗಿ ಆಯುಧ ಪಾಣಿಗಳಾಗಿ ಹಿಂಸಾತ್ಮಕ ಚಟುವಟಿಕೆಯನ್ನು ನಡೆಸುತ್ತಿರುವ, ಕಮ್ಯೂನಿಸ್ಟ್ ಮೆರವಣಿಗೆ, ಸಭೆ, ಸಂಘಟನೆಗಳ ಮೇಲೆ ಧಾಳಿ ನಡೆಸುತ್ತಿರುವ 'ಕ್ರಿಸ್ಟೋಫರ್' ಎಂಬ [illegible] ಕೆಥೋಲಿಕ್ ಚರ್ಚುಗಳಿಂದ ಪ್ರೇರಿತ ಸಂಸ್ಥೆಯ ಬಗ್ಗೆ ಪತ್ರಿಕಾಕರ್ತರು ಕೇರಳದ ಮುಖ್ಯ ಮಂತ್ರಿಯನ್ನು ಪ್ರಶ್ನಿಸಿದರು. ಇಂಥಾ ಸಂಸ್ಥೆಯನ್ನು ರಾಜ್ಯ ಸರ್ಕಾರ ನಿಷೇಧಿಸಬಹುದಲ್ಲವೇ ಎಂದು ಮುಖ್ಯ ಮಂತ್ರಿಯವರಿಗೆ ಹಾಕಲಾದ ಪ್ರಶ್ನೆಗೆ, ಆ ರೀತಿ ಮಾಡುವುದು ಸದ್ಯಕ್ಕೆ ಸರ್ಕಾರದ ಯೋಚನೆಯಾಗಿಲ್ಲವೆಂದೂ, ಈಗಾಗಲೇ ಈ ಸಂಸ್ಥೆಯ ಇರುವಿಕೆಯನ್ನು ಕೇಂದ್ರದ ಒಳಾಡಳಿತ ಖಾತೆಯ ಗಮನಕ್ಕೆ ತರಲಾಗಿದೆಯೆಂದು ಇ. ಎಂ. ಎಸ್. ನುಡಿದರು.

ಇದೇ ಕ್ರಿಸ್ಟೋಫರ್ ಸಂಸ್ಥೆಯಿಂದಲೇ ಕಿಸಾನ ಮುಖಂಡರೊಬ್ಬರ ಮತ್ತು ಕಾರ್ಮಿಕನೊಬ್ಬನ ಕೊಲೆಯಾಗಿರುವುದನ್ನು ನಾವಿಲ್ಲಿ ಸೂಚಿಸ ಬಯಸುತ್ತೇವೆ.

ಪಿ. ಎಸ್. ಪಿ. ಕಾಂಗ್ರೆಸ್ ಐಕ್ಯತೆ

ಕೇರಳದಲ್ಲಿ ಪಿ.ಎಸ್.ಪಿ.-ಕಾಂಗ್ರೆಸ್ ಐಕ್ಯಗೊಂಡು ಕಮ್ಯೂನಿಸ್ಟ್ ಸರಕಾರ ಉರುಳಿಸುವ ಹವಣಿಕೆಯಲ್ಲಿದೆಯೆಂದು ಸುದ್ದಿಯಾದರೂ, ಪಿ.ಎಸ್.ಪಿ ಯ ಅಧ್ಯಕ್ಷ ಇದನ್ನು ನಿರಾಕರಿಸಿದ್ದಾರೆ. ಪಿ.ಎಸ್.ಪಿ.ಯ ಇತರ ಪಕ್ಷಗಳೊಡನೆ ದೀರ್ಘಕಾಲದ ಒಪ್ಪಂದ ಮಾಡಲು ಸಿದ್ಧವಿಲ್ಲವೆಂದು, ಅಲ್ಲಲ್ಲಿ ಸಂದರ್ಭ ಒದಗಿದಲ್ಲಿ ನಿರ್ದಿಷ್ಟ ಪ್ರಶ್ನೆಗಳ ಮೇಲೆ ಇತರ ಪಕ್ಷಗಳೊಡನೆ ಬೆರೆಯುವುದು ಪಿ. ಎಸ್. ಪಿ. ನೀತಿಯೆಂದೂ ಪಿ. ಎಸ್. ಪಿ. ಅಧ್ಯಕ್ಷ ಶ್ರೀ ಗಂಗಾಶರಣ ಸಿಂಹರು ತಿಳಿಸಿದ್ದಾರೆ. ಆದುದರಿಂದಲೇ ಕೇರಳದಲ್ಲಿ ಕಮ್ಯೂನಿಸ್ಟರ ಸ್ವೇಚ್ಛಾಧಿಕಾರ ನೀತಿಯನ್ನು ತಡೆಗಟ್ಟಲು ಪ್ರಜಾ ಪ್ರಭುತ್ವ ಶಕ್ತಿಗಳು ಒಂದುಗೂಡುವ ಸಂದರ್ಭವಿದೆ, ಎಂದಿವರು ನುಡಿದಿದ್ದಾರೆ.

ಈ ಸಂದರ್ಭವನ್ನು ಕೈಬಿಡುವುದು ಸಂದರ್ಭ ಸಾಧಕರ ಲಕ್ಷಣವಲ್ಲ; ಅಲ್ಲದೆ ಶ್ರೀಯುತ ಗಂಗಾಶರಣಸಿಂಹರೇ ಹೇಳುವಂತೆ ಇದು, ಪಿ.ಎಸ್.ಪಿ.ಯ ರಾಷ್ಟ್ರೀಯ ನೀತಿಯೂ ಆಗಿದೆ.

ಕಾಂಗ್ರೆಸ್ ಮತ್ತು ಕೋಮುವಾರು ಗಲಭೆ

ಕಾಂಗ್ರೆಸ್ಸಿನ ಆಳ್ವಿಕೆಯಲ್ಲಿ ಕೋಮುವಾರು ಗಲಭೆ [illegible] ವಿಶ್ವರೂಪವನ್ನು ತಳೆದು ಭಾರತ [illegible] ಪಸರುತ್ತಿದೆ ಎಂಬುದಕ್ಕೆ ಸಂಜಾಪನಲ್ಲಿ ಹಿಂದಿ ಸತ್ಯಾಗ್ರಹ, ಮದ್ರಾಸಿನಲ್ಲಿ [illegible] ಳಗಂ, ಕಳಗಗಳ ಹಿಂಸಾತ್ಮಕ ಚಟುವಟಿಕೆ ಮತ್ತು ರಾಮನಾಥಪುರದಲ್ಲಿ ನಡೆದ ದೊಂಬಿಯು ಪ್ರತ್ಯಕ್ಷ ನಿದರ್ಶನವಾಗಿದೆ.

ಮದ್ರಾಸಿನಲ್ಲಿ ಕಳೆದ ಚುನಾವಣೆಯಲ್ಲಿ ಕಾಂಗ್ರೆಸ್ ಜೊತೆಗೆ ಕಳಗಂ ಬಾವುಟ ಹಾರಿಸಿ ಪ್ರಚಾರ ನಡೆದಿರುವುದು ಎಲ್ಲರಿಗೂ ತಿಳಿದಿದೆ. ಈಗ, ನಾಡಾರರನ್ನು ಮುಖ್ಯ ಮಂತ್ರಿಯಾಗಿ ಮಾಡಿದವನೇ ತಾನೆಂದು ಕಳಗಂನ ನಾಯಕರರು ಹೇಳುತ್ತಿದ್ದಾರೆ ಇತ್ತ ನಾಡರರು ನಾಯಕರ ಚಟುವಟಿಕೆಗೆ ಮೌನ ಸಮ್ಮತಿ ಇತ್ತಿದ್ದಾರೆ.

ಮೊನ್ನೆ ಮೊನ್ನೆ ನೆಹ್ರೂ ಮದ್ರಾಸಿಗೆ ತೆರಳಿದಾಗ ಕಪ್ಪು ಧ್ವಜವೆತ್ತಿ ಪ್ರತಿಭಟಿಸಿದ್ದೇ ಸಾಲದೆ, ಗಲಭೆ ಎಬ್ಬಿಸಿ, ಕಲ್ಲು ತೂರಿ, ಐದಾರು ಬಸ್ಸುಗಳನ್ನು ಕಳಗಂ ಗಲಭೆಖೋರರು ಸುಟ್ಟಿದ್ದಾರೆ.

ಚುನಾವಣೆ ಗೆದ್ದು ಅಧಿಕಾರ ಪೀಠಕ್ಕೇರಲು ಕೋಮುವಾರು ಪಕ್ಷ ಪಂಗಡಗಳ ನೆಂಟುತನಬೇಕು ಈಗ ಈ ಹಾವಿಗೆ ಹಾಲೆರೆದ ಕೈಯನ್ನೇ ಅದು ಕಚ್ಚುವಾಗ...., ಮಾಡಿದುಣ್ಣೊ ಮಹಾರಾಯ ಎಂದು ಜನ ಆಡಿಕೊಂಡರೆ ತಪ್ಪೇನಿದೆ!

1965ಕ್ಕೆ ಹಿಂದಿ!

1965ರ ವೇಳೆಗೆ ಕೇಂದ್ರದಲ್ಲಿ ಹಿಂದಿಯನ್ನು ಅಧಿಕೃತ ಭಾಷೆಯಾಗಿ ಪರಿವರ್ತಿಸುವುದನ್ನು ವೈಕ್ತಿಗತವಾಗಿ ತಾವು ಸ್ವಾಗತಿಸುವುದಾಗಿ ಇ. ಎಂ. ಎಸ್. ನಂಬೂದ್ರಿಪಾದ್‌ರ ಅಭಿಪ್ರಾಯ. ಈ ಮೊದಲೇ ರಾಜ್ಯ ಮಟ್ಟದಲ್ಲಿ ರಾಜ್ಯಭಾಷೆಗಳನ್ನು ಕೂಡಲೇ ಅಧಿಕೃತ ಭಾಷೆಯಾಗಿ ಪರಿವರ್ತಿಸಬೇಕೆಂದು ಇ. ಎಂ. ಎಸ್. ಹೇಳಿದ್ದಾರೆ.

ಪಿ. ಎಸ್. ಪಿ. ನಿರ್ಣಯಗಳ ಬಗ್ಗೆ

ಪ್ರ. ಸ. ವಾ. ಪಕ್ಷದ ರಾಷ್ಟ್ರೀಯ ಕಾರ್ಯಕಾರಿ ಸಮಿತಿಯು ಇತ್ತೀಚೆಗಿನ ಕೇರಳ ಸರ್ಕಾರವನ್ನು ಖಂಡಿಸುವ ನಿರ್ಣಯದ ಬಗ್ಗೆ ಇ. ಎಂ. ಎಸ್.ರ ಪ್ರತಿಕ್ರಿಯೆ ಏನೆಂದು ಕೇಳಲು, ಮುಖ್ಯ ಮಂತ್ರಿಗಳು 'ತಾನೇನನ್ನು ಹೇಳಲು ಬಯಸುವುದಿಲ್ಲ. ಆದರೆ ಈ ನಿರ್ಣಯಗಳಲ್ಲಿ ಆಧಾರರಹಿತ ಆಪಾದನೆಗಳೂ ಸತ್ವರಹಿತ ಸಿದ್ಧಾಂತಗಳೂ ಮಾತ್ರ ತುಂಬಿವೆ' ಎಂದು ಹೇಳಿದರು.

ರಷ್ಯದ ಸೇನಾಬಲದಲ್ಲಿ ಮೂರು ಲಕ್ಷ ಖೋತಾ

ರಷ್ಯಾದ ಸೇನಾ ಬಲದಲ್ಲಿ 3 ಲಕ್ಷ ಸೈನಿಕರನ್ನು ಕಡಿಮೆ ಮಾಡುವುದೇ ಅಲ್ಲದೆ ಪೂರ್ವ ಜರ್ಮನಿ ಮತ್ತು ಹಂಗೇರಿಯಿಂದ ಕ್ರಮವಾಗಿ 41 ಸಾವಿರ ಮತ್ತು 17 ಸಾವಿರ ಸೈನಿಕರನ್ನು ಹಿಂದಕ್ಕೆ ಕರೆಸಿಕೊಳ್ಳುವುದಾಗಿ ರಷ್ಯಾ ಪ್ರಕಟಿಸಿದೆ.

ನಿರಾಯುಧೀಕರಣ ಸಮಸ್ಯೆಯ ಪರಿಹಾರ ಮತ್ತು ಶೀತಲ ಯುದ್ಧದ ಅಂತ್ಯಕ್ಕೆ ನಾಂದಿಯಾಗಿ ರಷ್ಯಾ ಈ ಹೆಜ್ಜೆಯನ್ನು ಕೈಗೊಂಡಿದೆ. ಹೇಳಿದ್ದನ್ನು ಕೃತಿಯಲ್ಲಿಳಿಸಿದೆ.

ಅಮೆರಿಕಾದ ಪ್ರತಿಕ್ರಿಯೆ

ಇದರಿಂದಾಗಿ ಶಕ್ತಿಯ ಸಮತೂಕದಲ್ಲಿ ವ್ಯತ್ಯಾಸವಿಲ್ಲ. ಆದ ಕಾರಣ ತಾವು ಪಶ್ಚಿಮ ಜರ್ಮನಿಯಿಂದ ಸೇನೆಯನ್ನು ಹಿಂದಕ್ಕೆ ಕರೆಸುವುದಾಗಲಿ ಸೇನಾ ಬಲದಲ್ಲಿ ಲವಲೇಶವೂ ಖೋತಾ ಮಾಡುವುದಾಗಲಿ ಅಸಂಭವವೆಂದು ಅಮೆರಿಕಾ ತಿಳಿಸಿದೆ. ಶೀತ ಯುದ್ಧದ ಬಂಡವಾಳದಿಂದ ಪ್ರತಿಷ್ಠೆ ಮತ್ತು ಲಾಭವನ್ನು ಉಳಿಸಿಕೊಳ್ಳಲು ಯತ್ನಿಸುವ ಅಮೆರಿಕಾದಿಂದ ಇದಕ್ಕಿಂತ ಹೆಚ್ಚೇನನ್ನು ಬಯಸಬಹುದು!

ಆದರೆ ಅಮೆರಿಕಾದಲ್ಲಿ ಈ ಯುದ್ಧ ಖೋರ ನೀತಿಗೆ ವಿರೋಧವಾಗಿ ಸರಕಾರ ತನ್ನ ನೀತಿಯನ್ನು ಹೊಂದಿಸಬೇಕೆಂಬ ಅಭಿಪ್ರಾಯ ಬಲಗೊಳ್ಳುತ್ತಿದೆ.

ಅಮೆರಿಕಾದಲ್ಲಿ ಅಧಿಕವಾಗಿ ಪತ್ರಿಕೆಗಳೂ, ಪ್ರೊಫೆಸರರೂ ರಷ್ಯಾದೊಡನೆ ಶಾಂತಿ ಸಂಧಾನವಾಗಲೆಂದು ಒತ್ತಾಯಿಸುತ್ತಿದ್ದಾರೆ. ಯುದ್ಧಖೋರ ನೀತಿಯ ಬೆಂಬಲಿಗ ಡಲ್ಲೆಸ್ 'ಇವರು ಒಂದು ಅಂತರ್ರಾಷ್ಟ್ರೀಯ ಕಂಟಕ' ಎಂಬ ಕೆನಡಾದ ರಾಜಕಾರಣಿಯ ಹೇಳಿಕೆಗೆ ಪುಷ್ಟಿಯಾಗಿ ಅಮೆರಿಕಾದ ಪ್ರತಿಕ್ರಿಯೆ ಬರುತ್ತಿದೆ.

ಹಾಫ್‌ಮನ್ ಹೇಳಿಕೆ

ಇದೀಗ ಅಮೆರಿಕಾದ ಪ್ರಮುಖ ವಾಣಿಜ್ಯೋದ್ಯಮಿ ಮತ್ತು ಶ್ವೇತ ಭವನದ ಸಲಹೆಗಾರ ಪಾಲ್ ಹಾಫ್‌ಮನ್‌ರಿಂದ ಶಾಂತಿಯ ಬಗ್ಗೆ ಉತ್ತಮ ಸಲಹೆ ಬಂದಿದೆ. "ಅಮೆರಿಕಾ ಶಾಂತಿ ಸಾಧನೆಗಾಗಿ ಪರಿಣಾಮಕಾರಿ ಕಾರ್ಯಕ್ರಮ ಕೈಗೊಳ್ಳದಿದ್ದಲ್ಲಿ ರಷ್ಯಾದೊಡನೆ ನಮ್ಮ ಬಾಂಧವ್ಯ ಹಳಸಿಕೊಳ್ಳುವುದೇ ಅಲ್ಲದೆ, ನಮ್ಮ ಜೀವನಕ್ರಮ ಅಂತ್ಯಗೊಳ್ಳುವುದೆಂದು" ಇವರು ಹೇಳಿದ್ದಾರೆ. ಈ ಸತ್ಯವನ್ನು ಮನಗಂಡು ಇದಕ್ಕೆ ತಕ್ಕ ಪರಿಹಾರ ಸೂಚಿಸಿದ ಹಾಫ್‌ಮನ್‌ರ ಸಲಹೆಯನ್ನು ಅಮೆರಿಕಾ ಸರ್ಕಾರ ಒಪ್ಪಿಕೊಂಡಲ್ಲಿ ವಿಶ್ವಶಾಂತಿಯ ಸಾಧನೆಯಲ್ಲಿ ಒಂದು ಹೆಜ್ಜೆ ಇಟ್ಟಂತಾಗುವುದು.

ಪಶ್ಚಿಮಕ್ಕೆ ಸುಕಾರ್ನೊ ಎಚ್ಚರಿಕೆ!

"ಪಶ್ಚಿಮ ರಾಷ್ಟ್ರಗಳ ಧೋರಣೆಗಿಂತ ಭಿನ್ನವಾದ ನೀತಿಯನ್ನೂ ವಿಚಾರ ಧಾರೆಯನ್ನೂ ಹೊಂದಿರುವ ಏಷ್ಯಾದ ರಾಷ್ಟ್ರಗಳನ್ನು ಕಮ್ಯೂನಿಸ್ಟ್ ರಾಷ್ಟ್ರವೆಂದು ದೂಷಿಸುವುದರಲ್ಲಿ ಪಶ್ಚಿಮದ ಕೆಲವು ರಾಷ್ಟ್ರಗಳು ಆನಂದ ಪಡೆಯುತ್ತಿವೆ. ಇದು ಶುದ್ಧ ಮೂರ್ಖತನ." ಎಂದು ಹೇಳಿದ ಅಧ್ಯಕ್ಷ ಸುಕಾರ್ನೊ ಮುಂದುವರಿದು, ಈ ನೀತಿಯನ್ನೇ ಪಶ್ಚಿಮದ ರಾಷ್ಟ್ರಗಳು ಅನುಸರಿಸಿದಲ್ಲಿ, ವಿಶ್ವದ ಇತರ ರಾಷ್ಟ್ರಗಳಿಂದ ಪ್ರತ್ಯೇಕವಾಗಿ ಆ ರಾಷ್ಟ್ರಗಳು ಉಳಿಯಬೇಕಾದೀತು ಎಂದು ಇಂಡೋನೇಷಿಯಾ ಅಧ್ಯಕ್ಷ ಸುಕಾರ್ನೊರವರು ಸಾರಿದ್ದಾರೆ.

ಮೈಸೂರು ಕಾಂಗ್ರೆಸ್ಸಿಗೊಂದು ಸೋಷಲಿಸ್ಟ್ ಪಂಥ!

ಕಾಂಗ್ರೆಸ್ಸಿನ ಮಂಡಲ ಚುನಾವಣೆಗಳಿಗೆ ಸಂಬಂಧಿಸಿ ಖೋಟಾ ಸದಸ್ಯ ಸಂಗ್ರಹ, ಅಹಿತಕರ ಪೈಪೋಟಿ, ಕಾಂಗ್ರೆಸ್ಸಿಗರ ಅನೀತಿಯುತ ನಡವಳಿಕೆ, ಅಧಿಕಾರದ ದುರುಪಯೋಗ ನಡೆದಿದೆ; ಈ ಬಗ್ಗೆ ಕಾಂಗ್ರೆಸ್ ಹೈಕಮಾಂಡ್ ತೀವ್ರತರ ಕ್ರಮ ವಹಿಸಬೇಕೆಂದು, ಮೈಸೂರಿನ ಮಾಜಿ ಮುಖ್ಯ ಮಂತ್ರಿ ಕಡಿದಾಳ್ ಮಂಜಪ್ಪನವರು, ಶ್ರೀಮನ್ನಾರಾಯಣರವರಿಗೆ ತಿಳಿಸಿದ್ದಾರೆ.

ಪೈಪೋಟಿಯಿಂದಲೇ ಒಮ್ಮೆ ಮುಖ್ಯ ಮಂತ್ರಿಯಾಗಿ, ಅದರಿಂದಲೇ ಕೆಳಗುರುಳಿದ ಕಡಿದಾಳರ ಮಾತು ಸ್ವಯಂ ಅನುಭವಪೂರಿತ. ಅಲ್ಲದೆ, ಕಡಿದಾಳರ ಮಾತಿಗೆ ಪ್ರತ್ಯಕ್ಷ ಸಾಕ್ಷಿಯಾಗಿ ಎಂ.ಪಿ.ಸಿ.ಸಿ. ಕಾರ್ಯಕಾರೀ ಸಮಿತಿ ಚುನಾವಣೆಯೂ ಮುಂದೆ ಹೋಗಿದೆ. ಇದಕ್ಕೆ ಕಾರಣ ಫೋರ್ಜರಿ ಸದಸ್ಯ ಸಂಗ್ರಹವೆಂದು ಹೇಳಲಾಗಿದೆ.

ಅಂತೂ ಇಷ್ಟರವರೆಗೆ ರೆಡ್ಡಿ ದಳ, ಕೆಂಗಲ್ ಕೂಟ, ಸಾಹುಕಾರ ಸಮೂಹ, ನಿಜಲಿಂಗಪ್ಪ ಗುಂಪು ಎಂದು ಮೈಸೂರಿನ ಕಾಂಗ್ರೆಸ್ಸಿನಲ್ಲಿ ಪಂಥಗಳು ಹುಟ್ಟುತ್ತಿದ್ದು, ಈಗ ಸೋಷಲಿಸ್ಟ್ ಪಂಥವನ್ನು ಸ್ಥಾಪಿಸಲು ಕಡಿದಾಳರು ಯೋಚಿಸಿದ್ದಾರೆ. ಆದರೆ ಇದನ್ನೂ ಕಡಿದಾಳರ ಪಂಥವೆಂದು ಭಾವಿಸುವುದು ತಪ್ಪು!

ದೃಶ್ಯ ೧

(ಕಂಟ್ರಾಕ್ಟರ್ ರಾಮುಪ್ಪನ ಮನೆ. ಐಶ್ವರ್ಯವಂತನ ಮನೆಯ ಚಾವಡಿ ಎನ್ನುವುದು ಎದ್ದು ಕಾಣುತ್ತಿದೆ. ಮೇಜು, ಕುರ್ಚಿಗಳು, ದೂರದಲ್ಲೊಂದು ಬೆಂಚು, ಎಲ್ಲ ಅಚ್ಚುಕಟ್ಟಾಗಿ ಇವೆ. ಗೋಡೆಯ ಮೇಲೊಂದು ದೊಡ್ಡ ಗಡಿಯಾರವಿದೆ. ಬಣ್ಣ ಬಣ್ಣದ ಕ್ಯಾಲೆಂಡರುಗಳ ನಡುವೆ ಗಾಂಧಿ, ನೆಹರು ಮತ್ತಿತರ ನಾಯಕರ ಭಾವ ಚಿತ್ರಗಳು ತೂಗಾಡುತ್ತಿವೆ.

ಬಿಳಿ ಖಾದಿ ಧೋತ್ರ ಹಾಗು ಜುಬ್ಬ ತೊಟ್ಟು, ತಲೆಗೆ ಟೋಪ್ಪಿಗೆಯಿಟ್ಟು, ಮೈ ಮುಚ್ಚಿಕೊಳ್ಳುವಂತೆ ಶಾಲು ಹೊದ್ದುಕೊಂಡ ಕಪ್ಪಗಿನ ವ್ಯಕ್ತಿ — ಕೆ. ಕೆ. ಶಾಸ್ತ್ರಿ — ಬೆಂಚಿನ ಮೇಲೆ ಕುಳಿತುಕೊಂಡಿದ್ದಾನೆ. ಏನೋ ಗಾಢ ವಿಚಾರದಲ್ಲಿ ಮಗ್ನನಾಗಿರುವ ಮುಖಭಾವ. ಪ್ರಾಯ ಹೆಚ್ಚು ಕಡಿಮೆ ನಲವತ್ತೈದು ವರ್ಷ. ತೊಡೆಯ ಮೇಲೊಂದು ಚರ್ಮದ ಬ್ಯಾಗು ಇಟ್ಟುಕೊಂಡು ಅದರ ಹೊರಬದಿಯನ್ನು ಎರಡು ಕೈಗಳಲ್ಲೂ ಹಿಡಿದುಕೊಂಡಿದ್ದಾನೆ. ಹತ್ತಿರದಲ್ಲೊಂದು ಛತ್ರಿ. ಯಾರನ್ನೋ ಆತುರದಿಂದ ಪರೀಕ್ಷಿಸುತ್ತಿರುವಂತೆ ಆಗಾಗ ಬಾಗಿಲಿನ ಕಡೆಗೆ ನೋಡುತ್ತಿದ್ದಾನೆ. ಮಾತಿನ ನಡುವೆ ಆಗಾಗ ಹಲ್ಲು ಕಿರಿಯುವುದು ಅವನ ಸ್ವಭಾವ. ಮುಖ್ಯಾಪ್ಸ ಒಂದು ಘಂಟೆಯ ಹೊತ್ತು.

ಮನೆಯೊಳಗಿಂದ ಹದಿನೆಂಟು - ಇಪ್ಪತ್ತರ ಗೌರವರ್ಣದ, ಸುಂದರ ಯುವತಿ ಚಾವಡಿಗೆ ಬರುತ್ತಾಳೆ. ಅವಳು ಕಂಟ್ರಾಕ್ಟರ್ ರಾಮುಪ್ಪನ ಹೆಂಡತಿ—ಗೋಪಿ).

ಶಾಸ್ತ್ರಿ : (ಗೋಪಿಯನ್ನು ಕಂಡೊಡನೆ ಎದ್ದು, ಬಗ್ಗಿ, ಕೈ ಜೋಡಿಸಿ) ನಮಸ್ಕಾರ ಅಮ್ಮ !

ಗೋಪಿ: (ಕೈ ಜೋಡಿಸಿ) ನಮಸ್ಕಾರ ! ಬಹಳ ಹೊತ್ತಾಯ್ತೂಂತ ಕಾಣಿಸ್ತದೆ—ಬಂದು? ಕೂತ್ಕೊಳ್ಳಿ.

ಶಾಸ್ತ್ರಿ : (ನಿಂತುಕೊಂಡೆ) ಹೆಚ್ಚು ಹೊತ್ತಾಗಿಲ್ಲ ! ಯಜಮಾನ್ರನ್ನು ಕಾಣ್ಬೇಕಾಗಿತ್ತು !

ಗೋಪಿ : ಅವರು ಬರುವ ಹೊತ್ತಾಯ್ತು. ಕೂತ್ಕೊಳ್ಳಿ.

ಶಾಸ್ತ್ರಿ : (ಕುಳಿತುಕೊಳ್ಳುತ್ತ) ಯಜಮಾನರಿಗೆ ಕೈತುಂಬಾ ಕೆಲಸ ! ಊಟಕ್ಕೂ ಬಿಡುವಿಲ್ಲ, ಪಾಪ !

ಗೋಪಿ: ಏನಿದ್ರೂ, ಊಟಕ್ಕೆ ಬಂದೇ ಬರ್ತಾರೆ. (ಗಡಿಯಾರ ನೋಡಿ) ಇನ್ನೇನು—ಈಗ ಬಂದ್ಬಿಡ್ತಾರೆ. ಬಾಯಾರಿಕೆಗೆ ಬೇಕೆ ?

ಶಾಸ್ತ್ರಿ : (ಸಂತುಷ್ಟನಾದವನಂತೆ) ಏನೂ ಬೇಡ ! ಏನೂ ಬೇಡ, ತಾಯಿ !

ಗೋಪಿ : ಹಾಗಾದ್ರೆ ಇಲ್ಲೆ ಕೂತಿರಿ. ಅವರೂ ಬಂದ್ಮೇಲೆ ಊಟ ತೀರ್ಸಿಕೊಂಡು ಹೋಗಬಹುದು ! (ಒಳಗೆ ಹೋಗುತ್ತಾಳೆ).

(ಶಾಸ್ತ್ರಿ ರಾಮುಪ್ಪನ ದಾರಿ ಕಾಯುತ್ತ ಕುಳಿತಿರುತ್ತಾನೆ. ಒಂದೆರಡು ಸಲ ಆಕಳಿಸುತ್ತಾನೆ. ಸ್ವಲ್ಪ ಹೊತ್ತಿನಲ್ಲಿ ರಾಮುಪ್ಪ ಬರ್ತಾನೆ. ಅವನ ಜೊತೆಯಲ್ಲಿ "ಗ್ರಾಮೋದ್ಧಾರ ಸಂಘ" ಕಾರ್ಯದರ್ಶಿ ನಾರಾಯಣಪ್ಪನೂ ಇದ್ದಾನೆ. ಇಬ್ಬರೂ ಖಾದಿ ಧಾರಿಗಳು.

ರಾಮುಪ್ಪ ಸುಮಾರು 35 ವರ್ಷದವನು. ನಾರಾಯಣಪ್ಪನೂ ಹೆಚ್ಚು ಕಡಿಮೆ ಅದೇ ವಯಸ್ಸಿನವನು. ಅವನ ಕಂಕುಳಲ್ಲಿ ಕೆಲವು ಲೆಕ್ಕದ ಪುಸ್ತಕಗಳಿವೆ. ಮಾತಾಡುವಾಗ ಎದುರು ಇರುವವರನ್ನು ಬೆರಳುಗಳಿಂದ ತಿವಿದು, ತಿವಿದು, ತನ್ನ ಕಡೆಗೆ ಗಮನ ಸೆಳೆದು, ಮಾತಾಡುವುದು ಅವನ ರೂಢಿ).

ರಾಮುಪ್ಪ : (ಒಳಗೆ ಬರುತ್ತ) ನಾನು ಹೇಳಲಿಲ್ಲ—ಹಾಗೇನೇ ಮಾಡಿಬಿಡು !

ನಾರಾಯಣಪ್ಪ : ನೀವೇ ಹೇಳಿದಂತೆ ನಾನು ಮಾಡ್ತೇನೆ ! ಇನ್ನೇನು ಮಾಡೇ ಬಿಡಾನ !

ಶಾಸ್ತ್ರಿ : (ಎದ್ದು ಬಹಳ ಬಗ್ಗಿ ಕೈಜೋಡಿಸಿ) ಯಜಮಾನ್ರು ಬಂದ್ರಿ ! ನಮಸ್ಕಾರ !

ಮನೆ ಮುರಿದ ಮಗ

(ಸಾಮಾಜಿಕ ನಾಟಕ)

ಮೂಲ: ಶ್ರೀ ತೋಪಿಲ್ ಭಾಸಿ.   ಅನುವಾದ: ಪಂಡಿತ್.

(ಕಳೆದ ಸಂಚಿಕೆಯಿಂದ ಮುಂದುವರಿದುದು)

ರಾಮುಪ್ಪ : (ಕೈ ಎತ್ತದೆನೆ) ನಮಸ್ಕಾರ ! ಏನು ಶಾಸ್ತ್ರಿಗಳೆ ? ಯಾವಾಗ ಬಂದ್ರಿ ?

ಶಾಸ್ತ್ರಿ : ಈಗತಾನೆ ಬಂದೆ ಸ್ವಾಮಿ ! ಖಾವಂದ್ರ ಭೇಟಿ ಮಾಡ್ಕೊಂಡು ಹೋಗಾನಾಂತ !

(ರಾಮುಪ್ಪ ಕುರ್ಚಿಯಲ್ಲಿ ಕುಳಿತುಕೊಳ್ಳುತ್ತಾನೆ ನಾರಾಯಣಪ್ಪ ಲೆಕ್ಕದ ಪುಸ್ತಕಗಳನ್ನೆಲ್ಲ ಮೇಜಿನ ಮೇಲೆ ಇಟ್ಟು ಬೆಂಚಿನಲ್ಲಿ ಕುಳಿತುಕೊಳ್ಳುತ್ತಾನೆ).

ರಾಮುಪ್ಪ : (ಪುಸ್ತಕಗಳನ್ನು ತನ್ನ ಕಡೆಗೆ ಎಳೆದುಕೊಳ್ಳುತ್ತ) ಕೂತ್ಕೊಳ್ಳಿ ಶಾಸ್ತ್ರಿಗಳೇ ! ನಿಂತೇ ಇದ್ದೀರಲ್ಲ !

(ಶಾಸ್ತ್ರಿ ಮೆಲ್ಲಗೆ ಬೆಂಚಿನಲ್ಲಿ ಕುಳಿತುಕೊಳ್ಳುತ್ತಾನೆ.

ರಾಮುಪ್ಪ : (ಒಂದು ಪುಸ್ತಕವನ್ನು ಬಿಡಿಸಿ ಹಾಳೆಗಳನ್ನು ತಿರುವುತ್ತ) ಮತ್ತೇನು ಶಾಸ್ತ್ರಿಗಳೆ, ವಿಶೇಷ ? ಒಂದು ಸಂಕಟದ ಕೆಲಸ ವಹಿಸಿಕೊಂಡಿದ್ದೇನೆ. ಬಿಡುವೇ ಇಲ್ಲ.

ಶಾಸ್ತ್ರಿ : ಅಲ್ವೆ ಮತ್ತೆ ? ವಿಶೇಷ ಏನು ಮಣ್ಣು—ಬಡವರದು (ಹಲ್ಲುಕಿರಿಯುತ್ತಾನೆ).

ರಾಮುಪ್ಪ : (ನಾರಾಯಣಪ್ಪನೊಡನೆ) ನಿನಗೆ ಶಾಸ್ತ್ರಿಗಳ ಪರಿಚಯ ಇತ್ತೆ ?

ನಾರಾಯಣಪ್ಪ : ಇಲ್ವಲ್ಲಾ !

ರಾಮುಪ್ಪ : ನೀನೆಂಥವನೊ ? ಕೆ. ಕೆ. ಶಾಸ್ತ್ರೀಂತ ಕೇಳಿಲ್ವೆ ? ಎಕ್ಸ್-ಎಮ್ಮೆಲ್ಲೆ ! ಹರಿಜನ ನಾಯಕ್ರು !

(ಶಾಸ್ತ್ರಿ ಹಲ್ಲು ಕಿರಿಯುತ್ತಾನೆ).

ನಾರಾಯಣಪ್ಪ : ಓ—ಹೋ - ಹೋ ! ಕೇಳಿದ್ದೇನೆ, ಕೇಳಿದ್ದೇನೆ ! ನೋಡಿ ಪರಿಚಯ ಇಲ್ಲ, ಅಷ್ಟೇನೆ !

ರಾಮುಪ್ಪ : (ಶಾಸ್ತ್ರಿಗೆ ನಾರಾಯಣಪ್ಪನ ಪರಿಚಯ ಮಾಡಿಕೊಡುತ್ತ) ಇವರು ನಾರಾಯಣಪ್ಪಾಂತ ! ನಮ್ಮ ಗ್ರಾಮ ಸೇವಾ ಸಂಘದ ಪ್ರಧಾನ ಕಾರ್ಯದರ್ಶಿ !

ಶಾಸ್ತ್ರಿ : (ಕೈ ಜೋಡಿಸಿ) ನಮಸ್ಕಾರ ಸ್ವಾಮಿ !

ನಾರಾಯಣಪ್ಪ : ನಮಸ್ಕಾರ !

ಶಾಸ್ತ್ರಿ : (ನಾರಾಯಣಪ್ಪನ ಮುಖವನ್ನೆ ಸ್ವಲ್ಪ ಹೊತ್ತು ನೋಡಿ) ತಮ್ಮನ್ನು ನಾನು ಎಲ್ಲೋ ಕಂಡಿದ್ದೇನೆ ಸ್ವಾಮಿ ! (ಹಲ್ಲು ಕಿರಿಯುತ್ತಾನೆ).

ರಾಮುಪ್ಪ : ಕಾಣದೆ ಏನು ಶಾಸ್ತ್ರಿಗಳೇ ? ನಮ್ಮ ನಾರಾಯಣಪ್ಪ ಹೋಗದ ಸ್ಥಳ ಇಲ್ಲ ! ಶುಂಠಿಯಿಲ್ಲದ ಕಷಾಯ ಇಲ್ಲಾಂತಾರೆ ನೋಡಿ ಹಾಗೆ ! ನಾರಾಯಣಪ್ಪ ಇಲ್ಲದ ಕಿತಾಪತಿ ಇಲ್ಲ ! (ನಗುತ್ತಾನೆ).

ಶಾಸ್ತ್ರಿ : ಕಾರ್ಯದರ್ಶೀಂತ ಅಂದ್ಮೇಲೆ ಹಾಗೆ ಇರ್ಬೇಕಾಗ್ತದೆ ಸ್ವಾಮಿ (ಹಲ್ಲು ಕಿರಿಯುತ್ತಾನೆ).

ರಾಮುಪ್ಪ : ಅದಿರ್ಲಿ—ಶಾಸ್ತ್ರಿಗಳು ಸುಮ್ ಸುಮ್ನೆ ಬರ್ವವರಲ್ವಲ್ಲ! ಏನ್ ಬಂದ್ರಿ ಈ ಕಡೆ?

(ನಾರಾಯಣಪ್ಪ ಜೋಬಿನಿಂದ ಒಂದು ಪುಸ್ತಕ ತೆಗೆದುಕೊಂಡು ಹಾಳೆ ತಿರುವುತ್ತ ಏನೋ ಬರೆಯ್ತಾ ಹಾಕುತ್ತಾನೆ).

ಶಾಸ್ತ್ರಿ : ಮೊನ್ನೆ ನಾನು ಅರಿಕೆ ಮಾಡ್ಕೊಂಡದ್ದು ಏನಾದ್ರೂ...

ರಾಮುಪ್ಪ : (ನಡುವೆ ತಡೆದು) ಅದಾ ? ಅದಾಗ್ತಾ ಇದೆ !

(ಶಾಸ್ತ್ರಿ ಹಲ್ಲು ಕಿರಿಯುತ್ತಾನೆ).

ರಾಮುಪ್ಪ : ಏ—ನಾರಾಯಣಪ್ಪ ! ಮೊನ್ನೆ ಶಾಸ್ತ್ರಿಗಳು ಬಂದು ಹೇಳಿದ್ರು—ನಮ್ಮ ಹೊಲೆಯರೂ ಕಮ್ನಿಷ್ಟರ ಸಂಘಕ್ಕೆ ಸೇರ್ತಾ ಇದಾರೇಂತ ! ಅದಕ್ಕೇನಾದ್ರೂ ಮಾಡ್ಬೇಕಲ್ಲ ?

(ತಾನು ಹೇಳಿದ್ದು ಬೇರೆ, ರಾಮುಪ್ಪ ತಿಳುಕೊಂಡದ್ದು ಬೇರೆ ಎಂದು ತಿಳಿದು ಶಾಸ್ತ್ರಿಯ ಮುಖ ಸಪ್ಪೆಯಾಗುತ್ತದೆ).

ನಾರಾಯಣಪ್ಪ : ಶಾಸ್ತ್ರಿಗಳೇ ನಮ್‌ಕಡೆ ಇರ್ವಾಗ—ಅದೇನ್ ಮಹಾ ! ಎಲ್ಲ ಈ ಕಡೆ ಎಳ್ಕೋಬಹುದು ! (ಶಾಸ್ತ್ರಿಯನ್ನು ಬೆರಳಿಂದ ತಿವಿದು) ಏನಂತೀರಾ? ಎಳ್ಕೋಬಹುದೂಂತ!

(ನಾರಾಯಣಪ್ಪ ತಿವಿದಾಗ ಶಾಸ್ತ್ರಿ-ಏನೋ ಯೋಚನೆಯಲ್ಲಿದ್ದವ — ಪಕ್ಕನೆ ಹೌಹಾರುತ್ತಾನೆ).

ರಾಮುಪ್ಪ : ಏನು ಶಾಸ್ತ್ರಿಗಳೆ ? ನೀವೇನೂ ಹೇಳೋದೇ ಇಲ್ವಲ್ಲಾ ?

ಶಾಸ್ತ್ರಿ : ನಮ್ ಜಾತೀನೆ ಬಲು ಒರಟು ಸ್ವಾಮಿ ! ಮುಖ್ಯ ವಿದ್ಯೆ ಇಲ್ಲ ! ತಿಳಿಗೇಡಿ ನನ್ಮಕ್ಳು !

ನಾರಾಯಣಪ್ಪ : ಹಾಗಂದ್ರೆ ಆಗೋಯ್ತು? ತಿಳಿಗೇಡಿಗಳಾದ್ರೆ ಮತ್ತೂ ಸುಲ್‌ಭಾಂತನ್ನಿ ! ನೀವೇ ಮುಂದಾಳಾಗಿ ನಿಂತ್‌ಬಿಟ್ರೆ—ಎಲ್ಲ ಬರ್ತಾವೆ ನಮ್‌ಕಡೆ—ನೋಡಿ ಬೇಕಾದ್ರೆ !

ರಾಮುಪ್ಪ : ಶಾಸ್ತ್ರಿಗಳು ಇದಾರೇಂತನ್ನಿ ! ಈಗೇನ್ಮಾಡಾನ ?

ಶಾಸ್ತ್ರಿ : (ವಿಷಯ ಬೇರೆಯೇ ಆಗಿ ಹೋದುದನ್ನು ಬದಲಿಸುವ ಉದ್ದೇಶದಿಂದ) ಅದೆಲ್ಲ ನಾನ್ ನೋಡ್ಕೋತೀನಿ ! (ಹಲ್ಲು ಕಿರಿಯುತ್ತಾನೆ) ಖಾವಂದ್ರ ಹತ್ರ ಮತ್ತೊಂದು ವಿಚಾರ ಹೇಳಿದ್ದೆ—ಮರ್ತೋಯ್ತೂಂತ ಕಾಣಿಸ್ತದೆ !

ರಾಮುಪ್ಪ: (ಸ್ವಲ್ಪ ಯೋಚನೆ ಮಾಡಿ) ಓ-ಹೋ. ಅದೋ ! (ನಗುತ್ತಾನೆ) ಅದಾಗ್ತದೆ ! ನಾನು ಹೇಳಿದ್ರೆ ಸಾಲ್ದೆ ? ಆಗ್ತದೇಂತ !

ಶಾಸ್ತ್ರಿ : (ಹಲ್ಲುಕಿರಿದು) ತಾವು ಮನಸ್ ಮಾಡಿದ್ರೆ ಆಗ್ಯೇ ಆಗ್ತದೇಂತ ನಂಗೊತ್ತು !

ರಾಮುಪ್ಪ : (ನಾರಾಯಣಪ್ಪನೊಡನೆ) ನಾರಾಯಣಪ್ಪ ! ನಮ್ಮ ತನಿಯನ ಮಗಳಿಲ್ವೆ—ಬೊಳ್ಳಿ ? ಅವಳಿಗೆ ಒಂದು ಗಂಟ್ ಹಾಕ್ಬೇಕೂಂತಿದ್ದಾರೆ—ಶಾಸ್ತ್ರಿಗಳು !

ನಾರಾಯಣ : ಹಾಕ್ಬೇಕು—ಹಾಕ್ಬೇಕು ! ಅವಳ ಧಿಮಾಕು ನಿಲ್ಬೇಕಾದ್ರೆ ಅದಾಗ್ಲೇ ಬೇಕು ! (ಹಲ್ಲು ಕಿರಿಯುತ್ತಾನೆ)

ರಾಮುಪ್ಪ : ತನಿಯನಿಗೂ ಒಂದು ಭಾರ ತಪ್ಪಿದಂಗಾಗ್ತದೆ !

ನಾರಾಯಣಪ್ಪ : ತನಿಯನಿಗೆ ಮಾತ್ರ ಅಲ್ಲ—ಊರಿಗೇ ಭಾರ ತಪ್ಪಿದಂಗಾಗ್ತದೆ! ಅವಳು ದೊಡ್ಡ ಲೀಡರಾಗಿ ಬಿಟ್ಟಿದಾಳೆ! ಏನು ಶಾಸ್ತ್ರಿಗಳೆ? (ಶಾಸ್ತ್ರಿಯನ್ನು ತಿವಿಯುತ್ತಾನೆ)

ಶಾಸ್ತ್ರಿ : ಅದೆಲ್ಲ ಸರಿಹೋಗ್ತದೆ ಸ್ವಾಮಿ ! ಲಗಾಮು ಹಾಕಿದ್ರೇನೆ ದಾರಿಗೆ ಬರೋದು ! (ಹಲ್ಲು ಕಿರಿಯುತ್ತಾನೆ).

ರಾಮುಪ್ಪ : (ಲೆಕ್ಕದ ಪುಸ್ತಕದ ಹಾಳೆ ತಿರುವುತ್ತ) ಗಂಡು ಯಾರಂತೀಯಾ ?

ನಾರಾಯಣಪ್ಪ : ಯಾರ್ನ್ಯಾರಿಗೆ ಹುಡ್‌ಗೀ ಕೇಳೋದಿಕ್ಕೆ ಶಾಸ್ತ್ರಿಗಳು ಬರ್ತ್ತಾರೆಯೆ ? (ಶಾಸ್ತ್ರಿಯನ್ನು ತಿವಿದು) ಅವರ ಮಗನಿಗೋ ಅಳಿಯನಿಗೋ ಇರ್ಬೇಕು !

[ರಾಮುಪ್ಪ ಗಟ್ಟಿಯಾಗಿ ನಗುತ್ತಾನೆ. ಶಾಸ್ತ್ರಿ ಪೆಚ್ಚುಮೋರೆ ಮಾಡಿಕೊಂಡು ಹಲ್ಲುಕಿರಿಯುತ್ತಾನೆ.]

ರಾಮುಪ್ಪ : ಅದ್ಕೇ ಅನ್ನೋದು—ಹಿಂಗೆ ತಲೆ ಇಲ್ಲಾಂತ ! ಮಗನಿಗೂ ಅಲ್ಲ, ಅಳಿಯನಿಗೂ ಅಲ್ಲ—ಖುದ್ದು ಶಾಸ್ತ್ರಿಗಳಿಗೇನೆ ! ತಿಳೀತೆ ? [ನಗುತ್ತಾನೆ]

[ಶಾಸ್ತ್ರಿ ತಿರುಗಿ ಹಲ್ಲುಕಿರಿಯುತ್ತಾನೆ. ನಾರಾಯಣಪ್ಪ ಒಂದು ಬಗೆಯ ಆಶ್ಚರ್ಯ ಹಾಗು ಪರಿಹಾಸ್ಯ ದೃಷ್ಟಿಯಿಂದ ಶಾಸ್ತ್ರಿಯನ್ನೆ ನೋಡುತ್ತಾನೆ.]

ನಾರಾಯಣಪ್ಪ : ಭೇಷ್ ! ಭೇಷ್! ಜೋಡಿ ಹಂಗಾಗ್ಬೇಕು ! [ಶಾಸ್ತ್ರಿಯನ್ನು ತಿವಿದು] ಏನಂತೀರಾ—ಚೆಕ್ಕ ಹುಡುಗಿಯರಿಗೆ ಅನುಭವಸ್ಥ ಗಂಡಂದಿರೇ ಆಗ್ಬೇಕು !

ರಾಮುಪ್ಪ : ಶಾಸ್ತ್ರಿಗಳಂಥ ಗಂಡು ಬೊಳ್ಳಿಗೆ ಮತ್ತೆ ಎಲ್ಲಿ ಸಿಕ್ಕೀತು ? [ಶಾಸ್ತ್ರಿ ಹಲ್ಲು ಕಿರಿಯುತ್ತಾನೆ].

ನಾರಾಯಣಪ್ಪ : ಅಲ್ವೆ ಮತ್ತೆ! ದಿನಾ ಶೇವ್ ಮಾಡ್ಕೊಂಡ್ ಬಿಟ್ರೆ ಪ್ರಾಯಾನೂ ತಿಳಿಯಂಗಿಲ್ಲ ! (ಶಾಸ್ತ್ರಿಯನ್ನು ತಿವಿಯುತ್ತಾನೆ).

ರಾಮುಪ್ಪ : (ಶಾಸ್ತ್ರಿಯೊಡನೆ) ಅಲ್ಲ—ಶಾಸ್ತ್ರಿಗಳೆ ! ತನಿಯ ಏನಂತಾನೆ ?

ಶಾಸ್ತ್ರಿ : (ಪ್ರಸನ್ನತೆಯಿಂದ) ಒಪ್ಪಿಗೇನೆ !

ನಾರಾಯಣಪ್ಪ : ಹಂಗಾದ್ರೆ ಸರಿ ಮತ್ತೆ ! ಮದ್ವೆ ಆದಂಗೇನೆ !

ರಾಮುಪ್ಪ : "ಶುಭಸ್ಯ ಶೀಘ್ರಂ" ಅಂತಾರಲ್ಲಾ ? ಹಂಗೆ! ಬೇಗ ಒಂದು ದಿನ ಇಟ್ಕೊಂಬಿಡಿ—ಶಾಸ್ತ್ರಿಗಳೆ !

ಶಾಸ್ತ್ರಿ : [ಪೆಚ್ಚು ಮೋರೆ ಮಾಡಿಕೊಂಡು] ಆ—ಹುಡ್‌ಗಿ ಪಟ್ಟು ಹಿಡ್ಕೊಂಡ್‌ಬಿಟ್ಟದಂತಲ್ಲಾ—ಫಜೀತೀದ್ದು !

ನಾರಾಯಣಪ್ಪ : ಅವಳೇ ಜಾಣೆ ! ಈಗಿನ ಕಲ್ತ ಹುಡ್‌ಗಿಯರಂಗೆ ಗಂಡಿನ ವಯಸ್ಸೂ-ಬಣ್ಣ-ಸ್ಥಿತೀ-ಗೀತೀಂತೆಲ್ಲ ನೋಡ್ದೇನೆ, ಒಂದೇಟ್ಗೆ ಪಟ್ಟೇ ಹಿಡ್ಕೊಂಬಿಟ್ಲಲ್ಲಾ [ಶಾಸ್ತ್ರಿಯನ್ನು ತಿವಿದ] ಶಾಸ್ತ್ರಿಗಳೇ ಬೇಕೂಂತ !

ರಾಮುಪ್ಪ : ಹಂಗೇನು—ಶಾಸ್ತ್ರಿಗಳೆ ?

ಶಾಸ್ತ್ರಿ : [ಚಿಂತೆಯಿಂದ] ಹಂಗಾದ್ರೆ ಚೆನ್ನಾಗಿತ್ತು ಸ್ವಾಮಿ ! ಹುಡ್‌ಗಿ ಎಷ್ಟು ಹೇಳಿದ್ರೂ ಒಪ್ಪೋದಿಲ್ಲಾಂತೆ !

ನಾರಾಯಣಪ್ಪ : ಅದೇ ಪಂಚಾಯ್ತಿ ! ನಾನು ಮೊದ್ಲೇ ಹೇಳ್ಲಿಲ್ವೆ ? ಬೊಳ್ಳಿ ಇದ್ದಾಳಲ್ಲಾ—ಬಲೂ ಧಿಮಾಕಿನವಳೂಂತ !

ರಾಮುಪ್ಪ : ನೀನು ಹಂಗೂ ಹೇಳ್ತಿ, ಹಿಂಗೂ ಹೇಳ್ತಿ ! [ಶಾಸ್ತ್ರಿಗಳ ಕಡೆಗೆ ತಿರುಗಿ] ಯಾಕೆ ಒಪ್ಪೋದಿಲ್ಲಾಂತೆ ?

ಶಾಸ್ತ್ರಿ : ಅದೇನೋ ಸ್ವಾಮಿ ! ಮುಖ್ಯ—ಇದ್ಯೆಯಿಲ್ಲ ! ತಿಳಿಗೇಡಿ ನನ್ಮಕ್ಳು !

ರಾಮುಪ್ಪ : ಹುಡ್‌ಗೀ ಒಪ್ಪಿಗೆ ಯಾಕ್ಬೇಕ್ರಿ — ನಿಮ್ಗೆ. ತನಿಯ ಒಪ್ಕೋತಾನೆ ! ನಾನೂ ಸೈ ಅಂತೀನಿ ! ಅವಳ್ ಹಂಗೆ ಬೇಡಾಂತಾಳೆ—ಮತ್ತೆ !

ನಾರಾಯಣಪ್ಪ : ಕೋಳೀನ ಕೇಳಿ ಮಸಾಲೆ ಅರೀತಾರೆಯೇ—ಯಾರಾದ್ರೂನು ? [ಶಾಸ್ತ್ರಿಯನ್ನು ತಿವಿಯುತ್ತಾನೆ] ಏನಂತೀರಾ—ಅವಳನ್ನ ಕೇಳ್ಲೇ ಬೇಡಿ ! ಮದ್ವೆ ಮಾಡೇ ಬಿಡಾನ !

ಶಾಸ್ತ್ರಿ : ಖಾವಂದ್ರು ಮನಸ್ ಮಾಡಿದ್ರೆ ಆಗೇ ಆಗ್ತದೆ! [ಹಲ್ಲು ಕಿರಿಯುತ್ತಾನೆ]

ರಾಮುಪ್ಪ : ಅದ್ಕೆ ಏನಂತೆ ! ತನಿಯನ್ನ ಕರ್ಸಿಬಿಟ್ಟು ಹಿಂಗೆ ಆಗ್ಲೇ ಬೇಕೂಂತ ಹೇಳ್ ಬಿಟ್ರೆ ಆದಂಗೇನೆ ! ನನ್ ಮಾತೂ ಮೀರ್ತಾನಾ—ಆತ ?

ನಾರಾಯಣಪ್ಪ : ಸುಮ್ನೆ ಹಂಗೆ ಹೇಳಿದ್ರೆ ಸಾಲ್ದು ! ಕಣ್ ಕೆಂಪ್ ಮಾಡಿ, ನಾಲ್ಕು ಸಲ

(8ನೇ ಪುಟ ನೋಡಿ)

....ಮನೆ ಮುರಿದ ಮಗ....

(7ನೇ ಪುಟದಿಂದ)

ನೆಲ ತುಳ್ದು, [ತೋರುಬೆರಳು ಅಲುಗಾಡಿಸುತ್ತ] ಹಿಂಗ್ಮಾತಿ ಹೇಳ್ಬಿಟ್ರೆ— ಅಷ್ಟೆ ಮುಗೃನ್ನಲ್ಲ—ಸತ್ತ ಹೆಂಡ್ತೀನೇ ಬೇಕಾದ್ರು ತಂದ್ಕೊಟ್ಬ್ಯಾನು ತನಿಯು !

ಶಾಸ್ತ್ರಿ : ಅದು—ಸಾಲ್ದು ! ಮುದ್ಗೀನ್ನೇ ಕಟ್ಸಿ ಹೇಳ್ಬೇಕು—ಖಾವಂದ್ರು !

ರಾಮಪ್ಪ : ಅದೆಲ್ಲ ನಾನ್ ನೋಡ್ಕೊಂತೀನಿ ! ನಾನ್ ಹೇಳ್ದಂಗೆ ಮುದ್ವೆ ಆಗ್ದೆ ಎಲ್ಲಿ ಹೋಗ್ತಾಳೆ ನೋಡ್ತೀನಿ !

ಶಾಸ್ತ್ರಿ : ನಾನು ಈ ಕಡೆ ಬರೋದೇ ಕೆಲವರಿಗೆ ಹಿಡ್ಸೋಲ್ಲ—[illegible]ಮಿ ! ಅವನೊಬ್ಬನಿದ್ದಾನೆ—ಸೋ[illegible]ಪ್ಪಂತ—ಭಲೇ ಕಿಲಾಡಿ ಹುಡ್‌ಗ. ನನ್ನ ಕಂಡ್ರೆ ಲೇವಡಿ ಮಾಡ್ತಾನೆ !

ನಾರಾಯಣಪ್ಪ : ಸೋಂಪ, ತ್ಯಾಂಪ, ಲಿಂಗ್ಯ, ಸಿಂಗ್ಯ—ಎಲ್ಲ ನಂಗೆಬಿಟ್ಬಿಡಿ—ನಾನ್ ನೋಡ್ಕೊಂತೀನಿ ! ರಾಯರು ಹೂಂ ಅಂದ್ಬಿಟ್ರೆ ಸಾಕು ! ಆ ಪೋಲಿಗಳು ಕಣ್ಣಿಗೆ ಕಾಣ್ದಂಗೆ ಮಾಡ್‌ಬಿಟ್ಟೇನು !

ಶಾಸ್ತ್ರಿ : ಖಾವಂದ್ರು ಸ್ವಲ್ಪ...

ರಾಮಪ್ಪ : [ನಡುವೆ ತಡೆದು] ಆಗ್ಲಿ ಶಾಸ್ತ್ರಿಗಳೇ ! ಅದೆಲ್ಲ ನಾನ್ ಮಾಡ್ತೀನಿ! ಮತ್ತೇನಾಗ್ಬೇಕು ? ಹೇಳಿ.

ನಾರಾಯಣಪ್ಪ : ರಾಯರು ಇನ್ನೂ ಊಟ ಮಾಡಿಲ್ಲ ! ಊಟ ತೀರ್ಸಿ ತಿರ್‌ಗಾ ಕೆಲ್ಸದ ಕಡೆ ಹೋಗ್ಬೇಕು !

ಶಾಸ್ತ್ರಿ : ಅಷ್ಟೊಂದು ಉಪಕಾರ... [ಹಲ್ಲುಕಿರಿಯುತ್ತಾನೆ]

ರಾಮಪ್ಪ : ನೀವೂ ತುಂಬ ಕೆಲಸ ಇರುವವರು ; ಬೇರೇನೂ ಇಲ್ಲಾಂದ್ರೆ—ಹೊರಡ್‌ಬಹುದು! ಮುದ್ವೆ ವಿಚಾರ—ನಾನು ನೋಡ್ಕೋತಿನಿ ! [ಏಳುತ್ತಾನೆ]

ಶಾಸ್ತ್ರಿ : [ಎದ್ದು] ಹಾಗಾದ್ರೆ—ನನಗೆ ಅಪ್ಪಣೆ ಆಗಲಿ ! ನಮಸ್ಕಾರ [ಬಗ್ಗಿ ನಮಸ್ಕಾರ ಮಾಡುತ್ತಾನೆ]

ರಾಮಪ್ಪ : ಹಂಗೇ ಮಾಡಿ. ನಮಸ್ಕಾರ!

[ಶಾಸ್ತ್ರಿ ಮೆಲ್ಲಗೆ ಬ್ಯಾಗು ಕೈಯ್ಯಲ್ಲಿ ಹಿಡಿದುಕೊಂಡು ಹೋಗುತ್ತಾನೆ. ಎರಡು ಮೂರು ಹೆಜ್ಜೆ ಮುಂದಿಟ್ಟಾಗ, ಥಕ್ಕನೆ ಛತ್ರಿಯ ನೆನಪಾಗಿ, ಹಲ್ಲುಕಿರಿದು, ಹಿಂತಿರುಗಿ ಬಂದು, ಕೊಡೆಯನ್ನು ಕಂಕುಳಿಗೆ ಸೇರಿಸಿಕೊಳ್ಳುತ್ತಾನೆ.]

ಶಾಸ್ತ್ರಿ : ಹಂಗಾರೆ ನನಗೆ ಅಪ್ಪಣೆಯಾಗಲಿ! ಬರ್ತೀನಿ ! ನಮಸ್ಕಾರ! [ಹೋಗುತ್ತಾನೆ.]

ರಾಮಪ್ಪ : [ಶಾಸ್ತ್ರಿ ಹೋದ ದಿಕ್ಕಿಗೆ ನೋಡುತ್ತ ಒಂದು ನಿಮಿಷ ತಡೆದು, ಬರುತ್ತಾ ಮಾತನಾಡುತ್ತಿದ್ದ ವಿಷಯವನ್ನು ತಿರುಗಿ ಎತ್ತಿಕೊಳ್ಳುತ್ತಾನೆ] ಹಾಗಾದ್ರೆ ಬರ್ತಾ ಹೇಳಿದೆ ನಲ್ಲಾ—ಆ ಕೆಲ್ಸ ಕೂಡ್ಲೇ ಆಗ್ಬೇಕು !

ನಾರಾಯಣಪ್ಪ : ನಾಳೇನೆ ಮಾಡಿಬಿಡಾನ! ಅದ್ಕೇನಂತೆ !

ರಾಮಪ್ಪ : ಅಷ್ಟೊಂದು ಅವಸರ ಮಾಡ್‌ಬಾರ್ದು ಕಣೋ ! ಕಮಿಟಿ ತೀರ್ಮಾನಾಂತ ಮಾಡ್ಬೇಕು — ನಾವೇ ಮಾಡ್‌ಬಿಟ್ವೇಂತ ಅಂದ್ಕೋಬಾರ್ದಲ್ಲ—ಮಂದಿ !

ನಾರಾಯಣಪ್ಪ : ಕಮಿಟಿ ಮೀಟಿಂಗು ಈವತ್ತೆ ಕರ್ದ್‌ಬಿಡಾನ !

ರಾಮಪ್ಪ : ಅದ್ ಹೆಂಗಾಗ್ತದೋ-ಅಷ್ಟ್ ಬೇಗ ?

ನಾರಾಯಣಪ್ಪ : ನಾಳೆ ?

ರಾಮಪ್ಪ : ನಾ[illegible]ಪಿ ಡಬ್ಲ್ಯು ಇನ್ಸ್‌ಪೆಕ್ಟ್ರು ಬರ್ತಾರಂತೆ ! ಆ ಪೀಡೇನ ತಪ್ಪಿಸ್ಕೊಂಡು ಬರ್ಬೇಕಾದ್ರೆ ರಾತ್ರೆ ಆಗ್ತದೆ !

ನಾರಾಯಣಪ್ಪ : ನಾಡಿದ್ದು ?

ರಾಮಪ್ಪ : ಏಸೊ ? ಮರ್‍ತೋಗಿಬಿಟ್ತೆ ? ನಾಡಿದ್ದು ಮಂತ್ರಿಗಳು ಬರ್ತಾರಲ್ಲೋ ? ಅವರ ಸತ್ಕಾರ—ಸಮಾರಂಭಾಂತ ಇಡೀ ದಿನ ಹಾಳಾಗೋಗ್ತದೆ ! ಒಂದು ಹಾರಾನಾದ್ರೂ ಹಾಕ್ದಿದ್ರೆ—ಕಂಟ್ರಾಕ್ಟ್—ಗಿಂಟ್ರಾಕ್ಟೆಲ್ಲ ನಾಮಾನೇ !

(ಮುಂದುವರಿಯುವುದು)

ಕೊಡಗಿನ ಅಂಚೆ ಮತ್ತು ತಂತಿ ನೌಕರರಿಗೆ ಬೆಟ್ಟಪ್ರದೇಶದ ಭತ್ಯ ಸಿಗಬೇಕು

ಕೊಡಗಿನಲ್ಲಿ ಅಂಚೆ ಮತ್ತು ತಂತೀ ಇಲಾಖೆ ನೌಕರರಿಗೆ 1937ರ ವರೆವಿಗೆ "ಬೆಟ್ಟ ಪ್ರದೇಶದ ಪರಿಹಾರ ಭತ್ಯ"ವನ್ನು ಕೊಡಲಾಗುತ್ತಿತ್ತು. 1937ರಲ್ಲಿ ಇದನ್ನು ನಿಲ್ಲಿಸಲಾಗಿದೆ. ಭೌಗೋಳಿಕ ಶಾಸ್ತ್ರದ ಲಕ್ಷಣಗಳಿಂದಲೂ, ವಾಯುಗುಣದ ದೃಷ್ಟಿಯಿಂದಲೂ, ಮತ್ತು ಜೀವನವೆಚ್ಚದ ಹೆಚ್ಚಳವೂ ಈ ಬೇಡಿಕೆಗೆ ಯೋಗ್ಯ ಕಾರಣಗಳಾಗಿವೆ. ವಾಸ್ತವವಾಗಿ, ಕೊಡಗು ಬೆಟ್ಟಗುಡ್ಡಗಳ ಪ್ರದೇಶವಾಗಿದೆ. ಕೊಡಗಿನಲ್ಲಿ ಸುಮಾರು ಆರು ತಿಂಗಳು ಮಳೆ ಬೀಳುತ್ತದೆ. ಹೆಚ್ಚು ಕಡಿಮೆ ವರ್ಷಪೂರ್ತಿ ಚಳಿ ಇರುತ್ತದೆ. ಜನಜೀವನಕ್ಕೆ ಬೇಕಾದ ಹೆಚ್ಚಿನ ಪದಾರ್ಥಗಳೆಲ್ಲಾ ಹೊರಗಿನಿಂದ ಬರಬೇಕು. ಆದ ಕಾರಣ ಪದಾರ್ಥಗಳ ಬೆಲೆಯು ಸುತ್ತಮುತ್ತಲಿನ ಪ್ರದೇಶಗಳಿಗಿಂತ ಹೆಚ್ಚಾಗಿರುತ್ತದೆ. ಕೊಡಗು ಹೆಚ್ಚಿನ ಕಾಫಿ ಎಸ್ಟೇಟ್‌ಗಳಿಂದ ಕೂಡಿದೆ. ಬೆಚ್ಚಗಿರುವ ಉಡುಪು ಮತ್ತು ಇಲ್ಲಿಯ ಹವಾಮಾನಕ್ಕೆ ಅವಶ್ಯಕವಾದ ಸಾಮಾಗ್ರಿಗಳು ಇಲ್ಲಿ ಕೆಲಸ ಮಾಡುವ ನೌಕರರಿಗೆ ಅತ್ಯಾವಶ್ಯಕವಾಗಿರುತ್ತದೆ. ಈ ಕಾರಣಗಳಿಂದ ಇಲ್ಲಿಯ ಜನಜೀವನ ವೆಚ್ಚವು ಸುತ್ತಮುತ್ತಲಿನ ಪ್ರದೇಶಗಳಿಂದ ಶೇ. 50ರಷ್ಟು ಹೆಚ್ಚಾಗಿದೆ.

ಸರಕಾರದ ಔದಾಸೀನತೆ ಖಂಡನೀಯ

ಅಂಚೆ ಮತ್ತು ತಂತೀ ನೌಕರರು ಈ ಹೆಚ್ಚಿನ ವೆಚ್ಚವನ್ನು ಸರಿದೂಗಿಸಲು "ಬೆಟ್ಟ ಪ್ರದೇಶದ ಭತ್ಯ"ವನ್ನು ಕೊಡಬೇಕೆಂಬ ಬೇಡಿಕೆಯನ್ನು ಈಡೇರಿಸುವಂತೆ ಒತ್ತಾಯ ಮಾಡುತ್ತಲೇ ಇದ್ದಾರೆ. ಈ ಬೇಡಿಕೆಯನ್ನು ಸಕಾರಣಗಳಿಂದ ಸಮರ್ಥಿಸಿದಾಗ್ಯೂ ಕೂಡ ಇಲಾಖಾ ಅಧಿಕಾರಿಗಳು ಅಲಕ್ಷ್ಯದಿಂದ ಇರುತ್ತಾರೆ. ನೌಕರರು ಆರ್ಥಿಕ ದುರವಸ್ಥೆಯನ್ನು ಸಹಿಸಲಾರದವರಾಗಿದ್ದಾರೆ. ಇಂಥಾ ಒಂದು ಪರಿಸ್ಥಿತಿಯಲ್ಲಿ ಕೊಡಗು ಸರ್ಕಾರದ ಮಾಜಿ ಮಂತ್ರಿಗಳೂ ಈಗ ಶಾಸನ ಸಭಾ ಸದಸ್ಯರಾದ ಶ್ರೀಮಾನ್ ಕೆ. ಮಲ್ಲಪ್ಪನವರ ಅಧ್ಯಕ್ಷತೆಯಲ್ಲಿ ಕೇಂದ್ರ ಸರ್ಕಾರದ ನೌಕರರ ಸಮ್ಮೇಳನವು 1957ನೇ ವೇ 19ನೇ ತಾರೀಕು ನಡೆಯಿತು. ಅಧ್ಯಕ್ಷರು ಕೊಡಗಿನಲ್ಲಿರುವ ಕೇಂದ್ರ ಸರ್ಕಾರದ ನೌಕರರಿಗೆ ಈ ಭತ್ಯವು ನ್ಯಾಯವಾಗಿ ಸಲ್ಲಬೇಕೆಂದು ಮತ್ತು ಕೇಂದ್ರ ಸರ್ಕಾರವು ಉದಾಸೀನತೆಯಿಂದಿರಲು ಸಾಧ್ಯವಿಲ್ಲವೆಂದು ತಿಳಿಸಿದರು. ಈ ಬೇಡಿಕೆಗೆ ತನ್ನ ಬೆಂಬಲವಿದೆಯೆಂದೂ ಹೇಳಿದರು. ಕೇಂದ್ರ ಸರ್ಕಾರದ ನೌಕರರ ಸಮ್ಮೇಳನದಲ್ಲಿ ಅಂಗೀಕೃತವಾದ ಇದಕ್ಕೆ ಸಂಬಂಧಿಸಿದ ಠರಾವುಗಳನ್ನು ಇಲಾಖಾಧಿಕಾರಿಗಳಿಗೂ ಮತ್ತು ಸಂಪರ್ಕ ಶಾಖಾ ಸಚಿವರಿಗೂ ಕಳುಹಿಸಿ ಕೊಡಲಾಗಿದೆ.

ಲೋಕಸಭಾ ಸದಸ್ಯರಾದ ಶ್ರೀಮಾನ್ ಕೆ. ಆರ್. ಆಚಾರ್‌ರವರಿಗೆ ಸಮ್ಮೇಳನದ ಕಾರ್ಯಕ್ರಮಗಳ ವಿವರಗಳನ್ನು ತಿಳಿಸಿ ಲೋಕಸಭೆಯಲ್ಲಿ ಈ ವಿಷಯವನ್ನು ಚರ್ಚಿಸಬೇಕೆಂದು ಕೋರಲಾಗಿದೆ. ಅವರು ಈ ವಿಷಯದಲ್ಲಿ ತಮ್ಮ ಹೃತ್ಪೂರ್ವಕ ಬೆಂಬಲ ನೀಡುವುದಾಗಿ ಆಶ್ವಾಸನೆ ಕೊಟ್ಟಿರುತ್ತಾರೆ !

ನೌಕರರ ತಾಳ್ಮೆ ಕೆಡುತ್ತಿದೆ

ಏತನ್ಮಧ್ಯೆ ಕೊಡಗಿನಲ್ಲಿರುವ ಅಂಚೆ ಮತ್ತು ತಂತೀ ಇಲಾಖೆಯ ನೌಕರರೆಲ್ಲರೂ ರಾಷ್ಟ್ರಾಧ್ಯಕ್ಷರಿಗೂ. ಮತ್ತು ಸಂಪರ್ಕ ಶಾಖಾ ಸಚಿವರಿಗೂ ವೈಯುಕ್ತಿಕ ಮನವಿಗಳನ್ನು ಕಳುಹಿಸಿರುತ್ತಾರೆ. ಇದರಿಂದ ಈ ಸಂಘದ ಸದಸ್ಯರೆಲ್ಲರೂ ಶಾಸನ ಬದ್ಧವಾದ ಎಲ್ಲಾ ಕ್ರಮಗಳನ್ನು ಅನುಸರಿಸುತ್ತಾರೆಂಬುದು ವ್ಯಕ್ತವಾಗುತ್ತದೆ. ಯಾವ ಗಣ್ಯ ನಾಯಕರೂ ಸಹ, ಶಾಸನಬದ್ಧವಾದ ಮಾರ್ಗದಿಂದ ದೂರಸರಿದಿದ್ದೇವೆಂದು ಆರೋಪಿಸಲು ಅವಕಾಶವಿಲ್ಲ. ಕಾರ್ಮಿಕ ವರ್ಗವು ತನ್ನ ಸಮಸ್ಯೆಗಳನ್ನು ಶಾಸನಬದ್ಧ ಮಾರ್ಗಗಳಿಂದಲೇ ಪರಿಹರಿಸಿಕೊಳ್ಳಬೇಕೆಂದು ಹೇಳುವ ನಮ್ಮ ನಾಯಕರ ಆದೇಶವು ನಿಜವೇ ಆದಲ್ಲಿ ಅದನ್ನು ಕಾರ್ಯರೂಪಕ್ಕೆ ತಂದು ಅದರಲ್ಲಿ ದೃಢ ನಂಬಿಕೆಯನ್ನು ಸ್ಥಿರಪಡಿಸಲು ಇದೊಂದು ಸುಸಂದರ್ಭವಾಗಿದೆ. ಈ ಬೇಡಿಕೆಯನ್ನು ನಮ್ಮ ಪ್ರಜಾ ಸರ್ಕಾರವು ಅಂಗೀಕರಿಸಿ, ನೌಕರರಿಗೆ ಸೂಕ್ತ ಆರ್ಥಿಕ ನೆರವು ನೀಡದಿದ್ದಲ್ಲಿ ಇಲ್ಲಿಯೂ ಸಹ ಅಸ್ಸಾಂ ಪ್ರಾಂತದಲ್ಲಿ ಉಂಟಾದ ಪ್ರಕರಣ ಸ್ವರೂಪ ಕಂಡುಬರಬಹುದು.

ಆದ್ದರಿಂದ ಸಾರ್ವಜನಿಕರು, ಪ್ರಜಾಪ್ರಭುತ್ವ ಸಂಸ್ಥೆಯವರೂ, ಲೋಕಸಭಾ ಸದಸ್ಯರೂ, ಪತ್ರಿಕೆಯವರೂ ಮತ್ತು ಎಲ್ಲಾ ಕಾರ್ಮಿಕ ಸಂಘಗಳೂ, ಕೇಂದ್ರ ಸರ್ಕಾರವು ನಮ್ಮ ಬೇಡಿಕೆಗಳನ್ನು ಈಡೇರಿಸುವಂತೆ ಪ್ರಭಾವ ಬೀರಬೇಕೆಂದು ಈ ಮೂಲಕ ಕೋರಲಾಗಿದೆ.

ಅಖಿಲ ಭಾರತ ಅಂಚೆ ಮತ್ತು ತಂತಿ ಇಲಾಖೆಯ ಮೂರನೆ ವರ್ಗದ ನೌಕರರ ಸಂಘದ ಕೊಡಗು ಶಾಖೆಯ ಅಧ್ಯಕ್ಷರಾದ ಶ್ರೀಮಾನ್ ಏ ಎಸ್. ಬೆಳ್ಯಪ್ಪನವರು ಈ ಮೇಲಿನ ಹೇಳಿಕೆಯನ್ನು ಪತ್ರಿಕೆಗಳಿಗೆ ಕೊಟ್ಟಿರುತ್ತಾರೆ

ಇದೀಗ ಅಂಚೆ ಮತ್ತು ತಂತಿ ನೌಕರರ ಕೇಳಿಕೆಗಳ ಬಗ್ಗೆ ಸಮಿತಿಯೊಂದು ಈಗಾಗಲೇ ರಚನೆಯಾಗಿದೆ. ಈ ಸಮಿತಿಯು ಬೆಟ್ಟ ಪ್ರದೇಶಗಳಲ್ಲಿರುವ ಅಂಚೆ ಮತ್ತು ತಂತಿ ನೌಕರರ ವಿಶಿಷ್ಟ ಪರಿಸ್ಥಿತಿಗಳನ್ನು ಮನಗಂಡು, ಯೋಗ್ಯವಾದ ಸಲಹೆಗಳನ್ನು ತನ್ನ ವರದಿಯಲ್ಲಿ ಈಯುವುದು ಸೂಕ್ತ. ಸರಕಾರ ಕೂಡ 'ಬೆಟ್ಟ ಪ್ರದೇಶದ ಭತ್ಯ'ವನ್ನು ಹಿಂದೊಮ್ಮೆ ಕೊಟ್ಟಿದೆ. ಈಗ ಜೀವನ ವೆಚ್ಚವು ಅತ್ಯಂತ ಹೆಚ್ಚಿರುವಾಗ ಅದರಲ್ಲೂ ಸುತ್ತಮುತ್ತಲ ಪ್ರದೇಶಗಳಿಂದ ಬರುವ ಸರಬರಾಜನ್ನು ಹೊಂದಿಕೊಂಡಿರುವ, ಕೊಡಗಿನಂಥ ಬೆಟ್ಟ ಪ್ರದೇಶದಲ್ಲಿ ಅಂಚೆ ಮತ್ತು ತಂತಿ ನೌಕರರಿಗೆ ಈ ಒಂದು ಸೌಲಭ್ಯವನ್ನು ಕೊಡುವುದರಲ್ಲಿ ಸರಕಾರ ಹಿಂದೆ ಮುಂದೆ ನೋಡುವುದು ಸೂಕ್ತವಲ್ಲ. ಅಲ್ಲದೆ ಪರಿಸ್ಥಿತಿ ಕೆಟ್ಟ ಮೇಲೆ "ನೌಕರರಿಗೆ ಮುಷ್ಕರ ಮಾಡುವುದು ತಪ್ಪು" ಎಂದು ಹೇಳುವುದು ನ್ಯಾಯವೂ ಅಲ್ಲ.

ಎಲಿಮೆಂಟರಿ ಶಿಕ್ಷಣದ ವಿಸ್ತರೀಕರಣಕ್ಕಾಗಿ ಸಮಿತಿ !

ನಮ್ಮ ದೇಶದಲ್ಲಿ 10 ವರುಷದ ಅವಧಿಯಲ್ಲಿ 14ನೇ ವರುಷ ಮೀರದ ಎಲ್ಲಾ ಮಕ್ಕಳಿಗೆ ಧರ್ಮಾರ್ಥ ಹಾಗೂ ಕಡ್ಡಾಯ ಶಿಕ್ಷಣ ಕೊಡಲು ಸರ್ಕಾರವು ಪ್ರಯತ್ನಿಸುವುದೆಂದು ನಮ್ಮ ಘಟನೆಯ ಆರ್ಟಿಕಲ್ 45ರಲ್ಲಿ ಹೇಳಲಾಗಿದೆ.

ಈಗ ಹತ್ತು ವರುಷಗಳು ಕಳೆದರೂ ಘಟನೆಯಲ್ಲಿ ನೀಡಲಾದ ಈ ಒಂದು ಶಿಕ್ಷಣ ಸೌಲಭ್ಯ ನಮ್ಮ ದೇಶದ ಮಕ್ಕಳಿಗೆ ದೊರೆಯಲಿಲ್ಲ 'ಇಂದಿನ ಮಕ್ಕಳೇ ಮುಂದಿನ ಜನಾಂಗ'ವೆಂಬ ನಾಣ್ಣುಡಿಯೇನೆ ಇರಲಿ, ಆದರೆ ಅದರ ಪ್ರಾಮುಖ್ಯತೆ ಈಗ ತಾನೇ ಕೇಂದ್ರ ಸರಕಾರಕ್ಕೆ ಹೊಳೆದಂತೆ ಕಾಣುತ್ತಿದೆ ಅಂತೂ 10 ವರ್ಷದ ನಂತರವಾದರೂ ಘಟನೆಯಲ್ಲೀಯಲಾದ ಈ ಒಂದು ಶಿಕ್ಷಣ ಸೌಲಭ್ಯವನ್ನು ಜನತೆಗೆ ನೀಡಲು ಸರಕಾರ ಮುಂದೆ ಬಂದಂತಿದೆ.

ಎಲಿಮೆಂಟರಿ ಶಿಕ್ಷಣದ ವಿಸ್ತರೀಕರಣಕ್ಕಾಗಿ 21 ಜನರನ್ನೊಳಗೊಂಡ ಅಖಿಲ ಭಾರತ ಸಮಿತಿಯೊಂದನ್ನು ರಚಿಸಲಾಗಿದೆ. ಎಲಿಮೆಂಟರಿ ಶಿಕ್ಷಣದ ಸರ್ವತೋಮುಖವಾದ ಪ್ರಗತಿಯ ಬಗ್ಗೆ ಸಂಬಂಧಪಟ್ಟ ಎಲ್ಲಾ ವಿಷಯಗಳಲ್ಲೂ ಈ ಸಮಿತಿಯು ಕೇಂದ್ರ, ರಾಜ್ಯ ಸರ್ಕಾರಗಳಿಗೂ ಮತ್ತು ಸ್ಥಳೀಯ ಸಂಸ್ಥೆಗಳಿಗೂ ಸಲಹೆ ನೀಡುವುದು.

ಕೇಂದ್ರ ಸರಕಾರದ ಈ ಹೆಜ್ಜೆ ಸ್ವಾಗತಾರ್ಹ. ಇದರಿಂದಲಾದರೂ ರಾಜ್ಯಗಳಲ್ಲಿ ಎಲಿಮೆಂಟರಿ ಶಿಕ್ಷಣದ ಬಗ್ಗೆ ಸರ್ಕಾರ ತಳೆದಿರುವ ಔದಾಸೀನ್ಯ ಮಾಯವಾದೀತು. ಆದರೆ, ಈಗಾಗಲೇ 14ವರ್ಷದೊಳಗಿನ ಎಲ್ಲಾ ಮಕ್ಕಳಿಗೂ ವಿದ್ಯೆಯನ್ನು ಧರ್ಮಾರ್ಥವಾಗಿಯೇ ಕೊಡಲು ಕೇರಳ ಸರ್ಕಾರ ಮುಂಬಂದಿದೆ; ಶಿಕ್ಷಣ ಕ್ಷೇತ್ರದಲ್ಲಿ ಸಮಗ್ರ ಸುಧಾರಣೆಯನ್ನು ತರಲು ಕೇರಳ ಸರ್ಕಾರ ತಂದ ವಿದ್ಯಾ ಮಸೂದೆಯನ್ನು ರಾಷ್ಟ್ರಾಧ್ಯಕ್ಷರು 6 ತಿಂಗಳು ಕಾಲ ಅನುಮತಿಯೀಯದೆ ಈಗ ಸುಪ್ರೀಂ ಕೋರ್ಟಿಗೆ ಒಪ್ಪಿಸಿರುವುದನ್ನು ನಾವಿಲ್ಲಿ ಗಮನಿಸಬೇಕಾಗುತ್ತದೆ. ಇದರಿಂದಾಗಿ ಕೇಂದ್ರ ಸರಕಾರ ನಿಜವಾಗಿಯೂ ವಿದ್ಯಾ ಸುಧಾರಣೆಯನ್ನು ಬಯಸುತ್ತಿದೆಯೇ ಎಂದು ಸಂಶಯ ಬರುತ್ತದೆ! ಏನೇ ಇರಲಿ ಕೇರಳದ ವಿದ್ಯಾಮಸೂದೆಯೇ ಕೇಂದ್ರದ ಈ ಹೆಜ್ಜೆಗೆ ಪರೋಕ್ಷ ಕಾರಣವಾಗಿರಬಹುದೆಂದು ನಾವು ಭಾವಿಸಿದರೆ ತಪ್ಪಾಗದಷ್ಟೆ !

ಕಾಂಗ್ರೆಸ್ ಸುದ್ದಿ ಸಂಗ್ರಹ

ಪೊನ್ನಂಪೇಟೆಯಲ್ಲಿ ಕಮ್ಯೂನಿಸ್ಟ್ ಕಾರ್ಯಕರ್ತರ ಕಗ್ಗೊಲೆ

ಕೊಡಗಿನ ಪೊನ್ನಂ ಪೇಟೆ ಪಾರ್ಟಿ ಶಾಖೆಯ ಕಾರ್ಯದರ್ಶಿಯಾಗಿದ್ದ ಕಾಮ್ರೇಡ್ ಪುತ್ತಾಮನೆ ನರೇಂದ್ರರು ತಾ. 5ನೇ ಆದಿತ್ಯವಾರ ಸಾಯಂಕಾಲ ಕೊಲೆ ಮಾಡಲ್ಪಟ್ಟರೆಂಬುದನ್ನು ಸಹಿಸಲಾರದ ದುಃಖದಿಂದ ವರದಿ ಮಾಡುತ್ತಿರುವೆವು. ನರೇಂದ್ರರಿಗೆ ಕಳೆದ ಮಹಾಚುನಾವಣೆ ಕಾಲದಲ್ಲಿ ಪಾರ್ಟಿಯ ಸಂಬಂಧ ಬೆಳೆದು, ಅವರು ಪಾರ್ಟಿ ಸದಸ್ಯರಾಗಿ ಸೇರಿದರು. ಇವರು ಅಲ್ಪ ಸಮಯದಲ್ಲಿಯೇ ಪೊನ್ನಂ ಪೇಟೆ ಭಾಗದ ಸಾಮಾನ್ಯ ಜನತೆಯ ಆದರ ವಿಶ್ವಾಸವನ್ನು ಪಡೆದು, ಪಾರ್ಟಿ ಶಾಖೆಯನ್ನು ಸ್ಥಾಪಿಸಿ, ಅದರ ಕಾರ್ಯದರ್ಶಿಯಾಗಿ ದುಡಿಯುತ್ತಿದ್ದರು. ಇವರು ಪಾರ್ಟಿಗೆ ಸೇರಿ ದುಡಿಯುತ್ತಿದ್ದುದು ಅನೇಕ ಪ್ರಮುಖರೆಂದೆನಿಸಿಕೊಂಡಿರುವವರಿಗೆ ಸಮಾಧಾನವಾಗಲಿಲ್ಲವೆಂಬುದು ಸತ್ಯ ಸಂಗತಿ.

ಕಾ। ನರೇಂದ್ರ ಮತ್ತು ಅವರ ಸಹೋದರ ಗಣೇಶ ಕೂಡ ದಾರಿಯಲ್ಲಿ ಹೋಗುತ್ತಿದ್ದಾಗ, ಕೆಲವರು ಸೇರಿ ಅವರಿಬ್ಬರನ್ನೂ ಹೊಡೆದು, ತಿವಿದು, ತಲೆ ಜಜ್ಜಿ ತೀವ್ರ ಜಖಂಗೊಳಿಸಿದರೆಂದೂ, ಅವರನ್ನು ವಿರಾಜ್‌ಪೇಟೆ ಆಸ್ಪತ್ರೆಗೆ ಸೇರಿಸಲಾಗಿ ಕಾ। ನರೇಂದ್ರರು ತೀರಿಕೊಂಡರೆಂದೂ, ಗಣೇಶ ಗುಣಮುಖವಾಗುತ್ತಿರುವರೆಂದೂ ತಿಳಿದು ಬರುತ್ತದೆ. ಈ ಭೀಕರ ಕಗ್ಗೊಲೆಗೆ ಕುಟುಂಬ ಸಂಬಂಧವಾದ ಅಲ್ಪಸ್ವಲ್ಪದ ಕಲಹ ಕಾರಣವೆಂದು ವದಂತಿಯಿದೆ.

ತಮ್ಮ ಪ್ರೀತಿಯ ನರೇಂದ್ರರು ಕೊಲೆಯಾಗಿ ಹೋದರೆಂಬ ವಾರ್ತೆಯು ಪೊನ್ನಂಪೇಟೆ ಭಾಗದ ಜನತೆಗೆ ಸಿಡಿಲು ಬಡಿದಂತಾಯಿತು ಇವರ ಕೊಲೆಗಾಗಿ ಈ ಭಾಗದಲ್ಲಿ ಕಣ್ಣೀರಿಡದ ಬಡ ಕುಟುಂಬವಿಲ್ಲ. ಮಾರಣೇ ದಿನ ಅಂದರೆ ತಾ. 6ನೇ ಸೋಮವಾರ ಪೊನ್ನಂಪೇಟೆಯಲ್ಲಿ ದುಃಖ ಸೂಚಕವಾಗಿ ಅಂಗಡಿಗಳು ಮುಚ್ಚಿ ಹರತಾಳವನ್ನು ಆಚರಿಸಲಾಯಿತು. ಅನೇಕರು. ದುಃಖ ಸೂಚಕ ಕಪ್ಪು ಚಿಹ್ನೆಯನ್ನು ತಮ್ಮ ಅಂಗಿಯಲ್ಲಿ ಧರಿಸಿದ್ದರಲ್ಲದೆ ನೂರಾರು ಕಪ್ಪು ಬಾವುಟವನ್ನು ಕೈಯಲ್ಲಿ ಹಿಡಿದಿದ್ದರು. ನರೇಂದ್ರರ ಕಳೇಬರವು ಪೊನ್ನಂಪೇಟೆಗೆ ತಲುಪಿದ ಸಾಯಂಕಾಲ ನಾಲ್ಕು ಘಂಟೆ ವೇಳೆಗೆ ಅವರ ಅಂತ್ಯ ದರ್ಶನಕ್ಕಾಗಿ ಸುಮಾರು ಎರಡು ಮೂರು ಸಾವಿರ ಜನರು ನೆರೆದಿದ್ದರು. ಆಂಬ್ಯುಲೆನ್ಸ್ ವ್ಯಾನಿನಲ್ಲಿ ತರಲಾದ ಕಳೇಬರವನ್ನು ರಸ್ತೆಯ ಎರಡು ಪಕ್ಕದಲ್ಲಿಯೂ ಜನರು ಶಿಸ್ತಿನಿಂದ ಕಿಕ್ಕಿರಿದು ನಿಂತು ವೀಕ್ಷಿಸಿ ತಮ್ಮ ಕೊನೆಯ ಗೌರವವನ್ನು ಮೃತರಿಗೆ ಸಲ್ಲಿಸಿದರು.

ಸುಮಾರು ಸಾಯಂಕಾಲ 6 ಘಂಟೆಗೆ ಅವರ ಕುಟುಂಬದವರಿಂದ ಸ್ಮಶಾನದಲ್ಲಿ ದೇಹದ ಅಂತ್ಯಕ್ರಿಯೆ ನಡೆಸಲ್ಪಟ್ಟಿತು. ಸಂಜೆ ಹೊತ್ತಿಗೆ ಪಾರ್ಟಿಯ ಆಶ್ರಯದಲ್ಲಿ ಪೊನ್ನಂಪೇಟೆಯಲ್ಲಿ ದುಃಖಸೂಚಕ ಸಾರ್ವಜನಿಕ ಸಭೆ ಜರುಗಿ, ಕಾಮ್ರೇಡ್ ಮೊಣ್ಣಯ್ಯನವರೂ ಇತರರೂ ಮಾತಾಡಿ ಕೊಲೆಗೆ ಸಂಬಂಧಿಸಿದವರನ್ನೆಲ್ಲಾ ಪತ್ತೆಹಚ್ಚಿ ದಂಡನೆಗೆ ಗುರಿಪಡಿಸುವ ಕಾರ್ಯದಲ್ಲಿ ಪೋಲೀಸರಿಗೆ ಜನತೆ ನೆರವಾಗಬೇಕೆಂಬುದಾಗಿ ವಿನಂತಿಸಿಕೊಂಡರಲ್ಲದೆ, ಮೃತರ ಕುಟುಂಬಕ್ಕಾದ ದುಃಖದಲ್ಲಿ ಸಹಭಾಗಿಗಳಾಗಿರುವುದನ್ನು ತಿಳಿಸಿ ಮಾತಾಡಿದರು.

ನರೇಂದ್ರರು ಅವರಹಿಂದೆ ಅವರ ವಿಧವಾ ಹೆಂಡತಿಯನ್ನು ಮೂರು ವರ್ಷದ ಮತ್ತು ಎರಡು ತಿಂಗಳು ಪ್ರಾಯದ ಎರಡು ಗಂಡು ಮಕ್ಕಳನ್ನೂ, ವಿಧವಾ ತಾಯಿ, ಇಬ್ಬರು ಸೋದರಿಯರು ಮತ್ತು ಸಹೋದರ ಗಣೇಶರು ಇರುವರು. ನರೇಂದ್ರರ ತಂದೆ ಮುತ್ತಣ್ಣಮ್ಮಯ್ಯನವರು ನಿಧನರಾದ ಮೂರು ತಿಂಗಳೊಳಗೆ ಇವರ ಕೊಲೆಯಾಗಿದೆ.

ನರೇಂದ್ರರು ಯಾವ ತತ್ವದ ಮಾರ್ಗದರ್ಶನದಿಂದ ಯಾವ ಆದರ್ಶಕ್ಕಾಗಿ ಜನತೆಯ ಮಧ್ಯದಲ್ಲಿ ದುಡಿಯಲು ಮುಂದೆ ಬಂದು ಅಲ್ಪ ಕಾಲದಲ್ಲಿಯೇ ಜನತೆಯ ಪ್ರೀತಿ ವಿಶ್ವಾಸವನ್ನು ಗಳಿಸಿದ್ದರೋ ಆ ಆದರ್ಶವನ್ನು ಈಡೇರಿಸಲು ಪಣತೊಟ್ಟು ಪಾರ್ಟಿಯು ನರೇಂದ್ರರಿಗೆ ತನ್ನ ಕೊನೆಯ ಗೌರವವನ್ನು ಸಲ್ಲಿಸುತ್ತದೆ.

ಈ ಜನಪ್ರಿಯ ಕಮ್ಯೂನಿಸ್ಟ್ ಕಾರ್ಯಕರ್ತರ ನಿಧನಕ್ಕಾಗಿ 'ಜನಶಕ್ತಿ' ಸಂತಾಪ ವ್ಯಕ್ತಪಡಿಸುವುದೇ ಅಲ್ಲದೆ, ಅರೆಕ್ಷಣವು ವಿಳಂಬವಾಗದೆ, ಈ ನೀಚ ಕೊಲೆಗಡುಕರನ್ನು ಪೋಲೀಸರು ಕಂಡು ಹಿಡಿದು ತಕ್ಕ ಶಾಸ್ತಿ ಮಾಡಬೇಕೆಂದೂ; ಈಗೀಗ್ಗೆ ಕೊಡಗಿನಲ್ಲಿ ಅರಾಜಕತೆ ಎಂಬುದು ಮಿತಿ ಮೀರಿ ಹೆಚ್ಚಾಗಿರುವುದನ್ನು ಪೋಲಿಸ್ ಸಚಿವ ಪೂಣಚ್ಚರು ಗಮನಿಸಿ, ಇನ್ನಾದರೂ ನಿದ್ದೆಯಿಂದ ಎಚ್ಚೆತ್ತು ನಾಗರಿಕ ಜೀವನದಲ್ಲಿ ಕಾನೂನಾತಿಕ್ರಮ, ಶಾಂತಿಭಂಗ ಉಂಟಾಗದಂತೆ ನೋಡಿಕೊಳ್ಳಲೆಂದು ಒತ್ತಾಯಪೂರ್ವಕವಾಗಿ ಕೇಳಿಕೊಳ್ಳುತ್ತದೆ.

ಓದುಗರ ಓಲೆ

ಪಿಸ್ತೂಲು ಹಿಡಿದು ತಿರುಗುವ ಕಾಂಗ್ರೆಸ್ ಪುಢಾರಿ

ಶನಿವಾರಸಂತೆ ಹೋಬಳಿ ಸಿದ್ದಗ್ರಾಮದಲ್ಲಿ ಓರ್ವ ಕಾಂಗ್ರೆಸ್ ಪುಢಾರಿಯ ದುರ್ವರ್ತನೆ ಅಸಹನೀಯವಾಗಿದೆ. ಈ ಪುಢಾರಿ ಎಸ್. ಕೆ. ಮೂರ್ತಿಗೆ, ಒಂದು 5 ತೋಟದ ಪಿಸ್ತೂಲು ಇದೆಯಂತೆ. ಈ ಪಿಸ್ತೂಲನ್ನು ಆಗಾಗ್ಗೆ ಜನರಿಗೆ ತೋರಿ ಹೆದರಿಸುವ ಮಟ್ಟಕ್ಕೆ ಬಂದಿದ್ದಾರೆ ಇವರು. ಅಲ್ಲದೆ ಈಗ್ಗೆ ಕೆಲವು ದಿನಗಳ ಹಿಂದೆ "ಜನಶಕ್ತಿ" ಏಜೆಂಟರಾದ ಕೆ. ಲಿಂಗಪ್ಪನವರಿಗೆ ಎಸ್. ಕೆ. ಮೂರ್ತಿಯವರು ಕೊಡಬೇಕಾದ ಹಣ ಕೇಳಿದ್ದಕ್ಕೆ ಈ ಮೂರ್ತಿಯವರು ಪಿಸ್ತೂಲು ತೋರಿಸಿ 'ನೀನು ಹಣ ತೆಗೆದುಕೊಳ್ಳುವುದನ್ನು ನೋಡುತ್ತೇನೆ, ನಿನ್ನ ಕಮ್ಯೂನಿಸ್ಟ್ ಪಾರ್ಟಿಯೇ ಬಂದರೆ ನೋಡುತ್ತೇನೆ' ಎಂದು ಹೇಳಿರುವರು. ಈ ಪುಢಾರಿಯ ವರ್ತನೆ ನಾಗರಿಕರಿಗೆ ಆತಂಕ ಒಡ್ಡುವುದಾಗಿದೆ ಸಂಬಂಧಪಟ್ಟವರು ಈ ಪಿಸ್ತೂಲಿನ ಲೈಸನ್ಸನ್ನು ಕೂಡಲೇ ರದ್ದುಪಡಿಸಬೇಕು. ಇಲ್ಲದಿದ್ದಲ್ಲಿ ಅನಾಹುತವಾಗುವುದು ಖಂಡಿತ. ಆದುದರಿಂದ ಕೂಡಲೇ ಸಂಬಂಧಪಟ್ಟ ಅಧಿಕಾರಿಗಳು ನಿಗಾ ವಹಿಸಿ ಈ ಅರಾಜಕತೆ ನಿಲ್ಲಿಸುವರೆಂದು ನಂಬಿರುತ್ತೇನೆ,

ಇತಿ,

ಲಿಂಗಪ್ಪ ಮೇಸ್ತ್ರಿ

ಮಲ್ಲಪ್ಪನವರು ಕಣ್ದೆರೆಯಲಿ

ಈ ಶನಿವಾರ ಸಂತೆಯ ಗುಡುಗಳಲೇ ಜಾತ್ರೆಯಲ್ಲಿ ಕಳೆದ ವರ್ಷ ಕಮ್ಯೂನಿಸ್ಟ್ ಪಾರ್ಟಿಯ ಬಹಿರಂಗ ಸಭೆ ನಡೆಯಲು ಏರ್ಪಡಿಸಿದಾಗ, ಇಲ್ಲಿಯ ಪ್ರಮುಖರಾದ ಜವಳಿ ಅಂಗಡಿ ಚನ್ನಪ್ಪನವರನ್ನೂ ಮಲ್ಲಪ್ಪನವರ ಹಿಂಬಾಲಕರು ಜಾತ್ರೆಯಲ್ಲಿ ಹೊಡೆಸಿದರು. ಆದರೂ ಮಿಾಟಿಂಗು ಬಹು ವಿಜೃಂಭಣೆಯಿಂದ ಜರಗಿತು.

ಈ ವಿಷಯ ಕಳೆದ ವರ್ಷದ ಜನವರಿ "ಜನಶಕ್ತಿ" ಸಂಚಿಕೆಯಲ್ಲಿ ಪ್ರಕಟಿಸಲಾಗಿತ್ತು ಈ ವರ್ಷ ಕೆ. ಮಲ್ಲಪ್ಪರ ಅಧ್ಯಕ್ಷತೆಯಲ್ಲಿ ಬಹುಮಾನ ವಿನಿಯೋಗಿಸಬೇಕೆಂದಿದ್ದರು. ಆದರೆ 28—12—57ರಲ್ಲಿ ನಡೆದ ಜಾತ್ರೆಯ ಸಭೆಯಲ್ಲಿ ಕರ್ನಾಟಕ ರಾಜ್ಯ ಉಪಮಂತ್ರಿಯವರಾದ ವಿರೇಂದ್ರ ಪಟೇಲರು ಅಧ್ಯಕ್ಷತೆ ವಹಿಸಿ ಬಹುಮಾನ ವಿನಿಯೋಗಿಸಿದರು. ಎಚ್. ಮಲ್ಲಪ್ಪನವರು ಪೆಚ್ಚುಮೋರೆ ಹಾಕಿಕೊಂಡು ಕುಳಿತಿದ್ದರು.

ಆದರೆ ಇನ್ನೊಂದು ರಹಸ್ಯ ವಿಷಯ. ನಮ್ಮ ಈ ಜಾತ್ರೆಗೆ, ಮೈಸೂರು ಮಾಜಿ ಮಂತ್ರಿಗಳಾದ ಕೆ. ಹನುಮಂತಯ್ಯನವರನ್ನು ಜಾತ್ರೆ ಕಮಿಟಿಯವರು ಆಹ್ವಾನಿಸಿದ್ದರು. ಅವರು ಬರಲು ಒಪ್ಪಿದ್ದರು. ಆದರೆ ಕೆ. ಮಲ್ಲಪ್ಪನವರು, ಹನುಮಂತಯ್ಯನವರನ್ನು ಕರೆಸಿದರೆ ನಾನು ಬರುವುದಿಲ್ಲ ಮತ್ತು ಶನಿವಾರ ಸಂತೆಗೆ ಒದಗುವ ನಲ್ಲಿ ಕೆಲಸ, ಲೈಟು ಕೆಲಸವನ್ನು ಅಲ್ಲಿಗೆ ನಿಲ್ಲಿಸುತ್ತೇನೆಂದು ಹೆದರಿಸಿ ಜಾತ್ರೆ ಕಮಿಟಿಯವರಿಗೆ ಕಾಗದ ಬರೆದಿರುವರಂತೆ.

ಆದರೆ ಮಲ್ಲಪ್ಪನವರ ಪೋಲಿಸ್ ರಾಜ್ಯ ಹಿಂದೇಯೇ ಮುಗಿಯಿತು ಎಂಬುದನ್ನು ಅವರ ಹಿಂಬಾಲಕರು ಮರೆತಿಲ್ಲವಲ್ಲ! ಅಯ್ಯೋ ಪಾಪ ಎನ್ನಿಸುತ್ತದೆ. ಇನ್ನು ಮುಂದಾದರೂ ಮಲ್ಲಪ್ಪನವರು ತಮ್ಮ ದರ್ಪ, ದಬ್ಬಾಳಿಕೆ ನಿಲ್ಲಿಸಲಿ. ಅವರು ಅವರ ಹಿಂಬಾಲಕರಿಗೆ ಒಳ್ಳೆಯ ನಡತೆಗಳನ್ನು ಕಲಿಸಿಕೊಡಲಿ.

ಇತಿ, ಎಸ್. ಸಂತೆವಾಲ

ರೈತರಂಗ

ಹುಣಸೂರಿನಲ್ಲಿ ಪ್ರಾಂತ ರೈತಸಂಘದ ಶಾಖೆ

ಹುಣಸೂರು ರೈತ ಸಹಕಾರ ಸಂಘದ ಕಾರ್ಯಕಾರಿ ಸಮಿತಿಯು ಸಭೆಯು ತಾ॥ 6—1—58ರಂದು ಶ್ರೀ ಹೆಚ್. ಎಂ. ಮೈಲಾರಯ್ಯನವರ ಅಧ್ಯಕ್ಷತೆಯಲ್ಲಿ ಸೇರಿ ಈ ಕೆಳಗಿನ ತೀರ್ಮಾನಗಳನ್ನು ಮಾಡಲಾಗಿದೆ.

1. ಹುಣಸೂರು ರೈತ ಸಹಕಾರ ಸಂಘವನ್ನು ಕರ್ನಾಟಕ ಪ್ರಾಂತ ರೈತ ಸಂಘ, ಹುಣಸೂರು ಶಾಖೆ ಎಂಬುದಾಗಿ ಬದಲಾಯಿಸುವುದು ಮತ್ತು ಪ್ರಾಂತ ರೈತ ಸಂಘದ ಸದಸ್ಯರನ್ನಾಗಿ ಹುಣಸೂರು ಶಾಖೆಗೆ ಸದಸ್ಯರನ್ನು ಸೇರಿಸುವ ಕೆಲಸವನ್ನು ಆರಂಭಿಸುವುದು.

2. ಇದೇ ಫೆಬ್ರವರಿ ಎರಡನೆಯ ವಾರದಲ್ಲಿ ತಾಲೂಕು ರೈತ ಸಮ್ಮೇಳನವನ್ನು ಕರೆಯುವುದು ಮತ್ತು ಅದರ ಬಗ್ಗೆ ಒಂದು ಸ್ವಾಗತ ಸಮಿತಿಯನ್ನು ರಚಿಸಿ ತಯಾರಿಯ ಕೆಲಸವನ್ನು ಆರಂಭಿಸುವುದು.

3. ಹುಣಸೂರು ತಾಲೂಕು ರೈತ ಸಮ್ಮೇಳನ ಜರಗಿಸಲು ಶ್ರೀಗಳಾದ ಹೆಚ್ ಆರ್. ಟಿ. ರಾಜಗೋಪಾಲ ಮೊದಲಿಯಾರ್, ಮೈಲಾರಯ್ಯ ಮತ್ತು ಇಬ್ರಾಹಿಂ ಸಾಹೇಬರು (ಅಧ್ಯಕ್ಷರುಗಳು). ಶ್ರೀಗಳಾದ ಅನಂತಶೆಟ್ಟಿ, ಮುನಿಸ್ವಾಮಯ್ಯ ಮತ್ತು ನಂಜುಡಶೆಟ್ಟಿ (ಉಪಾಧ್ಯಕ್ಷರುಗಳು). ಶ್ರೀಗಳಾದ ಡಾ। ಬಿ. ವಿ. ರಾಮರಾವ್ ಸಿಂಧೆ ಹೆಚ್. ಹೆಚ್. ನಂಜುಡಸ್ವಾಮಿ ಶೆಟ್ಟಿ ಮತ್ತು ಕೆ. ಎಲ್. ಕಾಶಿಯಪ್ಪ (ವ್ಯವಸ್ಥಾಪಕ ಕಾರ್ಯದರ್ಶಿಗಳ) ಇವರನ್ನೊಳಗೊಂಡ ಸ್ವಾಗತ ಸಮಿತಿಯನ್ನು ಆರಿಸಲಾಗಿದೆ.

4. ಸಮ್ಮೇಳದ ಬಗ್ಗೆ ರೈತ ಬಾಂಧವರಿಂದ ಸಹಾಯ ಸಂಗ್ರಹಿಸಬೇಕೆಂದೂ, ಸ್ವಾಗತ ಸಮಿತಿಯ ಸದಸ್ಯತನದ ಶುಲ್ಕ ರೂ. 10 ಮತ್ತು ಪ್ರತಿನಿಧಿ ಶುಲ್ಕ ರೂ. 2 ಇರಬೇಕೆಂದೂ ನಿರ್ಣಯವಾಯಿತು. ಸ್ವಾಗತ ಸಮಿತಿಯ ಕಛೇರಿಯನ್ನು ಸರ್ವೋದಯ ಔಷಧಾಲಯದ ಮಹಡಿಯಲ್ಲಿ ತೆರೆಯಲು ತೀರ್ಮಾನವಾಯಿತು.

5. ಕರ್ನಾಟಕ ಪ್ರಾಂತ ರೈತ ಸಂಘದ ಆದೇಶದಂತೆ ಅಖಿಲ ಭಾರತ ಕಿಸಾನ ಸಭೆಯ ಧ್ವಜವನ್ನು ಉಪಯೋಗಿಸಲು ತೀರ್ಮಾನವಾಯಿತು.

ಬಾಗೇಪಳ್ಳಿ ತಾಲೂಕು ರೈತ ಸಂಘದ ಮನವಿ

ಬಾಗೇಪಳ್ಳಿ ತಾಲ್ಲೂಕು ಜೋಡಿ ಮುದ್ದಲಪಳ್ಳಿ ಗ್ರಾಮದ ಜೋಡಿದಾರರಾದ ಶ್ರೀ ಪೆದ್ದ ವೆಂಕ್ಟಸುಬ್ಬಾ ರೆಡ್ಡಿ ಎಂಬವರು

(೧೦ನೇ ಪುಟ ನೋಡಿ)

ವಿಶ್ವಾಸ-ಅವಿಶ್ವಾಸಗಳ ನಡುವೆ ನಿಜಲಿಂಗಪ್ಪನವರ ಸರಕಾರ

ಚುನಾವಣೆಗಳ ನಂತರ ಅಧಿಕಾರ ವಹಿಸಿಕೊಂಡ ನಿಜಲಿಂಗಪ್ಪನವರ ಸರಕಾರ ಇಂದು ವಿಶ್ವಾಸ-ಅವಿಶ್ವಾಸಗಳ ನಡುವೆ ತೂಗಾಡುತ್ತಿದೆ. ನಾಯಕರ ಚುನಾವಣೆಯಲ್ಲಿ ತಮಗೆ ಬೆಂಬಲವಿತ್ತವರೇ ಇಂದು ಕೈಕೊಡುತ್ತಿದ್ದಾರೆ. ಕಾಂಗ್ರೆಸ್ ಪಾರ್ಲಿಮೆಂಟರಿ ಪಕ್ಷಕ್ಕೂ ಕಾಂಗ್ರೆಸ್ ಸಂಸ್ಥೆಗೂ ನಡುವೆ ತೀವ್ರವಾದ ಭಿನ್ನಾಭಿಪ್ರಾಯಗಳು ತಲೆದೋರಿವೆ.

ಪ್ರದೇಶ ಕಾಂಗ್ರೆಸ್ ಸಮಿತಿಯು ಸರಕಾರ ಆಡಳಿತದ ಪ್ರತಿಯೊಂದು ಕಾರ್ಯದಲ್ಲೂ ಪ್ರವೇಶಿಸಿ ದೈನಂದಿನ ಕಾರ್ಯಗಳಿಗೆ ಅಡ್ಡಿಯಾಗಿದೆ ಎಂದು ನಿಜಲಿಂಗಪ್ಪನವರು ಢೇಬರರಿಗೆ ದೂರುಕೊಟ್ಟಿದ್ದಾರೆಂದು ವದಂತಿ ಇದೆ. ಈ ತಿಂಗಳ ಮೊದಲ ವಾರದಲ್ಲಿ ಪ್ಲಾನಿಂಗ್ ಕಮಿಷನ್ನಿನ ಭೇಟಿಗೆ ಹೋಗಿದ್ದಾಗ ಮುಖ್ಯಮಂತ್ರಿಗಳು ಕಾಂಗ್ರೆಸ್ ಹೈಕಮಾಂಡಿನೊಂದಿಗೆ ಈ ವಿಷಯ ಚರ್ಚಿಸಿದ್ದಾರೆಂದೂ, ನಿಜಲಿಂಗಪ್ಪನವರ ಆರೋಪವನ್ನು ಪುಷ್ಟೀಕರಿಸಿ ಒಳಾಡಳಿತ ಸಚಿವ ಪೂಣಚ್ಚ, ಆರೋಗ್ಯ ಶಾಖಾ ಸಚಿವ ಆರ್. ಎಂ. ಪಾಟೀಲ್ ಮತ್ತು ಪಬ್ಲಿಕ್ ವರ್ಕ್ಸ್ ಸಚಿವ ವೀರಣ್ಣಗೌಡರೂ ದೂರು ಕೊಟ್ಟಿದ್ದಾರೆಂದು ತಿಳಿದು ಬಂದಿದೆ.

ಗುಂಪಿನ ಪ್ರಾಬಲ್ಯ ಹೆಚ್ಚಿದೆ

ನಿಜಲಿಂಗಪ್ಪನವರ ವಿರುದ್ಧವಿರುವ ಗುಂಪು ತನ್ನ ಪ್ರಾಬಲ್ಯವನ್ನು ಹೆಚ್ಚಿಸಿಕೊಂಡಿದೆ. ಅಧ್ಯಕ್ಷ ಚನ್ನಯ್ಯನವರೂ ಮಾಜೀ ಮೈಸೂರಿನ ಮುಖ್ಯಮಂತ್ರಿ ಹನುಮಂತಯ್ಯನವರೂ ಈಗ ಒಂದುಗೂಡಿದ್ದಾರೆ. ಈ ಎರಡು ಗುಂಪುಗಳವರೂ ತಮ್ಮ ತಮ್ಮ ವೈಮನಸ್ಯಗಳನ್ನು ಬದಿಗಿರಿಸಿ ನಿಜಲಿಂಗಪ್ಪನವರನ್ನು ಅಧಿಕಾರದಿಂದ ಉರುಳಿಸುವುದೇ ಮುಖ್ಯ ಗುರಿಯನ್ನಾಗಿರಿಸಿಕೊಂಡಿದ್ದಾರೆ. ಮಂತ್ರಿಮಂಡಲದ ಮೇಲೆ ದೊಡ್ಡದಾದ ಆರೋಪಗಳೇನೂ ಇನ್ನೂ ಮಾಡದಿದ್ದರೂ ಅವಿಶ್ವಾಸ ನಿರ್ಣಯವನ್ನು ತರುವುದು ಅಗತ್ಯ ಎಂದು ನೋಡಲಾಗುತ್ತಿದೆ. ನಿಜಲಿಂಗಪ್ಪನವರ ಮಂತ್ರಿಮಂಡಲವು ಸ್ವಜನ ಪಕ್ಷಪಾತವನ್ನು ಮಾಡುತ್ತಿದೆ; ಜಾತೀಯ ರೀತಿಯಲ್ಲಿ ವರ್ತಿಸುತ್ತಿದೆ ಎಂಬ ಆರೋಪಗಳು ಇವೆ. ದಸರಾ ಪ್ರಕರಣದಲ್ಲಿ ಮುಖ್ಯಮಂತ್ರಿಗಳಿಗೂ ರಾಜ್ಯಪಾಲರಿಗೂ ನಡುವೆ ಆದ ವಾಗ್ವಾದವನ್ನು ಚನ್ನಯ್ಯನವರು ಚೆನ್ನಾಗಿ ಬಳಸಿಕೊಂಡಿದ್ದಾರೆ.

ನಿಜಲಿಂಗಪ್ಪನವರ ಮಂತ್ರಿಮಂಡಲದಲ್ಲಿ ಹೆಚ್ಚಿನ ಶಾಸನ ಸಭಾ ಸದಸ್ಯರಿಗೆ ವಿಶ್ವಾಸವಿಲ್ಲದಿರುವುದರಿಂದ, ಅವಿಶ್ವಾಸ ನಿರ್ಣಯ ತರಲು ಅವಕಾಶವೀಯಬೇಕೆಂದು ಒತ್ತಾಯ ಮಾಡಲಾಗುತ್ತಿದೆ. ಜತ್ತಿಸಮಿತಿಯ ವರದಿಯಲ್ಲಿನ ಶಿಫಾರಸುಗಳು ಯಾವ ಬಗೆಯ ಭೂಸುಧಾರಣೆಯನ್ನೂ ಸಹ ವಿರೋಧಿಸುತ್ತಿರುವ ಕಾಂಗ್ರೆಸ್ಸಿಗರಲ್ಲಿ ಪ್ರಬಲವಾದ ವಿರೋಧವನ್ನು ತಂದಿದೆ. ಇವರೆಲ್ಲಾ ಇಂದು ಮಂತ್ರಿ ಮಂಡಲವನ್ನು ಬದಲಿಸಲು ಪ್ರಯತ್ನಿಸುತ್ತಿದ್ದಾರೆ.

"ಶುಂಟಿ ಗುಂಪು"

ಅಖಿಲ ಭಾರತ ಕಾಂಗ್ರೆಸ್ಸಿನಲ್ಲಿ ನೂತನವಾಗಿ ಏರ್ಪಟ್ಟಿರುವ 'ಕಾಂಗ್ರೆಸ್ ಸೋಷಲಿಸಂ ಶುಂಟಿಗುಂಪಿನ' ಅಂಗವಾಗಿ ಮೈಸೂರು ಕಾಂಗ್ರೆಸ್ಸಿನಲ್ಲೂ ಅದರ ಅವತಾರವನ್ನು ಸೃಷ್ಟಿಸಲು ತೀವ್ರ ಯತ್ನಗಳಾಗುತ್ತಿವೆ. ಹಿಂದೆ ಮುಖ್ಯಮಂತ್ರಿ ಪದವಿಗಾಗಿ ಶ್ರಮಿಸುತ್ತಿದ್ದ ಹಳೆ ಮೈಸೂರಿನಲ್ಲಿ ಅಲ್ಪಕಾಲ ಮುಖ್ಯ ಮಂತ್ರಿಗಳಾಗಿದ್ದ ಕಡಿದಾಳ ಮಂಜಪ್ಪನವರು ಈ ಕಾರ್ಯ ಕೈಗೊಳ್ಳುವರೆಂದು ತಿಳಿದುಬಂದಿದೆ. ಇದರಿಂದ ಕಡಿದಾಳ ಮಂಜಪ್ಪನವರಿಗೆ ತಮ್ಮ ಹಳೇ ಹಗೆತನವನ್ನು ಬಹಿರಂಗವಾಗಿ ತೀರಿಸಿಕೊಳ್ಳಲು ಅನುಕೂಲವಾಗುತ್ತದೆ. ಈ ಗುಂಪು ಇನ್ನೂ ಅವತಾರಕ್ಕೆ ಬಂದಿಲ್ಲದಿರುವುದರಿಂದ ಯಾವ ಯಾವ ಮಹನೀಯರು ಸೇರಿಕೊಳ್ಳುವರೆಂಬುದು ನೋಡಬೇಕಾದಿದೆ.

ಗೌಹಾತಿ ಅಧಿವೇಶನದಲ್ಲಿ

ಮುಂಬರಲಿರುವ ಅಖಿಲ ಭಾರತ ಕಾಂಗ್ರೆಸ್ ಸಮಿತಿ ಅಧಿವೇಶನದ ವರೆಗೆ ಈ ಪ್ರಶ್ನೆಯನ್ನು ಮುಂದೂಡಬೇಕೆಂದು ಹೈಕಮಾಂಡ್ ಪ್ರದೇಶ ಕಾಂಗ್ರೆಸ್ ನಾಯಕರುಗಳಿಗೆ ತಿಳಿಸಿದೆ. ಗೌಹಾತಿಯಲ್ಲಿ ನಡೆಯುವ ಈ ಅಧಿವೇಶನದಲ್ಲಿ ಈ ಪ್ರಶ್ನೆಯನ್ನು ವಿಶೇಷವಾಗಿ ಪರಿಶೀಲಿಸಿ, ಕಾಂಗ್ರೆಸ್ ಸಂಸ್ಥೆಗೂ ಪಾರ್ಲಿಮೆಂಟರೀ ಪಕ್ಷಕ್ಕೂ ಇರಬೇಕಾದ ಸಂಬಧವನ್ನು ನಿರೂಪಿಸುವುದಾಗಿ ತಿಳಿದು ಬಂದಿದೆ. ಗೌಹಾತಿ ಅಧಿವೇಶನ ಸಮಯದೊಳಗೆ ಮಂತ್ರಿಮಂಡಲದ ಮೇಲೆ ಅವಿಶ್ವಾಸವನ್ನು ತರಲು ಸಾಕಷ್ಟು ಪುರಾವೆಗಳನ್ನು ಒದಗಿಸಿಕೊಳ್ಳಲು ಯತ್ನಗಳಾಗುತ್ತಿವೆ.

ವಿರೋಧ ಪಕ್ಷದ ಸ್ವತಂತ್ರರಿಂದ ಅವಿಶ್ವಾಸ ನಿರ್ಣಯ

ಮುಂದೆ ಫೆಬ್ರವರಿ ತಿಂಗಳಲ್ಲಿ ಕೂಡಲಿರುವ ಶಾಸನ ಸಭಾಧಿವೇಶನ ಸಮಯದಲ್ಲಿ ವಿರೋಧಪಕ್ಷದಲ್ಲಿರುವ ಸ್ವತಂತ್ರರು ಮಂತ್ರಿಮಂಡಲದ ಮೇಲೆ ಅವಿಶ್ವಾಸ ನಿರ್ಣಯಕ್ಕೆ ಸಹಿಹಾಕಿದ್ದಾರಾಗಿ ವದಂತಿಯಿದೆ. ಕಾಂಗ್ರಸ್ಸಿನಲ್ಲಿರುವ ಮಂತ್ರಿಮಂಡಲ ವಿರೋಧವಿರುವ ಗುಂಪು ಈ ಅವಿಶ್ವಾಸ ನಿರ್ಣಯದ ಹಿಂದೆ ಇರುವರೆಂದೂ, ಅದಕ್ಕೆ ಕುಮ್ಮಕ್ಕು ಕೊಡುತ್ತಿರುವರೆಂದು ತಿಳಿದು ಬಂದಿದೆ.

ನಿಜಲಿಂಗಪ್ಪನವರ ಸರಕಾರಕ್ಕೆ ಈ ಅವಿಶ್ವಾಸ ನಿರ್ಣಯಗಳ, ಒಳಗುಂಪುಗಳ ಹಾವಳಿಯಲ್ಲಿ ಉಳಿವಿಲ್ಲವಾಗಿದೆ.

ರೈತ ರಂಗ

(೯ನೇ ಪುಟದಿಂದ)

(ಇವರು ಆಂಧ್ರ ಪ್ರಾಂತದ ಚೆನ್ನರಾಯನಪಲ್ಲಿಯ ನಿವಾಸಿಗಳಾಗಿದ್ದಾರೆ) ಈ ಗ್ರಾಮದಲ್ಲಿ ರೈತರು ನೆಟ್ಟು ಬೆಳೆಸಿರುವಂಥ ಫಲಬಿಡುವ 1000ಕ್ಕೂ ಮೇಲ್ಪಟ್ಟಿರುವ ಮರಗಳನ್ನು ಬಲಾತ್ಕಾರದಿಂದ ಕಡಿದು ಲಾರಿ-ಟ್ರಕ್ಕುಗಳಲ್ಲಿ ಹೇರಿ ಬೆಂಗಳೂರಿಗೆ ಸಾಗಿಸುತ್ತಿದ್ದಾರೆ. ಇದನ್ನು ರೈತರು ವಿರೋಧಿಸಿದಾಗ ರೈತರ ಮೇಲೆ ಪುಂಡರ ಮುಖಾಂತರ ದಬ್ಬಾಳಿಕೆ ನಡೆಸುತ್ತಿದ್ದಾರೆ. ಈ ವಿಚಾರವನ್ನು ಸ್ಥಳೀಯ, ಜಿಲ್ಲಾ ಹಾಗು ಪ್ರಾಂತ ಅಧಿಕಾರಿಗಳ ಗಮನಕ್ಕೆ ತರಲಾಗಿದೆಯಾದರೂ ಅವರು ಏನೊಂದು ಕ್ರಮ ವಹಿಸುವುದಿಲ್ಲ. ಆದುದರಿಂದ ಸರಕಾರವು ಕೂಡಲೆ ಈ ಜೋಡಿದಾರರ ದೌರ್ಜನ್ಯವನ್ನು ನಿಲ್ಲಿಸಬೇಕೆಂದೂ, ಮರ ಕಡಿಯುವುದಕ್ಕೆ ತಡೆಹಾಕಬೇಕೆಂದೂ, ಸದ್ರಿ ಜೋಡಿ ಗ್ರಾಮವನ್ನು ಜೋಡಿ ಇನಾಂ ರದ್ದಿಯಾತಿ ಕಾನೂನಿನ ಪ್ರಕಾರ ಸರಕಾರ ವಹಿಸಿಕೊಳ್ಳಬೇಕೆಂದೂ ಬಾಗೆಪಲ್ಲಿ ತಾಲೂಕು ರೈತಸಂಘದ ವತಿಯಿಂದ ಮಾನ್ಯ ರೆವಿನ್ಯೂ ಸಚಿವರಿಗೆ ಮನವಿ ಅರ್ಪಿಸಲಾಗಿದೆ. ಕರ್ನಾಟಕ ಪ್ರಾಂತ ರೈತ ಸಂಘವು ಕೂಡ ಈ ವಿಚಾರದಲ್ಲಿ ಸಂಬಂಧಪಟ್ಟ ಅಧಿಕಾರಿಗಳಿಗೂ ಮುಖ್ಯ ಮಂತ್ರಿಯವರಿಗೂ ರೆವಿನ್ಯೂ ಮತ್ತು ಗೃಹ ಮಂತ್ರಿಯವರಿಗೂ ಮನವಿ ಮಾಡಿಕೊಂಡಿರುತ್ತದೆ.

ಶ್ರೀರಂಗಪಟ್ಟಣ ತಾಲ್ಲೂಕು ರೈತರ ಜಯ

ಶ್ರೀರಂಗಪಟ್ಟಣ ತಾಲ್ಲೂಕಿನ ಕರೀಪುರದಲ್ಲಿ ಒಬ್ಬರು ಜಮೀನ್ದಾರರಿಂದ ರೈತನ ಮೇಲೆ ನಡೆದ ದೌರ್ಜನ್ಯವನ್ನು ಕುರಿತು ತಾ 5—1—58ರ ಜನಶಕ್ತಿಯಲ್ಲೊಂದು ವರದಿ ಪ್ರಕಟವಾಗಿತ್ತಷ್ಟೆ! ಅನಂತರ ರೈತ ಸಂಘದ ಪರಿಶ್ರಮದ ಫಲವಾಗಿ ಜಮೀನ್ದಾರರು ರೈತನಿಗೆ ರೂ 300 ಪರಿಹಾರಕೊಟ್ಟದಲ್ಲದೆ ಜಮೀನನ್ನು ತಿರುಗಿ ರೈತನಿಗೇ ಕೊಟ್ಟಿರುವುದಾಗಿ ತಿಳಿಸಲು ಸಂತೋಷಪಡುತ್ತೇವೆ.

ಅದೇ ಗ್ರಾಮದ ಮತ್ತೊಬ್ಬ ಜಮೀನ್ದಾರರೂ ಐದು ರೈತರನ್ನು ಹೊಲದಿಂದ ಹೊರಹಾಕಿದ್ದು, ರೈತಸಂಘದ ಮಧ್ಯಸ್ಥಿಕೆಯಿಂದ ಆ ರೈತರಿಗೆಲ್ಲ ಜಮೀನನ್ನು ತಿರುಗಿ ಕೊಡಲು ಜಮೀನ್ದಾರರು ಒಪ್ಪಿಕೊಂಡಿರುತ್ತಾರೆ. ಈ ಜಯಕ್ಕೋಸ್ಕರ ರೈತಸಂಘಕ್ಕೆ ನೆರವಾದ ರೈತ ಬಾಂಧವರನ್ನು ಅಭಿನಂದಿಸುವುದಲ್ಲದೆ ಸಂಬಂಧಪಟ್ಟ ಜಮೀನ್ದಾರರುಗಳಿಗೂ ಕರ್ನಾಟಕ ಪ್ರಾಂತ ರೈತ ಸಂಘವು ಕೃತಜ್ಞತೆ ಸಲ್ಲಿಸುತ್ತದೆ.

ಹೊಳೆ ಹನಸವಾಡಿ ರೈತಸಂಘದ ಸಭೆ

ಶಿವಮೊಗ್ಗ ಜಿಲ್ಲೆಯಲ್ಲಿ ರೈತ ಸಂಘದ ಕಾರ್ಯಾರಂಭವು ಇದೇ ತಿಂಗಳ ತಾ. 12 ರಂದು ಹೊಳೆಹನಸವಾಡಿಯಲ್ಲಿ ರೈತಸಂಘ ಸ್ಥಾಪನೆಯೊಡನೆ ಜರಗಿತು.

ಚಿತ್ರದುರ್ಗ ಜಿಲ್ಲಾ ರೈತ ಕಾರ್ಯಕರ್ತರೂ, ತರುಣ ನ್ಯಾಯವಾದಿಗಳೂ ಆದ ಶ್ರೀ ಹೆಚ್. ಹನುಮಂತ ರೆಡ್ಡಿಯವರು ರೈತಸಂಘವನ್ನು ಉದ್ಘಾಟಿಸಿದರು. ನಗರದ ತರುಣ ನ್ಯಾಯವಾದಿ ಶ್ರೀ ಬಿ. ಎನ್. ಎ. ಹೆಗ್ಡೆಯವರು ಅಧ್ಯಕ್ಷತೆ ವಹಿಸಿದ್ದರು. ಸ್ವಾಗತ ಗೀತೆ, ಪ್ರಾರ್ಥನೆಯ ನಂತರ ಬಿನ್ನವತ್ತಳೆಯನ್ನು ಶ್ರೀ ಪಾಲಾಕ್ಷಯ್ಯನವರು ಓದಿದರು.

ಶ್ರೀ ಹೆಚ್. ಹನುಮಂತ ರೆಡ್ಡಿಯವರು ರೈತಸಂಘವನ್ನು ಉದ್ಘಾಟನೆ ಮಾಡುತ್ತಾ ಕಾಗೋಡು ಹೋರಾಟದ ಸವಿಯನ್ನುಂಡ ಈ ಜಿಲ್ಲೆಯ ರೈತರು ವೀರ ಹೋರಾಟಗಾರರು ಎಂದು ತಿಳಿಸಿದರು.

ಹತ್ತು ವರ್ಷಗಳ ಸ್ವತಂತ್ರ ಭಾರತದಲ್ಲಿ ಹಲವಾರು ಯೋಜನೆಗಳು ಬಂದರೂ ನಾವುಗಳು ಆಹಾರ ವಿಷಯದಲ್ಲಿ ಸ್ವಯಂ ಸಂಪೂರ್ಣತೆಯನ್ನು ಗಳಿಸಲು ಸಾಧ್ಯವಾಗಿಲ್ಲ. ಅನೇಕ ಬಂಡವಾಳಗಾರರು ದುಡಿದ ರೈತನ ಬೆಳೆಯನ್ನು ದಾಸ್ತಾನು ಮಾಡಿ ಮಾರುಕಟ್ಟೆಯಲ್ಲಿ ಆಹಾರದ ಬೆಲೆಯನ್ನು ಏರಿಸಿ ಅಭಾವ ವಾತಾವರಣವನ್ನು ತಂದಿದ್ದಾರೆ. ಆದ್ದರಿಂದ ರೈತರು ತಮ್ಮ ಹಳ್ಳಿಗಳಲ್ಲೇ ಸಹಕಾರಿ ಸಂಘಗಳನ್ನು ಸ್ಥಾಪಿಸಿಕೊಂಡು ಬೆಳೆದ ಬೆಳೆಗೆ ಒಂದು ಉತ್ತಮ ರೀತಿಯ ಬೆಲೆಯನ್ನು ಹೊಂದಲು ಪ್ರಯತ್ನಿಸಬೇಕೆಂದರು.

30 ವರ್ಷಗಳ ಹಿಂದೆಯೇ ಕಮ್ಯೂನಿಸ್ಟ್ ಪಕ್ಷ ಸಮಾಜವಾದ ಬೇಕು ಅಂದಾಗ ನಕ್ಕ ಕಾಂಗ್ರೆಸಿಗರು ಆವಡಿಯಲ್ಲಿ ಅರೆ ಬೆಂದ ಖೋಟಾ ಸಮಾಜವಾದಿ ರಾಷ್ಟ್ರವನ್ನು ನಿರ್ಮಿಸಲು ಪಣತೊಟ್ಟರು. ಇವರ ಸಮಾಜವಾದದಲ್ಲಿ ರಾಷ್ಟ್ರದ ಆದಾಯ ಶೇಕಡ 18ರಷ್ಟು ಹೆಚ್ಚಿದರೂ ಜನತೆಗೆ ಕೊಳ್ಳುವ ಶಕ್ತಿ ಹೆಚ್ಚಿಲ್ಲ. ಬಂದ ಲಾಭವೆಲ್ಲಾ ಬಂಡವಾಳಗಾರರ ಬೊಕ್ಕಸಕ್ಕೆ ಹೋಗಿದೆ. ಇದೇ ಏನು ಕಾಂಗ್ರೆಸ್ಸಿನ ಸಮಾಜವಾದ ಧ್ಯೇಯ ಎಂದು ಕೇಳಿದರು.

ಅಧ್ಯಕ್ಷತೆ ವಹಿಸಿದ್ದ ಶ್ರೀ ಬಿ. ಎನ್. ಎಸ್. ಹೆಗ್ಗಡೆಯವರು ಜತ್ತಿ ಸಮಿತಿಯನ್ನು ಪ್ರಸ್ತಾಪಿಸಿ ಭೂಮಿಯ ಪುನರ್ ಹಂಚಿಕೆಯನ್ನು ಸಮಾಧಾನಕರವಾಗಿ ಬಗೆಹರಿಸಲು ಸರಕಾರ ಜತ್ತಿ ಸಮಿತಿಯನ್ನು ನೇಮಿಸಿದೆ. ಇದು ರೈತರ ದೃಷ್ಟಿಯಿಂದ ಅಷ್ಟೊಂದು ಪ್ರಗತಿಪರ ವರದಿಯಲ್ಲ. ಹಿಡುವಳಿದಾರರಿಗೂ, ರೈತರಿಗೂ ನಿಕಟವಾದ ದ್ವೇಷ ತರುವ ವರದಿಯಾಗಿದೆ. ಆದಕ್ಕೆ ದೇಶದ ಎಲ್ಲಾ ಹಿಡುವಳಿಗಾರರೂ ಸಮ್ಮೇಳನ ನಡೆಸಿ, ಇದನ್ನು ವಿರೋಧಿಸುತ್ತಿದ್ದಾರೆ.

ಆದ್ದರಿಂದ ಇಂದು ರೈತರೆಲ್ಲ ಸಂಘಗಳನ್ನು ಸ್ಥಾಪಿಸಿಕೊಂಡು, ತಮ್ಮ ನಿರ್ದಿಷ್ಟ ಅಭಿಪ್ರಾಯವನ್ನು ಸರಕಾರಕ್ಕೆ ತಿಳಿಸಬೇಕು. ಕಮ್ಯೂನಿಸ್ಟ್ ಪಕ್ಷ ರೈತರ ನೆರವಿಗೆ ಬರಲು ಸದಾ ಕಾಲ ಸಿದ್ಧವಿದೆ ಎಂದರು.

ವಂದನಾರ್ಪಣೆಯೊಡನೆ ಸಭೆ ಮುಕ್ತಾಯವಾಯಿತು. ಶಿವಮೊಗ್ಗೆಯಿಂದ ಹಲವಾರು ಕಮ್ಯೂನಿಸ್ಟ್ ಕಾರ್ಯಕರ್ತರು ಈ ಸಭೆಯಲ್ಲಿ ಭಾಗವಹಿಸಿದ್ದು ಅಕ್ಕಪಕ್ಕದ ಗ್ರಾಮದಿಂದ ನೂರಾರು ರೈತರು ಈ ಸಮ್ಮೇಳನಕ್ಕೆ ಆಗಮಿಸಿದ್ದರು

REG. No. M. 6867

Edited Printed and Published by C. R. Krishna Rao, at Janashakthi Printers
L—59, K. V. Temple St., Sultanpet Bangalore - 2
phone 3810